ಶ್ರೀ ಚೈತನ್ಯ ಮಹಾಪ್ರಭುಗಳ

# ಶಿಕ್ಷಾಷ್ಟಕಮ್



ಭಾವಾರ್ಥ - ಸ್ವಾಮಿ ಭಕ್ತಿರಕ್ಷಕ ಶ್ರೀಧರ

ಶ್ರೀ ಚೈತನ್ಯ ಮಹಾಪ್ರಭುಗಳ

# ಶಿಕ್ಷಾಷ್ಟಕಮ್

ಭಾವಾರ್ಥ

ಶ್ರೀಲ ಶ್ರೀಧರದೇವ ಗೋಸ್ವಾಮಿ ಮಹಾರಾಜ

GOSAI
PUBLISHERS

| | | |
|---|---|---|
| ಶ್ರೀ ಶಿಕ್ಷಾಷ್ಟಕಮ್ | – | ಕನ್ನಡ ಪುಸ್ತಕ |
| ಸಂಸ್ಕೃತ ಮೂಲ | – | ಶ್ರೀ ಚೈತನ್ಯ ಮಹಾಪ್ರಭು |
| ಆಂಗ್ಲ ಭಾವಾರ್ಥ | – | ಶ್ರೀಲ ಶ್ರೀಧರ ದೇವ ಗೋಸ್ವಾಮಿ ಮಹಾರಾಜ |
| ಪ್ರಕಾಶಕರು | – | ಗೋಸಾಯಿ ಪಬ್ಲಿಷರ್ಸ್ |



**ಶ್ರೀ ನರಸಿಂಘ ಚೈತನ್ಯ ಆಶ್ರಮ, ದೊಡ್ಡ ಗೋಸಾಯಿ ಘಟ್ಟ,**

**ಗಂಜಾಮ್, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ – ೫೭೧ ೪೩೮**

Email : gosai.secretary@gmail.com

www.gosai.com


ಈ ಪುಸ್ತಕದ ವಿಷಯದಲ್ಲಿ ಅಥವಾ ನಮ್ಮ ಪ್ರಕಾಶನದ ಇತರ ಪುಸ್ತಕಗಳಲ್ಲಿ ಆಸಕ್ತಿಯುಳ್ಳವರು, ಕಾರ್ಯದರ್ಶಿಯವರನ್ನು ಮೇಲ್ಕಂಡ ವಿಳಾಸದಲ್ಲಿ ಪತ್ರಮುಖೇನ ಅಥವಾ ಇಮೇಲ್ ಮೂಲಕ ಸಂಪರ್ಕಿಸಬಹುದು.



| | | |
|---|---|---|
| ಕನ್ನಡ ಅನುವಾದ | : | ಚೈತನ್ಯದಾಸ |
| ಮೊದಲ ಮುದ್ರಣ | : | ಒಂದು ಸಾವಿರ ಪ್ರತಿಗಳು |
| ಪುಟಗಳು | : | ೮೩ |
| ಬೆಲೆ | : | ೩೦/– |



© ಗೋಸಾಯಿ ಪಬ್ಲಿಷರ್ಸ್
ಹಕ್ಕುಗಳು ಪ್ರಕಾಶಕರದು


# ಪರಿವಿಡಿ


| | | |
|---|---|---|
| ಪ್ರಸ್ತಾವನೆ | : | I |
| ಶ್ಲೋಕ ಒಂದು | : | ೧ |
| ಶ್ಲೋಕ ಎರಡು | : | ೧೭ |
| ಶ್ಲೋಕ ಮೂರು | : | ೨೩ |
| ಶ್ಲೋಕ ನಾಲ್ಕು | : | ೩೫ |
| ಶ್ಲೋಕ ಐದು | : | ೪೧ |
| ಶ್ಲೋಕ ಆರು | : | ೪೭ |
| ಶ್ಲೋಕ ಏಳು | : | ೫೧ |
| ಶ್ಲೋಕ ಎಂಟು | : | ೫೭ |



ಶ್ರೀಲ ಭಕ್ತಿಗೌರವ ನರಸಿಂಘ ಮಹಾರಾಜ

(ಸಂಸ್ಥಾಪಕ, ಸೇವಾ ಆಚಾರ್ಯರು – ಶ್ರೀ ನರಸಿಂಘ ಚೈತನ್ಯ ಆಶ್ರಮ)



ಶ್ರೀಲ ಭಕ್ತಿರಕ್ಷಕ ಶ್ರೀಧರದೇವ ಗೋಸ್ವಾಮಿ ಮಹಾರಾಜ

# ಪ್ರಸ್ತಾವನೆ

ಚತುರ್ಮುಖ ಬ್ರಹ್ಮನ ಒಂದುದಿನ, ಅಂದರೆ ಈ ಜಗತ್ತಿನ ಲೆಕ್ಕಾಚಾರದಲ್ಲಿ ಒಂದು ಸಾವಿರ ಯುಗಗಳಿಗೆ ಒಮ್ಮೆ ಶ್ರೀರಾಧಾಕೃಷ್ಣರು ಏಕೀಭಾವಗೊಂಡು ಶ್ರೀ ಚೈತನ್ಯಮಹಾಪ್ರಭುಗಳ ರೂಪದಲ್ಲಿ ಈ ಧರೆಯಲ್ಲಿ ಅವತರಿಸುತ್ತಾರೆ. ಅವರ ಇತ್ತೀಚೆಗಿನ ಆವಿರ್ಭಾವವು ೧೪೦೭ನೇ ಶಕಾಬ್ದ ಅಂದರೆ ಪಾಶ್ಚಿಮಾತ್ಯ ಪಂಚಾಂಗದ ಪ್ರಕಾರ ೧೪೮೬ನೇ ಇಸವಿಯಲ್ಲಿ ಜರುಗಿತು. ಪಶ್ಚಿಮ ಬಂಗಾಲದ ನದಿಯಾ ಪ್ರಾಂತ್ಯದಲ್ಲಿ ಪ್ರಖ್ಯಾತ ಬ್ರಾಹ್ಮಣಪಂಡಿತರಾಗಿದ್ದ ಜಗನ್ನಾಥ ಮಿಶ್ರರ ಪುತ್ರನಾಗಿ ಶ್ರೀ ಚೈತನ್ಯ ಮಹಾಪ್ರಭು ಅವತರಿಸಿದರು. ಅವರ ತಾಯಿ ಶ್ರೀಮತಿ ಶಚಿದೇವಿಯವರು. ಪ್ರಕಟಿತ ಶಾಸ್ತ್ರಗಳಲ್ಲಿ, ವಿಶೇಷವಾಗಿ ಶ್ರೀಮದ್ಭಾಗವತಪುರಾಣದಲ್ಲಿ, ಅವರ ಆವಿರ್ಭಾವದ ಬಗ್ಗೆ ಉಲ್ಲೇಖವಿದೆ.

ಕೃಷ್ಣವರ್ಣಂ ತ್ವಿಷಾऽಕೃಷ್ಣಮ್ ಸಾಂಗೋಪಾಂಗಾಸ್ತ್ರಪಾರ್ಶದಮ್ ।
ಯಜ್ಞೈಃ ಸಂಕೀರ್ತನ ಪ್ರಾಯೈಃ ಯಜಂತಿ ಹಿ ಸುಮೇಧಸಃ ॥

ಕಲಿಯುಗದಲ್ಲಿ ಕೃಷ್ಣನು ಬಂಗಾರದ ಮೈಬಣ್ಣವನ್ನು ಹೊಂದಿ, ಕೃಷ್ಣ ಎಂಬ ಎರಡಕ್ಷರಗಳನ್ನು ಜಪಿಸುತ್ತಾ ಕಾಣಿಸಿಕೊಳ್ಳುತ್ತಾನೆ. ತನ್ನ ದಿವ್ಯನಾಮವನ್ನೇ ಶಸ್ತ್ರವನ್ನಾಗಿಸಿಕೊಂಡು ನಿತ್ಯಾನಂದ ಪ್ರಭು ಮತ್ತು ಅದ್ವೈತಾಚಾರ್ಯರೆಂಬ ತನ್ನ ಸಹಚರರೊಂದಿಗೆ; ಗದಾಧರ ಪಂಡಿತ, ಸ್ವರೂಪ ದಾಮೋದರ ಹಾಗೂ ರಾಮಾನಂದರಾಯರೆಂಬ ತನ್ನ ಪಾರ್ಶದ ಶಕ್ತಿಗಳೊಂದಿಗೆ ಹಾಗೂ ಶ್ರೀವಾಸ ಠಾಕೂರ, ಹರಿದಾಸ ಠಾಕೂರ, ರೂಪಗೋಸ್ವಾಮಿ ಮತ್ತು ಸನಾತನ ಗೋಸ್ವಾಮಿಗಳೆಂಬ ತನ್ನ ನಿತ್ಯ ಆತ್ಮೀಯ ಸೇವಕರೊಂದಿಗೆ ಅವತರಿಸುತ್ತಾನೆ. ಕಲಿಯುಗದ ಮನುಜರಲ್ಲಿ ಅತ್ಯಂತ ಬುದ್ಧಿವಂತರಾದವರು ಹರಿನಾಮಸಂಕೀರ್ತನೆಯನ್ನು ಮಾಡುತ್ತಾ ಅವನನ್ನು ಆರಾಧಿಸುತ್ತಾರೆ. (ಶ್ರೀಮದ್ಭಾಗವತ ೧೧–೫–೩೨).

ಭಾರತ ದೇಶದಲ್ಲಿ ಮಾತ್ರವಲ್ಲದೇ, ಈ ಭೂಮಂಡಲದ ಮೂಲೆ ಮೂಲೆಯಲ್ಲೂ, ಯುಗಧರ್ಮವಾದ ಹರಿನಾಮ ಸಂಕೀರ್ತನೆಯನ್ನು ಸ್ಥಾಪಿಸುವುದು ಶ್ರೀ ಚೈತನ್ಯರ ಜೀವನದ ಧ್ಯೇಯವಾಗಿತ್ತು. ಇನ್ನೂ ಮುಂದಕ್ಕೆ ಶ್ರೀಮದ್ಭಾಗವತವು ಹೀಗೆ ಹೇಳುತ್ತದೆ:–

ಕೃತೇ ಯದ್ಧ್ಯಾಯತೋವಿಷ್ಣುಮ್ ತ್ರೇತಾಯಾಮ್ ಯಜತೋ ಮಖೈಃ ।
ದ್ವಾಪರೇ ಪರಿಚರ್ಯಾಯಾಮ್ ಕಲೌ ತದ್ಧರಿಕೀರ್ತನಾತ್ ॥

"ಕೃತಯುಗದಲ್ಲಿ ಶ್ರೀಹರಿಯನ್ನು ಧ್ಯಾನಿಸುವಮೂಲಕ, ತ್ರೇತಾಯುಗದಲ್ಲಿ ಯಜ್ಞಯಾಗಾದಿಗಳನ್ನು ನೆರವೇರಿಸುವಮೂಲಕ, ದ್ವಾಪರ ಯುಗದಲ್ಲಿ ಶ್ರೀಕೃಷ್ಣನನ್ನು ಪೂಜಿಸುವಮೂಲಕ ಹಾಗೂ ಕಲಿಯುಗದಲ್ಲಿ ಹರಿನಾಮಕೀರ್ತನೆಯನ್ನು ಮಾಡುವುದರ ಮೂಲಕ ಆತ್ಮಸಾಕ್ಷಾತ್ಕಾರವನ್ನು ಸಾಧಿಸಬಹುದು" (ಶ್ರೀಮದ್ಭಾಗವತಪುರಾಣ ೧೨–೩–೫೨).

ತಮ್ಮ ಕೌಮಾರ್ಯದಲ್ಲೇ ಶ್ರೀ ಚೈತನ್ಯರು ತಮ್ಮ ಪಾಂಡಿತ್ಯದ ಅದ್ಭುತ ಲೀಲೆಗಳನ್ನು ಪ್ರದರ್ಶಿಸಿದರು. ಸಣ್ಣ ಬಾಲಕನಾಗಿದ್ದಾಗಲೇ ನವನ್ಯಾಯವೆಂಬ ತತ್ತ್ವಸಿದ್ಧಾಂತದಲ್ಲಿ ಪ್ರಭುತ್ವವನ್ನುಗಳಿಸಿ, ಪಾಂಡಿತ್ಯದಲ್ಲಿ ದೇಶದೆಲ್ಲೆಡೆ ದಿಗ್ವಿಜಯವನ್ನು ಸಾಧಿಸಿದ್ದ ಕಾಶ್ಮೀರದ ಕೇಶವಮಿಶ್ರ ಎಂಬ ಪಂಡಿತನನ್ನು ವಾದದಲ್ಲಿ ಸೋಲಿಸಿದರು. ಸಂಸ್ಕೃತ ವ್ಯಾಕರಣದಲ್ಲಿ ಎಷ್ಟರಮಟ್ಟಿಗೆ ಪಾಂಡಿತ್ಯವನ್ನು ಗಳಿಸಿದರೆಂದರೆ, ತಮ್ಮ ಪ್ರೌಢಾವಸ್ಥೆಯಲ್ಲೇ ತಮ್ಮದೇ ಆದ ಪಾಠಶಾಲೆಯನ್ನು ಪ್ರಾರಂಭಿಸಿದ್ದರು. ಅಂತಹ ಶ್ರೇಷ್ಠ ವಿದ್ವಾಂಸರಾಗಿದ್ದೂ, ಶ್ರೀ ಚೈತನ್ಯ ಮಹಾಪ್ರಭುಗಳು ಕೇವಲ ಎಂಟು ಶ್ಲೋಕಗಳನ್ನು ಹೊಂದಿರುವ 'ಶಿಕ್ಷಾಷ್ಟಕಮ್' ಎಂಬ ಕೃತಿಯನ್ನು ಮಾತ್ರ ಬರೆದರು

ಸಂಸ್ಕೃತ ಭಾಷೆಯಲ್ಲಿರುವ ಶಿಕ್ಷಾಷ್ಟಕಮ್‌ನ ಎಂಟು ಶ್ಲೋಕಗಳು, ಮೇಲ್ನೋಟಕ್ಕೆ ಸರಳವಾಗಿ ಕಂಡುಬಂದರೂ, ಇವು ಅತ್ಯಂತ ಗೂಢವಾದ ಉನ್ನತ ಆಧ್ಯಾತ್ಮಿಕ ತತ್ತ್ವಗಳನ್ನು ಹೊರಸೂಸುತ್ತವೆ. ಈ ಎಂಟು ಶ್ಲೋಕಗಳನ್ನು ನಾವು ಆಳವಾಗಿ ಅಭ್ಯಸಿಸಿದಾಗ, ಆಧ್ಯಾತ್ಮಿಕತೆಯ ಮೂಲತತ್ತ್ವಗಳಾದ ಸಂಬಂಧ(ಭಗವಂತನೊಂದಿಗಿನ ನಮ್ಮ ಶಾಶ್ವತ ಸಂಬಧದ ಜ್ಞಾನ), ಅಭಿಧೇಯ(ಆ ಸಂಬಂಧವನ್ನು ಪುನಃಸ್ಥಾಪಿಸುವ

ಬಗೆಗಿನ ಜ್ಞಾನ) ಮತ್ತು ಪ್ರಯೋಜನ(ಪರಮಾರ್ಥಿಕತೆಯ ಸಾಧಕನು ಅಪೇಕ್ಷಿಸುವ ಜೀವನದ ಕಟ್ಟಕಡೆಯ ಧ್ಯೇಯ) ತತ್ತ್ವಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸುವುದನ್ನು ಕಾಣಬಹುದು. ಹತ್ತೊಂಭತ್ತನೇ ಶತಮಾನದ ಶ್ರೇಷ್ಠ ವೈಷ್ಣವ ಆಚಾರ್ಯರಾದ ಶ್ರೀಲ ಭಕ್ತಿವಿನೋದ ಠಾಕೂರರು ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳ ಸಾರಾಂಶವನ್ನು ಹತ್ತು ಪ್ರಮುಖ ತತ್ತ್ವಗಳ ರೂಪದಲ್ಲಿ ವರ್ಣಿಸಿದ್ದಾರೆ.

೧) ದಿವ್ಯಜ್ಞಾನಕ್ಕೆ ಸಂಬಂಧಿಸಿದ ಮುಂದಿನ ಒಂಭತ್ತು ವಿಷಯಗಳ ಜ್ಞಾನಕ್ಕೆ ವೈದಿಕ ಗ್ರಂಥಗಳು ಮಾತ್ರ ಅಧಿಕೃತ ಪ್ರಮಾಣಗಳಾಗಿವೆ
೨) ಶ್ರೀಹರಿಯು ಸರ್ವೋತ್ತಮನು
೩) ಅವನು ಎಲ್ಲಾ ಶಕ್ತಿಗಳನ್ನು ಹೊಂದಿರುವವನು
೪) ಅವನು ಆನಂದದ ಸಾಗರವಾಗಿರುವನು
೫) ಜೀವಾತ್ಮರು ಅವನಿಂದ ಪ್ರತ್ಯೇಕಗೊಂಡ ಅವನ ಅಂಶಗಳು
೬) ಕೆಲವು ಜೀವಾತ್ಮರು ಪ್ರಕೃತಿಯ ನಿಬಂಧನೆಗಳಿಗೆ ಒಳಪಟ್ಟಿದ್ದಾರೆ
೭) ಕೆಲವು ಜೀವಾತ್ಮರು ಪ್ರಕೃತಿಯಿಂದ ಮುಕ್ತರಾಗಿರುತ್ತಾರೆ
೮) ಜೀವಾತ್ಮರನ್ನು ಒಳಗೊಂಡು ಪ್ರತಿಯೊಂದೂ ಏಕಕಾಲದಲ್ಲಿ ಶ್ರೀಹರಿಯೊಂದಿಗೆ ಏಕತೆಯನ್ನು ಮತ್ತು ಭಿನ್ನತೆಯನ್ನು ಹೊಂದಿರುತ್ತದೆ
೯) ಈ ಸಂಸಾರದಿಂದ ಮುಕ್ತಿಹೊಂದಲು ಶುದ್ಧಭಕ್ತಿಯೊಂದೇ ಪರಮಸಾಧನವು
೧೦) ಕೃಷ್ಣಪ್ರೇಮವೇ ಪ್ರತಿಯೊಬ್ಬ ಜೀವಾತ್ಮನ ಅತ್ಯುನ್ನತ ಧ್ಯೇಯವಾಗಿರುತ್ತದೆ.

**ಸ್ವಯಂ ಚೈತನ್ಯ ಮಹಾಪ್ರಭುಗಳು ಈ ಹತ್ತು ತತ್ತ್ವಗಳನ್ನು ತಮ್ಮ ಶಿಕ್ಷಾಷ್ಟಕದ ಎಂಟು ಶ್ಲೋಕಗಳಲ್ಲಿ ಕೆಳಕಂಡಂತೆ ಸಾಂದ್ರೀಕರಿಸಿದ್ದಾರೆ.**

ಮೊದಲನೇ ಶ್ಲೋಕವು ನಾಮ ಸಂಕೀರ್ತನೆಯ ಪ್ರಕ್ರಿಯೆಯನ್ನು ವಿವರಿಸುತ್ತದೆ.

ಎರಡನೆಯ ಶ್ಲೋಕವು ನಾಮಸಂಕೀರ್ತನೆಯ ಸ್ವೀಕಾರಕ್ಕೆ ಬದ್ಧಜೀವನು ತೋರುವ ಪ್ರತಿರೋಧವನ್ನು ವಿವರಿಸುತ್ತದೆ.

ಮೂರನೆಯ ಶ್ಲೋಕವು ಶ್ರೀಕೃಷ್ಣನ ನಾಮವನ್ನು ಜಪಿಸುವ ಯುಕ್ತ ವಿಧಾನವನ್ನು ವಿವರಿಸುತ್ತದೆ.

ನಾಲ್ಕನೆಯ ಶ್ಲೋಕವು ಶ್ರೀಕೃಷ್ಣನ ನಾಮವನ್ನು ಜಪಿಸಲು ಪ್ರತಿಕೂಲವಾಗುವ

ವಿಷಯಗಳನ್ನು ತ್ಯಜಿಸುವ ಅವಶ್ಯಕತೆಯನ್ನು ವಿವರಿಸುತ್ತದೆ.

ಐದನೆಯ ಶ್ಲೋಕವು ಜೀವಾತ್ಮನ ಆಧ್ಯಾತ್ಮಿಕ ಸ್ಥಾನವನ್ನು ವಿವರಿಸುತ್ತದೆ.

ಆರನೆಯ ಶ್ಲೋಕವು ಶ್ರೀಕೃಷ್ಣನ ಸಾನ್ನಿಧ್ಯಕ್ಕಾಗಿ ಹಾತೊರೆಯುವ ಜೀವಾತ್ಮನ ಮನೋಭಾವವನ್ನು ವಿವರಿಸುತ್ತದೆ.

ಏಳನೆಯ ಶ್ಲೋಕವು ಕೃಷ್ಣನಿಂದ ಆಧ್ಯಾತ್ಮಿಕ ಅಗಲಿಕೆಯ ತೀವ್ರವಿರಹದ ಮನೋಭಾವವನ್ನು ವಿವರಿಸುತ್ತದೆ.

ಎಂಟನೆಯ ಶ್ಲೋಕವು ಆಧ್ಯಾತ್ಮಿಕತೆಯ ಪರಾತ್ಪರ ಧ್ಯೇಯದಲ್ಲಿ ಒಬ್ಬ ಸಾಧಕನು ಹೇಗೆ ದೃಢನಿಶ್ಚಯದಿಂದ ಸ್ಥಿತನಾಗಿರುತ್ತಾನೆ ಎಂದು ವಿವರಿಸುತ್ತದೆ.

ಈ ಪುಸ್ತಕದಲ್ಲಿ, ಶಿಕ್ಷಾಷ್ಟಕಕ್ಕೆ, ಅನಂತ ಶ್ರೀ ವಿಭೂಷಿತ ಪರಮಹಂಸ ಶ್ರೀ ಶ್ರೀಮದ್ ಭಕ್ತಿರಕ್ಷಕ ಶ್ರೀಧರದೇವ ಗೋಸ್ವಾಮಿ ಮಹಾರಾಜರ ತಾತ್ಪರ್ಯವೂ ಸೇರಿಕೊಂಡಿದೆ. ಶ್ರೀಧರ ಮಹಾರಾಜರು ಸಂಸ್ಕೃತ ಭಾಷೆಯಲ್ಲಿ ಪ್ರಖ್ಯಾತ ವಿದ್ವಾಂಸರಾಗಿದ್ದರಲ್ಲದೇ, ಪರಮಹಂಸ ವೈಷ್ಣವ, ಭಕ್ತಿಮಾರ್ಗದ ತತ್ತ್ವ ಶಾಸ್ತ್ರಜ್ಞ ಹಾಗೂ ಶ್ರೀರಾಧಾಗೋವಿಂದರ ಮತ್ತು ಶ್ರೀಚೈತನ್ಯಮಹಾಪ್ರಭುಗಳ ಪರಮ ಭಕ್ತರಾಗಿದ್ದರು. ಶಿಕ್ಷಾಷ್ಟಕದ ಒಳಗೆ ಅವರು ಹರಿಸಿದ ಜ್ಞಾನಪೂರ್ಣ ಒಳನೋಟಗಳು, ಅದರಲ್ಲಿ ಅಡಕವಾಗಿರುವ ಮಹತ್ವಪೂರ್ಣ ಅಂತರಾರ್ಥಗಳನ್ನು ಸೆಳೆದು, ಈ ಎಂಟು ಸರಳ ಶ್ಲೋಕಗಳ ಮೂಲಕ ಚೈತನ್ಯ ಮಹಾಪ್ರಭುಗಳು ದಯಪಾಲಿಸಿದ ಅಗಾಧ ಆಧ್ಯಾತ್ಮಿಕ ಸಂಪತ್ತನ್ನು ಅರ್ಥೈಸಿಕೊಂಡು ಗೌರವಿಸಲು ಸಹಾಯಕವಾಗುತ್ತವೆ.

ಪ್ರತಿನಿತ್ಯವೂ ಈ ಶ್ಲೋಕಗಳನ್ನು ಭಾವಾರ್ಥದೊಡನೆ ಓದಿ ಮನನ ಮಾಡುವ ಪ್ರತಿಯೊಬ್ಬ ಸಾಧಕನೂ ಅನಗತ್ಯವಾದ ಲೌಕಿಕ ಆಶಯಗಳಿಂದ ಮುಕ್ತನಾಗಿ ವ್ರಜೇಂದ್ರನಂದನ ಶ್ರೀಕೃಷ್ಣನಲ್ಲಿ ಭಕ್ತಿಯನ್ನು ಗಳಿಸಿ ಅವನ ಕೃಪೆಗೆ ಪಾತ್ರನಾಗುತ್ತಾನೆ.

ಈ ಪ್ರಕಟಣೆಯು ಕೆಲವು ನಿಷ್ಠಾವಂತ ಹಾಗೂ ಪ್ರಾಮಾಣಿಕ ಭಕ್ತರ, ವಿಶೇಷವಾಗಿ, ಆಂಗ್ಲಭಾಷೆಯಿಂದ ಕನ್ನಡ ಭಾಷೆಗೆ ಅನುವಾದಿಸಿದ ಶ್ರೀ ಚೈತನ್ಯದಾಸ ಅಧಿಕಾರಿ, ಪುಸ್ತಕದ ಒಳಪುಟಗಳ ಸಂಯೋಜನೆಯನ್ನು ಮಾಡಿದ ಶ್ರೀ ರಸಿಕಾನಂದ ಬ್ರಹ್ಮಚಾರಿ ಮತ್ತು ಪುಸ್ತಕದ ಮುಖಪುಟ ಮತ್ತು ಹೊದಿಕೆಯ ವಿನ್ಯಾಸವನ್ನು ರಚಿಸಿದ ಗೌರಗೋಪಾಲ ದಾಸ ಬ್ರಹ್ಮಚಾರಿ ಇವರುಗಳ ಪ್ರಯತ್ನದಿಂದ ಫಲಿತವಾಗಿರುತ್ತದೆ

ಅವರ ಆಧ್ಯಾತ್ಮಿಕ ಸಾಧನೆಗೆ ಶ್ರೀ ಗುರುದೇವರ ಮತ್ತು ಶ್ರೀ ಚೈತನ್ಯ ಮಹಾಪ್ರಭುಗಳ ಕೃಪಾಶೀರ್ವಾದಗಳು ನಿರಂತರವಾಗಿ ಇರಲಿ ಎಂದು ನನ್ನ ಪ್ರಾರ್ಥನೆ.

ತ್ರಿದಂಡಿ ಭಿಕ್ಷು
ಸ್ವಾಮಿ ಭಕ್ತಿವಿಜ್ಞಾನ ಗಿರಿ

## ಶ್ಲೋಕ ೧

**ಚೇತೋದರ್ಪಣಮಾರ್ಜನಮ್ ಭವಮಹಾದಾವಾಗ್ನಿನಿರ್ವಾಪಣಮ್**
**ಶ್ರೇಯಃಕೈರವಚಂದ್ರಿಕಾ ವಿತರಣಮ್ ವಿದ್ಯಾವಧೂಜೀವನಮ್**
**ಆನಂದಾಬುಧಿವರ್ಧನಮ್ ಪ್ರತಿಪದಮ್ಪೂರ್ಣಾಮೃತಾಸ್ವಾದನಮ್**
**ಸರ್ವಾತ್ಮಸ್ನಪನಮ್ ಪರಮ್ ವಿಜಯತೇಶ್ರೀಕೃಷ್ಣಸಂಕೀರ್ತನಮ್**

## ಅನುವಾದ

**ಶ್ರೀಕೃಷ್ಣನ ದಿವ್ಯ ನಾಮವು ಮನಸ್ಸಿನ ಕನ್ನಡಿಯನ್ನು ಸ್ವಚ್ಛಗೊಳಿಸುತ್ತದೆ ಮತ್ತು ಹುಟ್ಟು ಸಾವುಗಳೆಂಬ ಕಾನನದಲ್ಲಿ ಹರಡಿರುವ ಕ್ಲೇಶವೆಂಬ ಕಾಡ್ಗಿಚ್ಚನ್ನು ಉಪಶಮನಗೊಳಿಸುತ್ತದೆ. ಚಂದಿರನ ಶೀತಲ ಕಿರಣಗಳು ಹೇಗೆ ಕಮಲದ ಹೂವನ್ನು ಪ್ರಫುಲ್ಲಗೊಳಿಸುತ್ತವೋ ಹಾಗೆಯೇ ಶ್ರೀಕೃಷ್ಣನ ನಾಮಾಮೃತವು ಹೃದಯ ಹಾಗೂ ಮನಸ್ಸುಗಳೆರಡನ್ನೂ ಪ್ರಫುಲ್ಲಗೊಳಿಸುತ್ತದೆ ಹಾಗೂ ತನ್ನ ಅಂತರಂಗದಲ್ಲಿ ಅಡಗಿರುವ ಕೃಷ್ಣನೊಂದಿಗಿನ ಪ್ರೇಮಜೀವನದ ನಿಧಿಯಬಗ್ಗೆ ಆತ್ಮನಿಗೆ ಅರಿವನ್ನು ಮೂಡಿಸುತ್ತದೆ. ನಾಮಾಮೃತವನ್ನು ಮತ್ತೆ ಮತ್ತೆ ಸವಿಯುತ್ತಾ ಆತ್ಮನು ಸತತವಾಗಿ ವರ್ಧಿಸುತ್ತಿರುವ ಮಹದಾನಂದದ ಮಹಾಸಾಗರದಲ್ಲಿ ಧುಮುಕುತ್ತಾ ತೇಲಾಡುತ್ತಾ ಇರುತ್ತಾನೆ. ತನ್ನ ಊಹೆಯ ಎಲ್ಲಾ ಹಂತಗಳು ಸಂಪೂರ್ಣವಾಗಿ ತೃಪ್ತಿಹೊಂದಿ, ಪರಿಶುದ್ಧಗೊಂಡು ಕೊನೆಗೆ ಸರ್ವಮಂಗಳಕರವಾದ ಶ್ರೀಕೃಷ್ಣನ ನಾಮಸಂಕೀರ್ತನೆಯ ಪ್ರಭಾವದಿಂದ ಜಯಿಸಲ್ಪಡುತ್ತವೆ.**

## ಭಾವಾರ್ಥ

ಶ್ರೀ ಚೈತನ್ಯ ಮಹಾಪ್ರಭುಗಳು ಶ್ರೀಕೃಷ್ಣ ಸಂಕೀರ್ತನೆಯ ಪ್ರವರ್ತಕರು. ''ಶ್ರೀಕೃಷ್ಣನ ದಿವ್ಯನಾಮದ ಸಂಕೀರ್ತನೆಯನ್ನು ಉದ್ಘಾಟಿಸಲು ನಾನು ಬಂದಿರುತ್ತೇನೆ ಮತ್ತು ಈ ದಿವ್ಯ ನಾಮವು ಪೃಥ್ವಿಯ ಮೂಲೆಮೂಲೆಗೂ ಪಸರಿಸುತ್ತದೆ'' ಎಂದು ಅವರು ಹೇಳಿರುವರು.

''ಪೃಥ್ವೀತೆ ಆಚೆ ಯತ ನಗರಾದಿ ಗ್ರಾಮ  ಸರ್ವತ್ರ ಪ್ರಚಾರ ಹೊಯಿಬೆ ಮೊರ ನಾಮ''

ಸಂಕೀರ್ತನ ಎಂದರೆ ಸಮ್ಯಕ್–ಕೀರ್ತನ, ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ ಸಾಮೂಹಿಕವಾಗಿ ಶ್ರೀಕೃಷ್ಣನ ದಿವ್ಯನಾಮಗಳ ಕೀರ್ತನೆಯನ್ನು ಮಾಡುವುದು. ಸಮ್ಯಕ್ ಎಂದರೆ ಸಂಪೂರ್ಣ ಎಂದರ್ಥ. ಹಾಗಾಗಿ ಇದು ಸಂಪೂರ್ಣ ಕೀರ್ತನ. ಆದರೆ ಸಂಪೂರ್ಣ ಎಂದಾಗ ಕೇವಲ ಪ್ರಮಾಣದಲ್ಲಿ ಮಾತ್ರವಲ್ಲದೇ ಗುಣಾತ್ಮಕವಾಗಿ ಕೂಡಾ ಸಂಪೂರ್ಣ ಎಂದು ಅರ್ಥೈಸಿಕೊಳ್ಳತಕ್ಕದ್ದು.  ಪ್ರಮಾಣದಲ್ಲಿ ಸಂಪೂರ್ಣ ಎಂದರೆ  ಸಾರ್ವತ್ರಿಕವಾಗಿ ಅತ್ಯಧಿಕ ಜನಸಂಖ್ಯೆಯಲ್ಲಿ, ಅಂದರೆ ಸಾಮೂಹಿಕವಾಗಿ. ಗುಣಾತ್ಮಕವಾಗಿ  ಸಂಪೂರ್ಣ ಅಂದರೆ, ಸಂಪೂರ್ಣ ಹೃತ್ಪೂರ್ವಕ ಶ್ಲಾಘನೆ, ಹೊಗಳಿಕೆ ಅಥವಾ ಸ್ತುತಿ. ಈ ಸ್ತುತಿಯನ್ನು ಕೃಷ್ಣನನ್ನು ಕುರಿತು ಮಾಡಿದಾಗ ಮಾತ್ರ ಅದು ಸಂಪೂರ್ಣ ಅನಿಸಿಕೊಳ್ಳುತ್ತದೆ, ಮತ್ತು ಇತರ ಯಾವುದೇ ದೇವರನ್ನು ಕುರಿತು ಮಾಡಿದಾಗ ಅಲ್ಲ.

ಹಾಗಾಗಿ ಸಂಕೀರ್ತನ ಅಂದರೆ ಪರಿಪೂರ್ಣ ಕೀರ್ತನೆ, ಪರಿಪೂರ್ಣತೆಯ ಕುರಿತು ಶ್ಲಾಘನೆಯ ಕೀರ್ತನೆ, ಪರಮಸತ್ಯದ ಕುರಿತು ಹೊಗಳಿಕೆಯ ಕೀರ್ತನೆ, ಇದು ಇತರ ಯಾವುದೇ ದೇವರನ್ನು ಕುರಿತು ಆದಾಗ ಅದು ಪರಿಪೂರ್ಣತೆಯ ಒಂದು ಭಾಗ ಅಥವಾ ಅಂಶವನ್ನು ಮಾತ್ರ ಪ್ರತಿನಿಧಿಸುತ್ತದೆ, ಆದ್ದರಿಂದ ಒಂದು ನಿರ್ದಿಷ್ಟ ಮಟ್ಟದಲ್ಲಿ ದೋಷಪೂರ್ಣವಾಗಿರುತ್ತದೆ. ಕೃಷ್ಣನು ಪರಿಪೂರ್ಣನಾದ್ದರಿಂದ, ಅವನೇ ಎಲ್ಲರ ಮತ್ತು ಎಲ್ಲದರ ಒಡೆಯನಾದ್ದರಿಂದ, ಅವನೇ ಪರಾತ್ಪರ ನಿಯಾಮಕನಾಗಿರುವುದರಿಂದ ಎಲ್ಲವೂ ಅವನ ಆಧೀನದಲ್ಲಿರುತ್ತದೆ. ಹಾಗಾಗಿ ಅವನ ಕೀರ್ತಿಯನ್ನು ಕೊಂಡಾಡುವ ಕೀರ್ತನೆಯನ್ನು ಮಾಡಬೇಕು. ಅವನನ್ನು ಸತತವಾಗಿ ಸ್ತುತಿಸಬೇಕು. ಎಲ್ಲರ ಬದುಕಿನ ಶ್ರೇಯಸ್ಸು ಅವನೊಬ್ಬನಿಗೇ ಸೇರುತ್ತದೆ. ಕುದುರೆಯ ಚಲನೆಯನ್ನು ಲಗಾಮು ಹತೋಟಿಯಲ್ಲಿಡುತ್ತದೆ, ಅದನ್ನು ಕಳಚಿದಾಗ ಕುದುರೆಯು ವೇಗವಾಗಿ ಓಡಿ ಬೇಗ ಗಮ್ಯವನ್ನು ಸೇರಲು ಸಾಧ್ಯವಾಗಬಹುದು. ಹಾಗೆಯೇ ಪ್ರಾಪಂಚಿಕತೆಯ ಲಗಾಮನ್ನು ಕಳಚಿ ಶ್ರೀಕೃಷ್ಣನನ್ನು ಹಾಡಿಹೊಗಳಿದಾಗ ನಾವು ಕೂಡಾ ನೇರವಾಗಿ, ಶೀಘ್ರವಾಗಿ ಪರಾತ್ಪರತತ್ತ್ವವನ್ನು, ಶ್ರೀಕೃಷ್ಣನನ್ನು ಸೇರಬಹುದು.

"ಶ್ರೀ ಅಂದರೆ ಲಕ್ಷ್ಮೀದೇವಿ, ಶ್ರೀಕೃಷ್ಣನ ಶಕ್ತಿ. ಇದರ ಅರ್ಥ ಸಂಕೀರ್ತನದಲ್ಲಿ ಕೃಷ್ಣನೊಂದಿಗೆ ಅವನ ಶಕ್ತಿಯಾದ ಲಕ್ಷ್ಮೀಯೂ ಸ್ತುತಿಸಲ್ಪಡುತ್ತಾಳೆ, ಏಕೆಂದರೆ ಕೃಷ್ಣನ ಶಕ್ತಿ ಕೃಷ್ಣನಲ್ಲಿ ಅಂತರ್ಗತವಾಗಿರುತ್ತದೆ. ಶ್ರೀಕೃಷ್ಣ ಸಂಕೀರ್ತನವು ಜಗತ್ತಿನ ಮೂಲೆಮೂಲೆಗೂ ವೇಗವಾಗಿ ಪಸರಿಸಿ ವೃದ್ಧಿಗೊಳ್ಳಬೇಕು, ಯಾವುದೇ ಅಡೆತಡೆಗಳಿಲ್ಲದೇ ಇದು ಜಯಶಾಲಿಯಾಗಬೇಕು. ಇದು ಒಂದು ಸ್ವಯಂಪ್ರೇರಿತವಾದ, ಅನಿರ್ಬಂಧಿತವಾದ ಸ್ವಾಭಾವಿಕ ಪ್ರವಾಹವಾಗಬೇಕು. ಇದು ಪ್ರತ್ಯೇಕವಾದದ್ದಾಗಿರಬೇಕು. ಸ್ವತಂತ್ರವಾಗಿರಬೇಕು ಮತ್ತು ಸಾರ್ವತ್ರಿಕವಾಗಿರಬೇಕು. ಮತ್ತು ಈ ಸಂಕೀರ್ತನವು ಸಾಮೂಹಿಕವಾಗಿ ಸ್ತುತಿಸಲ್ಪಟ್ಟು ಇದರ ಕಂಪನವು ಸಕಲ ಜಗತ್ತಿಗೆ ಪ್ರಯೋಜನಕಾರಿಯಾಗಬೇಕು. ಕೇವಲ ಶುದ್ಧಭಕ್ತಿ ಮತ್ತು ಸಮರ್ಪಣಾ ಮನೋಭಾವದಿಂದ ಮಾತ್ರ ಶ್ರೀಕೃಷ್ಣ ಸಂಕೀರ್ತನೆಯನ್ನು ಸ್ವೀಕರಿಸಬಹುದು" ಎಂದು ಶ್ರೀ ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ.

## ಮನಸ್ಸೆಂಬ ಮಸೂರದ ಮಾರ್ಜನ(ಸ್ವಚ್ಛಗೊಳಿಸುವಿಕೆ)

ಶುದ್ಧಭಕ್ತಿಯಿಂದ ಶ್ರೀಕೃಷ್ಣನ ದಿವ್ಯನಾಮಗಳನ್ನು ಸ್ತುತಿಸುತ್ತಾ ನಾವು ವಿವಿಧ ಹಂತಗಳನ್ನು ಹಾದುಹೋಗುತ್ತೇವೆ. ಅವುಗಳಲ್ಲಿ ಪ್ರಾರಂಭಿಕ ಹಂತದಲ್ಲಿ ದಿವ್ಯನಾಮವು ನಮ್ಮ ಮನಸ್ಸೆಂಬ ಕನ್ನಡಿಯನ್ನು ಶುಚಿಗೊಳಿಸುತ್ತದೆ. ಮಾನಸಿಕ ವ್ಯವಸ್ಥೆಯ ಕನ್ನಡಿಯು ಪ್ರಾಪಂಚಿಕತೆಯ ಧೂಳಿನಿಂದ ಮಲಿನವಾಗಿದ್ದಾಗ ನಾವು ಏನನ್ನೂ ಸ್ಪಷ್ಟವಾಗಿ ನೋಡಲಾರೆವು, ಮತ್ತು ವೈದಿಕ ಸಿದ್ಧಾಂತದ ಉಪದೇಶಗಳು ಮನದೊಳಗೆ ಸ್ಪಷ್ಟವಾಗಿ ಪ್ರತಿಬಿಂಬಿಸಲಾರವು. ಹಾಗಾದರೆ ನಮ್ಮ ಮನಸ್ಸೆಂಬ ಕನ್ನಡಿಯನ್ನು ಮುಚ್ಚಿರುವ ಈ ವಿವಿಧ ಧೂಳಿಗಳು ಯಾವುವು? ಚಾಪಲ್ಯಭರಿತ, ಅಸಂಖ್ಯಾತ ಪ್ರಾಪಂಚಿಕ ಆಕಾಂಕ್ಷೆಗಳೇ ನಮ್ಮ ಮನಸ್ಸನ್ನು ಮುಚ್ಚಿಕೊಂಡಿರುವ ಧೂಳಿಗಳು. ಈ ಧೂಳಿಯು ನಮ್ಮ ಮನಸ್ಸನ್ನು ಅಸಂಖ್ಯಾತ ಪದರಗಳಾಗಿ ಆವರಿಸಿಕೊಂಡಿರುತ್ತದೆ. ಹಾಗಾಗಿ ನಾವು ಯಾವುದೇ ವಿಷಯವನ್ನು ಸ್ಪಷ್ಟವಾಗಿ ಗ್ರಹಿಸಲು ಅಥವಾ ಕಾಣಲು ಅಶಕ್ತರಾಗಿರುತ್ತೇವೆ. ಭೌತಿಕ ಜಗತ್ತಿನ ಅಸಂಖ್ಯಾತ ಸಾಮಾನ್ಯ, ಕೆಳದರ್ಜೆಯ ಆಶಯಗಳೆಂಬ ಧೂಳು ಈ ಮನಸ್ಸನ್ನು ಆವರಿಸಿರುವುದರಿಂದ ಉನ್ನತ ವಿಷಯಗಳು ನಮ್ಮ ಮನಸ್ಸಿನಲ್ಲಿ ಪ್ರತಿಬಿಂಬಿತವಾಗಲಾರವು.

"ಭುಕ್ತಿ, ಮುಕ್ತಿ, ಸಿದ್ಧಿ, ಕಾಮಿ ಸಕಲ ಅಶಾಂತ"

ಹಾಗಾಗಿ ಶ್ರೀಕೃಷ್ಣಸಂಕೀರ್ತನದ ಮೊದಲ ಪರಿಣಾಮ ಮಲಿನ ಮನಸ್ಸನ್ನು ನಿರ್ಮಲಗೊಳಿಸುವುದು. ವೇದಕಾಲದ ಸಾಮಾಜಿಕ ವ್ಯವಸ್ಥೆಯಾದ ವರ್ಣಾಶ್ರಮ ಧರ್ಮದ ಉದ್ದೇಶವೂ ಇದೇ ಆಗಿರುತ್ತದೆ. ಪ್ರತಿಫಲಗಳ ಬಗ್ಗೆ ಆಕರ್ಷಿತರಾಗದೇ ತಂತಮ್ಮ ಸಾಮಾಜಿಕ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿದಾಗ ಪ್ರಜ್ಞೆಯ ಪರಿಶುದ್ಧತೆಯನ್ನು ಸಾಧಿಸುತ್ತೇವೆ. ಆದರೆ ವರ್ಣಾಶ್ರಮ ಧರ್ಮದ ಪಾಲನೆಯು ನೀಡುವ ಕಟ್ಟಕಡೆಯ ಫಲಿತಾಂಶವನ್ನು ಶ್ರೀಕೃಷ್ಣ ಸಂಕೀರ್ತನೆಯು ಪ್ರಾರಂಭದಲ್ಲೇ ದಯಪಾಲಿಸುತ್ತದೆ. ಅದೇ ಮನಸ್ಸು ಮತ್ತು ಹೃದಯಗಳ ಪರಿಶುದ್ಧತೆ. ನಮ್ಮ ಮನಸ್ಸು ಪರಿಶುದ್ಧಗೊಂಡಾಗ ನಾವು ವೈದಿಕ ಸಿದ್ಧಾಂತದ ಉಪದೇಶಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

ಜನನ ಮರಣಗಳ ಪುನರಾವರ್ತನೆಯ ಕಾನನದಲ್ಲಿ ಹೊತ್ತಿ ಉರಿಯುತ್ತಿರುವ ಭೌತಿಕ ಜೀವನವೆಂಬ ಕಾಡ್ಗಿಚ್ಚನ್ನು ಉಪಶಮನಗೊಳಿಸುವುದೇ ಶ್ರೀಕೃಷ್ಣ ಸಂಕೀರ್ತನೆಯು ನೀಡುವ ಮುಂದಿನ ಪರಿಣಾಮ. ನಾವು ಈ ಭೌತಿಕ ಜಗತ್ತಿನಲ್ಲಿ ಕಡ್ಡಾಯವಾಗಿ ಜನಿಸಿ ಸಾವನ್ನಪ್ಪುವ ಪ್ರಕ್ರಿಯೆಗೆ ಬದ್ಧರಾಗಿದ್ದೇವೆ. ಈ ಪ್ರಕ್ರಿಯೆಯಿಂದ ನಮ್ಮನ್ನು ಮುಕ್ತಗೊಳಿಸುವುದೇ ಶ್ರೀಕೃಷ್ಣ ಸಂಕೀರ್ತನೆಯು ನೀಡುವ ಎರಡನೇಯ ಪರಿಣಾಮ.

ಶ್ರೀಕೃಷ್ಣ ಸಂಕೀರ್ತನೆಯ ನಮ್ಮ ಮೊದಲ ದಾಪುಗಾಲು ನಮ್ಮ ಮನಸ್ಸು ಮತ್ತು ಬುದ್ಧಿಗಳನ್ನು ಪರಿಶುದ್ಧಗೊಳಿಸಿದರೆ, ಎರಡನೇಯ ದಾಪುಗಾಲು ನಮ್ಮನ್ನು ಮೂರುತರಹದ (ಅಧ್ಯಾತ್ಮಿಕ, ಅಧಿಭೌತಿಕ, ಅಧಿದೈವಿಕ) ಕ್ಲೇಶಗಳೆಂಬ ದೊಡ್ಡ ದಳ್ಳುರಿಯಿಂದ ಮುಕ್ತರನ್ನಾಗಿಸುತ್ತದೆ. ಅಧ್ಯಾತ್ಮಿಕ ಕ್ಲೇಶ ಎಂದರೆ ಮನಸ್ಸು ಮತ್ತು ದೇಹದೊಳಗೆ ತಲೆದೋರುವ ವಿವಿಧ ಸಂಕಟಗಳು: ದೈಹಿಕ ರೋಗ, ಮಾನಸಿಕ ಅಸ್ವಸ್ಥತೆ ಇತ್ಯಾದಿ; ಅಧಿಭೌತಿಕ ಅಂದರೆ, ನಮ್ಮ ನೆರೆಕರೆಯವರಿಂದ, ಪ್ರಾಣಿಪಕ್ಷಿಗಳು, ಕ್ರಿಮಿಕೀಟಗಳು ಮತ್ತು ಇನ್ನಿತರ ಜೀವಿಗಳಿಂದ ಉಂಟಾಗುವ ತೊಂದರೆಗಳು; ಅಧಿ ದೈವಿಕ ಅಂದರೆ, ಭೂಕಂಪ, ಕ್ಷಾಮ, ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತವೇ ಮುಂತಾದ ಪ್ರಾಕೃತಿಕ ವಿಕೋಪಗಳು; ಇವೇ ಮೂರು ತರಹದ ಕ್ಲೇಶಗಳು. ಈ ಮೂರರಲ್ಲಿ ಒಂದಲ್ಲ ಒಂದು, ಕೆಲವೊಮ್ಮೆ ಎಲ್ಲವೂ ನಮ್ಮನ್ನು ಸದಾ ಸಂಕಟಗಳಿಗೊಳಪಡಿಸುತ್ತಿರುತ್ತವೆ. ಈ ಕ್ಲೇಶಗಳ ಅಗ್ನಿಯು ನಮ್ಮ ಹೃದಯದಲ್ಲಿ ಸದಾ ಹೊತ್ತಿ ಉರಿಯುತ್ತಿರುತ್ತದೆ. ಶ್ರೀಕೃಷ್ಣ ಸಂಕೀರ್ತನೆಯ ಎರಡನೇ ದಾಪುಗಾಲು ಈ ಅಗ್ನಿಯನ್ನು ನಂದಿಸಿ ನಮ್ಮನ್ನು ಕ್ಲೇಶಗಳಿಂದ ಬಿಡುಗಡೆಗೊಳಿಸುತ್ತದೆ.

## ಬದುಕಿನ ಅತ್ಯುನ್ನತ ಧ್ಯೇಯ

"ಶ್ರೇಯಃಕೈರವಚಂದ್ರಿಕಾ ವಿತರಣಮ್" ಶ್ರೀಕೃಷ್ಣ ಸಂಕೀರ್ತನೆಯು ನಮಗೆ ದಯಪಾಲಿಸುವ ಬದುಕಿನ ಅತ್ಯುನ್ನತ ಧ್ಯೇಯದ ಪರಿಕಲ್ಪನೆ. ಮನಸ್ಸು ಹಾಗೂ ಬುದ್ಧಿಗಳನ್ನು ಪರಿಶುದ್ಧಗೊಳಿಸಿಕೊಂಡು, ಮೂರುಬಗೆಯ ಕ್ಲೇಶಗಳಿಂದ ಬಿಡುಗಡೆ ಹೊಂದಿದಾಗ ನಮ್ಮ ಸಕಾರಾತ್ಮಕ ಕಾರ್ಯಪ್ರವೃತ್ತಿ ಪ್ರಾರಂಭವಾಗುತ್ತದೆ ಮತ್ತು ಕಟ್ಟಕಡೆಗೆ ಇದು ನಮ್ಮನ್ನು ನಿರಂತರವಾದ, ಮಂಗಳದಾಯಕವಾದ ಹಾಗೂ ಅತ್ಯಂತ ಸುಂದರವಾದ ಪರಮಸತ್ಯದೆಡೆಗೆ, ಯಥಾರ್ಥವಾದ ಬದುಕಿನೆಡೆಗೆ ಕರೆದೊಯ್ಯುತ್ತದೆ. ಶ್ರೀಕೃಷ್ಣನ ದಿವ್ಯನಾಮವನ್ನು ಜಪಿಸುವುದರಿಂದ ನಾವು ಜೀವನದ ಅತ್ಯುನ್ನತ ಧ್ಯೇಯವನ್ನು ಸರಳವಾದರೀತಿಯಲ್ಲಿ ಸಾಧಿಸುತ್ತೇವೆ. ಇದು ನಮ್ಮನ್ನು ಕಷ್ಟ ಕಾರ್ಪಣ್ಯಗಳ ಜಗತ್ತಿನ ಆಚೆಗಿನ ಅತ್ಯಂತ ಮಂಗಳಕರವಾದ ಜಗತ್ತಿಗೆ ಕೊಂಡೊಯ್ಯುತ್ತದೆ. ಈ ಮೂರನೆಯ ಹಂತವನ್ನು ನಾವು ಪರಾಂಬರಿಸಿ ವಿಶ್ಲೇಷಿಸಿದಾಗ ಶ್ರೀಕೃಷ್ಣನ ದಿವ್ಯನಾಮವು ನಮ್ಮನ್ನು ಶ್ರೀಕೃಷ್ಣನೊಂದಿಗೆ ಶಾಂತ, ಸಾಖ್ಯ ಮತ್ತು ವಾತ್ಸಲ್ಯರಸಗಳನ್ನೊಳಗೊಂಡ ಆತ್ಮೀಯ ಹಾಗೂ ವೈಯಕ್ತಿಕ ಸಂಬಂಧದೆಡೆಗೆ ಕರೆದೊಯ್ಯುವುದನ್ನು ಕಾಣುತ್ತೇವೆ. ಇದು ಶ್ರೇಯಃ(ಶ್ರೇಯಸ್ಸು)ಅಂದರೆ ಶ್ರೀ ನಿತ್ಯಾನಂದ ಪ್ರಭುಗಳ ಕೃಪೆಯನ್ನು ಒದಗಿಸುತ್ತದೆ. ಏಕೆಂದರೆ ಶ್ರೀ ನಿತ್ಯಾನಂದ ಪ್ರಭುಗಳ ದಯೆಯೊಂದೇ ನಮಗೆ ವೃಂದಾವನದಲ್ಲಿ ಶ್ರೀರಾಧಾಕೃಷ್ಣರ ಪೂಜೆಯ ಅವಕಾಶವನ್ನು ಕಲ್ಪಿಸುತ್ತದೆ. (ನಿತಾಯೆರ್ ಕರುಣಾ ಹಬೆ ಬ್ರಜೇ ರಾಧಾಕೃಷ್ಣ ಪಾಬೆ).

ನಾಲ್ಕನೆಯ ಹಂತವೇ "ವಿದ್ಯಾವಧೂಜೀವನಮ್". ಈ ಹಂತದಲ್ಲಿ ಶ್ರೀಕೃಷ್ಣನ ದಿವ್ಯನಾಮವು ನಮ್ಮನ್ನು ಮಧುರ ರಸದಲ್ಲಿ ಕಂಡುಬರುವ ನಿಷ್ಕಾರಣ ಮತ್ತು ಅನಿರ್ಬಂಧಿತ ಭಾವದಲ್ಲಿ ತಮ್ಮನ್ನು ತಾವು ಶ್ರೀಕೃಷ್ಣನ ಅಧೀನತೆಗೆ ಸಮರ್ಪಿಸಿಕೊಳ್ಳುವ ಸಂಪೂರ್ಣ ಶರಣಾಗತಿಗೆ ಅಣಿಗೊಳಿಸುತ್ತದೆ.

ಮುಂದಿನದು "ಆನಂದಾಂಬುಧಿವರ್ಧನಮ್" ನಾವು ಯುಕ್ತವಾದರೀತಿಯಲ್ಲಿ ಶ್ರೀಕೃಷ್ಣನ ದಿವ್ಯನಾಮವನ್ನು ಜಪಿಸುವ ಹಂತಕ್ಕೆ ಬಂದಾಗ, ಭೌತಿಕ ಆನಂದದ ಎಲ್ಲಾ ಅನುಭವಗಳನ್ನು ಮೀರಿದ ಅಲೌಕಿಕ ಆನಂದದ ಸಾಗರದಲ್ಲಿ ಮತ್ತೆ ಮತ್ತೆ ಧುಮುಕಿ ತೇಲಾಡುವ ಅನುಭವವನ್ನು ಕಾಣುತ್ತೇವೆ. ದಿವ್ಯ ನಾಮವೇ ನಮ್ಮ ಸಮರ್ಪಣಾ ಮನೋಭಾವದ ಶ್ರೇಣಿಯನ್ನು ಪ್ರತಿಪಾದಿಸುತ್ತದೆ ಮತ್ತು ನಮ್ಮ ಶರಣಾಗತಿಯು

ಪರಿಪೂರ್ಣಗೊಂಡಾಗ ತಟಸ್ಥವಲ್ಲದ ಆದರೆ ಸದಾ ವರ್ಧಿಸುವ, ಅತ್ಯಂತ ಆನಂದಪೂರ್ಣ, ನಿತ್ಯನವೀನರೀತಿಯ ಭಾವಪರವಶತೆಯನ್ನು ಅನುಭವಿಸುತ್ತದೆ. ಅಲ್ಲಿ ನಾವು ಹೊಸಬದುಕನ್ನು ಮತ್ತು ಹೊಸ ರೀತಿಯ ಪೂರ್ಣಾನಂದವನ್ನು ಕಾಣುತ್ತೇವೆ. ಇದು ನಮಗೆ ಯಾವುದೇ ರೀತಿಯ ಗತಿರಹಿತ ಅಥವಾ ಹಳಸಲು ಅನುಭವವನ್ನು ನೀಡುವುದಿಲ್ಲ. ಆದರೆ ಪ್ರತಿಕ್ಷಣವೂ ಭಾವಪರವಶತೆಯ ಆನಂದದ ಅಗಾಧ ಸಾಗರದ ಸವಿರುಚಿಯನ್ನು ನೀಡುತ್ತದೆ.

ಶ್ರೀಕೃಷ್ಣ ಸಂಕೀರ್ತನೆಯ ಕೊನೆಯ ಪರಿಣಾಮ ನಮ್ಮ ಸಂಪೂರ್ಣ ಬದುಕಿನ ಪರಿಶುದ್ಧತೆ. ಈ ರೀತಿಯ ಆನಂದ ಕುಲುಷಿತಗೊಳ್ಳಲಾರದು ಬದಲಿಗೆ ಅದು ನಮ್ಮ ಬದುಕನ್ನು ಸಂಪೂರ್ಣವಾಗಿ ಪರಿಶುದ್ಧಗೊಳಿಸುತ್ತದೆ. ಭೌತಿಕ ಆನಂದ ಅಂದರೆ ಶೋಷಣೆ. ಭೌತಿಕ ಆನಂದವು ಪ್ರತಿಕ್ರಿಯೆಯನ್ನು ಸೃಷ್ಟಿಸುತ್ತದೆ ಮತ್ತು ಆನಂದಿಸುವವನನ್ನು ಕುಲುಷಿತತೆಯು ಆಕ್ರಮಿಸುತ್ತದೆ. ಆದರೆ ಇಲ್ಲಿ ಸ್ವಯಂ ಕೃಷ್ಣನೇ ಪ್ರಥಮ ಆಕ್ರಮಣಕಾರನಾಗಿರುವುದರಿಂದ ಫಲಿತಾಂಶ ಪರಿಶುದ್ಧತೆಯಾಗಿರುತ್ತದೆ. ಕೇಂದ್ರದಿಂದ, ನಿರಂಕುಶ ಪ್ರಭುವಾದ ಶ್ರೀಕೃಷ್ಣನ ಅಪೇಕ್ಷೆಯ ಮೇರೆಗೆ ಬರುವ ಎಲ್ಲಾ ಆನಂದವು ನಮ್ಮನ್ನು ಮತ್ತು ನಮ್ಮ ಬದುಕನ್ನು ಸಂಪೂರ್ಣವಾಗಿ ಪರಿಶುದ್ಧಗೊಳಿಸುತ್ತದೆ.

ಆತ್ಮನು ತಾನು ಕಲ್ಪಿಸಿ ಅನುಭವಿಸಬಹುದಾದ ತನ್ನ ಎಲ್ಲಾ ಅನುಭವದ ಹಂತಗಳನ್ನು ಒಂದೊಮ್ಮೆಗೆ ಶ್ರೀಕೃಷ್ಣನ ದಿವ್ಯ ನಾಮದ ಜಪವು ಸಂಪೂರ್ಣವಾಗಿ ಸಂತೃಪ್ತಿಗೊಳಿಸುತ್ತದೆ ಮತ್ತು ನಿರ್ಮಲಗೊಳಿಸುತ್ತದೆ ಎಂಬುದೇ ಈ ಶ್ಲೋಕದಲ್ಲಿ ಬರುವ "ಸರ್ವಾತ್ಮ ಸ್ನಪನಮ್" ಎಂಬ ಎರಡು ಶಬ್ದಗಳ ಅರ್ಥ. ಇದಲ್ಲದೇ "ಸರ್ವಾತ್ಮ ಸ್ನಪನಮ್"ಗೆ ಇನ್ನೊಂದು ಅರ್ಥವೂ ಇದೆ. ಅದೆಂದರೆ ನಾವು ಶ್ರೀಕೃಷ್ಣನನ್ನು ಸಾಮೂಹಿಕವಾಗಿ ಕೊಂಡಾಡಿದಾಗ ನಮ್ಮ ಸಾಮರ್ಥ್ಯಕ್ಕನುಗುಣವಾಗಿ ನಾವು ಪರಿಶುದ್ಧರಾಗುತ್ತೇವೆ. ಕೀರ್ತಿಸುವವರು, ಕೀರ್ತನೆಯ ಪ್ರೇಕ್ಷಕರು, ಕೀರ್ತನೆಯನ್ನು ಆಲಿಸುವವರು ಮತ್ತು ಈ ಸಂಕೀರ್ತನೆಯ ಶಬ್ದ ತರಂಗಗಳ ಪರಿಧಿಯೊಳಗೆ ಬರುವವರೆಲ್ಲರೂ ಪರಿಶುದ್ಧರಾಗುತ್ತಾರೆ. ಸ್ನಪನಮ್ ಎಂದರೆ ಪರಿಶುದ್ಧಗೊಳಿಸುವುದು ಎಂದರ್ಥ, ಹಾಗಾಗಿ ಸಂಕೀರ್ತನೆಯ ಶಬ್ದ ತರಂಗಗಳ ಕಂಪನವು ಸ್ಪರ್ಶಿಸಿದ ಎಲ್ಲರನ್ನು ಮತ್ತು ಎಲ್ಲವನ್ನೂ ಪರಶುದ್ಧಗೊಳಿಸುತ್ತದೆ.

ಹಾಗಾಗಿ, ಶ್ರೀ ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ, "ಶ್ರೀಕೃಷ್ಣನ ದಿವ್ಯನಾಮಗಳನ್ನು ಸಾಮೂಹಿಕವಾಗಿ ಜಪಿಸುವ ಶ್ರೀಕೃಷ್ಣ ಸಂಕೀರ್ತನೆಗೆ ಹೋಗಿ". ನಿಶ್ಚಯವಾಗಿಯೂ ಶ್ರೀಕೃಷ್ಣ ಸಂಕೀರ್ತನೆಯು ನಿಷ್ಕಪಟವಾಗಿರಬೇಕು. ಹಾಗಾಗಿ ಇಲ್ಲಿ ಸಾಧುಸಂತರ ಸಾಂಗತ್ಯ ಅತ್ಯವಶ್ಯಕ. ಏಕೆಂದರೆ ಇದು ಪ್ರಾಯೋಗಿಕ ಪ್ರಯತ್ನವಲ್ಲ. ನಾವು ನಮ್ಮ ಸಹಾಯಕ್ಕೆ ಬರುವ ಉನ್ನತ, ಅನಿರ್ಬಂಧಿತ ನೆಲೆಯೊಡನೆ ಸಂಪರ್ಕವನ್ನು ಹೊಂದಲು ಪ್ರಯತ್ನಿಸುತ್ತಿದ್ದೇವೆ. ಅತ್ಯಂತ ಪ್ರಾಮುಖ್ಯವಾದ ಉನ್ನತ ಸತ್ಯದೊಂದಿಗೆ ನಾವು ಆ ನೆಲೆಯ ಸಂಪರ್ಕವನ್ನು ಹೊಂದುವುದು ಅತ್ಯಗತ್ಯ. ಶ್ರೀಕೃಷ್ಣನ ದಿವ್ಯ ನಾಮವು ಕೇವಲ ಭೌತಿಕ ಶಬ್ದವಲ್ಲ; ಇದು ಕೇವಲ ತುಟಿಗಳ ಅಂತರ್ಗತ ಕ್ರಿಯೆ ಮಾತ್ರವಲ್ಲ, ಆದರೆ ಇದೊಂದು ಉನ್ನತವಾದ ನೆಲೆಗೆ ಸಂಬಂಧಿಸಿದ ಪ್ರಕ್ರಿಯೆಯಾಗಿರುತ್ತದೆ.

"ನಾಮಾಕ್ಷರ ಬಾಹಿರಾಯ ಬಟೆ ತಬು ನಾಮ ಕಭು ನಾಯ"

ಇದು ಸಂಪೂರ್ಣ ಆಧ್ಯಾತ್ಮಿಕವಾಗಿರುತ್ತದೆ. ನಾವು ಬದುಕಿನ ತಟಸ್ಥ ನೆಲೆಯಲ್ಲಿರುವುದರಿಂದ, ಆ ದಿವ್ಯ ಶಬ್ದದ ಅಲೆಗಳು ಕೆಳಗಿಳಿದು ನಮ್ಮೆಡೆಗೆ ಬಂದು ತಮ್ಮ ಪ್ರಭಾವವನ್ನು ನಮ್ಮೆಡೆಗೆ ಪಸರಿಸುವಂತೆ ಮಾಡಬಲ್ಲ ಒಂದು ಉನ್ನತ ಸಂಪರ್ಕದ ಅವಶ್ಯಕತೆಯಿರುತ್ತದೆ.

ಶ್ರೀಕೃಷ್ಣನ ದಿವ್ಯನಾಮ ಸಂಕೀರ್ತನವು ಹೋದೆಡೆಯಲ್ಲೆಲ್ಲಾ ಈ ಏಳು ಫಲಿತಾಂಶಗಳನ್ನು ಉತ್ಪಾದಿಸುತ್ತದೆ ಎಂಬುದು ಶ್ರೀ ಚೈತನ್ಯ ಮಹಾಪ್ರಭುಗಳ ಶಿಕ್ಷಾಷ್ಟಕದ ಮೊದಲನೆಯ ಶ್ಲೋಕದ ತಾತ್ಪರ್ಯ. ಭೌತಿಕ ಆಶಯಗಳ ಮಲಿನತೆಯಿಂದ ಆಕ್ರಮಿತನಾದ ಆತ್ಮನನ್ನು ಶ್ರೀಕೃಷ್ಣನ ದಿವ್ಯನಾಮವು ಪರಿಶುದ್ಧಗೊಳಿಸುತ್ತದೆ. ಇದು ಮೊದಲನೇ ಪರಿಣಾಮ. ಪ್ರಾಪಂಚಿಕ ಒತ್ತಡಗಳಿಂದ ಆತ್ಮನನ್ನು ಬಿಡುಗಡೆಗೊಳಿಸಿ, ಪರಿಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆ, ಇದು ಎರಡನೇಯ ಪರಿಣಾಮ. ಮೂರನೇಯ ಪರಿಣಾಮವು ಆತ್ಮನಿಗೆ ನಿಜವಾದ ಭಾಗ್ಯವನ್ನು ದಯಪಾಲಿಸುತ್ತದೆ. ಶ್ರೀಕೃಷ್ಣನ ದಿವ್ಯನಾಮವನ್ನು ಜಪಿಸುವುದರಿಂದ ಆತ್ಮನ ಸ್ವಭಾವಸಿದ್ಧವಾದ ಸೇವಾಮನೋಭಾವವು ಕ್ರಮೇಣ ಜಾಗೃತಗೊಂಡು ಭಾಗ್ಯದ ಬಾಗಿಲು ತೆರೆಯುತ್ತದೆ. ಇಲ್ಲಿ ಚೈತನ್ಯ ಮಹಾಪ್ರಭುಗಳು, ಪರಮಪುರುಷನೊಂದಿಗಿನ ಬೇರೆ ಬಗೆಯ ಸಂಬಂಧಗಳನ್ನು ಸೇರಿಸುತ್ತಾರೆ. ಮುಂದಕ್ಕೆ ವಿವರಿಸುತ್ತಾ ಅವರು ಆತ್ಮನು ತನ್ನನ್ನು ತಾನು ಸಂಪೂರ್ಣವಾಗಿ ಶ್ರೀಕೃಷ್ಣನಿಗೆ ಸಮರ್ಪಿಸಿ, ಅವನ ಆನಂದದ ಪರಮಾವಧಿಗೋಸ್ಕರ ತನ್ನನ್ನು ತಾನು ನಿಷ್ಕಾರಣವಾಗಿ ಅವನ ಅಧೀನಕ್ಕೊಳಪಡಿಸಿಕೊಳ್ಳುವ ದಾಂಪತ್ಯ(ಪ್ರಣಯ)ಭಕ್ತಿಯಭಾವವನ್ನು ತೋರುತ್ತಾರೆ.

## ಸಹಸ್ರಾರು ವದನಗಳ ಬಯಕೆ

ಮುಂದಿನ ಪರಿಣಾಮ "ಪೂರ್ಣಾಮೃತಾಸ್ವಾದನಮ್". ಭಾವಪರವಶತೆಯ ಸಾಂಗತ್ಯದ ಆಸ್ವಾದನೆ. ಶ್ರೀಕೃಷ್ಣನ ದಿವ್ಯಧಾಮವಾದ ವೃಂದಾವನದಲ್ಲಿ ಯಾರು ಯುಕ್ತವಾದ ರೀತಿಯಲ್ಲಿ ಶ್ರೀಕೃಷ್ಣನ ದಿವ್ಯನಾಮವನ್ನು ಜಪಿಸಬಹುದೋ ಅವನು ತನ್ನನ್ನು ತಾನು ಒಂದು ವಿಶಿಷ್ಟ ರೀತಿಯ ಅಹಂಕಾರದೊಡನೆ ವ್ಯಕ್ತಪಡಿಸಿಕೊಳ್ಳುತ್ತಾನೆ.

ತುಂಡೇ ತಾಂಡವನೀ ರತಿಂ ವಿತನುತೇ ತುಂಡಾವಲೀಲಬ್ಧಯೇ
ಕರ್ಣಕ್ರೋಡಕಡಂಬಿನೀ ಘಟಯತೇ ಕರ್ಣಾರ್ಬುದೇಭ್ಯಃ ಸ್ಪೃಹಮ್
ಚೇತಃಪ್ರಾಂಗಣಸಂಗಿನೀ ವಿಜಯತೇ ಸರ್ವೇಂದ್ರಿಯಾಣಾಮ್ ಕೃತಿಮ್
ನೋ ಜಾನೇ ಜನಿತಾ ಕಿಯದ್ಭಿರ್ ಅಮೃತೈಃ ಕೃಷ್ಣೇತಿ ವರ್ಣದ್ವಯೀ
(ವಿದಗ್ಧ ಮಾಧವ – ೧.೧೫)

ಶ್ರೀಕೃಷ್ಣನ ದಿವ್ಯನಾಮವು ಒಬ್ಬನ ತುಟಿಗಳ ಮೇಲೆ ಪ್ರಕಟವಾದಾಗ ಅದು ಹುಚ್ಚು ಹುಚ್ಚಾಗಿ ನರ್ತಿಸಲಾರಂಭಿಸುತ್ತದೆ. ದಿವ್ಯನಾಮವು ತನ್ನನ್ನು ಜಪಿಸುತ್ತಿರುವ ವ್ಯಕ್ತಿಯನ್ನು ಸಂಪೂರ್ಣವಾಗಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು, ಆ ವ್ಯಕ್ತಿಯನ್ನು ತನ್ನ ತುಟಿಗಳ ಮೇಲೆ ತಾನು ಹತೋಟಿಯನ್ನು ಕಳೆದುಕೊಂಡನೋ ಎಂಬಂತೆ ಆಡಿಸುತ್ತದೆ. ಆಗ ಆ ಭಕ್ತನು ಹೀಗೆ ಹೇಳುತ್ತಾನೆ "ಒಂದು ಬಾಯಿಯಿಂದ ನಾನು ಎಷ್ಟುಮಾತ್ರ ಶ್ರೀಕೃಷ್ಣನ ದಿವ್ಯನಾಮದ ಆನಂದವನ್ನು ಸಂಗ್ರಹಿಸಬಹುದು? ಈ ದಿವ್ಯನಾಮದ ಸವಿಯನ್ನು ಆಸ್ವಾದಿಸಲು ನನಗೆ ಸಾವಿರಾರು ಬಾಯಿಗಳು ಬೇಕು. ಒಂದು ಬಾಯಿಯಿಂದ ದಿವ್ಯನಾಮವನ್ನು ಜಪಿಸಿ ನಾನು ಎಂದಿಗೂ ಸಂತುಷ್ಟನಾಗಲಾರೆ!"

'ಕೃಷ್ಣ' ಎಂಬ ಶಬ್ದ ಒಬ್ಬನ ಕಿವಿಗಳನ್ನು ಪ್ರವೇಶಿಸಿದಾಗ, ಅಲೌಕಿಕ ಶಬ್ದವು ಹೃದಯವನ್ನು ಎಚ್ಚರಿಸಿದ ಅನುಭವವಾಗುತ್ತದೆ. "ಎರಡೇ ಎರಡು ಕಿವಿಗಳು!" ಅವನು ಯೋಚಿಸುತ್ತಾನೆ "ಇದು ಸೃಷ್ಟಿಕರ್ತನ ಅತಿದೊಡ್ಡ ಅನ್ಯಾಯ! ನನಗೆ ಸಾವಿರಾರು ಕಿವಿಗಳು ಬೇಕು! ಆಗ ನಾನು ಕೃಷ್ಣನ ದಿವ್ಯನಾಮಗಳನ್ನು ಆಲಿಸಬಹುದು ಮತ್ತು ಸ್ವಲ್ಪಮಟ್ಟಿಗೆ ಸಂತುಷ್ಟನಾಗಬಹುದು. ಶ್ರೀಕೃಷ್ಣನ ದಿವ್ಯನಾಮಗಳನ್ನು ಆಲಿಸಲು ನನಗೆ ಲಕ್ಷಾಂತರ ಕಿವಿಗಳು ಬೇಕು." ಶ್ರೀಕೃಷ್ಣನ ದಿವ್ಯನಾಮವು ಯಾರ ಗಮನವನ್ನು ಸೆಳೆದಿರುತ್ತದೋ ಆ ವ್ಯಕ್ತಿಯ ಸ್ಥಿತಿ ಹೀಗಾಗುತ್ತದೆ. ಆನಂದ ಪರವಶತೆಯ ಸಾಗರದಲ್ಲಿ

ಮುಳುಗಿ ತಾನು ಮೈಮರೆಯುತ್ತಾನೆ, ಮೂರ್ಛೆಹೋಗುತ್ತಾನೆ. "ನಾನು ಶ್ರೀ ಕೃಷ್ಣನ ದಿವ್ಯನಾಮದ ಸಾರದ ಗುಣ ಪ್ರಮಾಣಗಳನ್ನು ಅರಿಯುವಲ್ಲಿ ವಿಫಲನಾದೆ, ನನಗೆ ದಿಕ್ಕು ತೋಚದಂತಾಗಿದೆ, ಎಂಥಹ ಮಧುರವಾದ ಸವಿಯನ್ನು ಈ ದಿವ್ಯನಾಮವು ಹೊಂದಿದೆ" ಎಂದು ಅತಿಯಾದ ನಿರಾಶೆಯಿಂದ ನುಡಿಯುತ್ತಾನೆ.

## ಶ್ರೀಕೃಷ್ಣನ ಚಾಮತ್ಕಾರಿಕ ವೇಣು ವಾದನ

"ಪರಾತ್ಪರ ಮಾಧುರ್ಯತೆಯನ್ನು ಪ್ರತಿನಿಧಿಸುವ ಶ್ರೀಕೃಷ್ಣನ ದಿವ್ಯನಾಮವನ್ನು ಯುಕ್ತವಾಗಿ ಜಪಿಸಿರಿ" ಎಂದು ಶ್ರೀಚೈತನ್ಯ ಮಹಾಪ್ರಭುಗಳು ಉಪದೇಶಿಸುತ್ತಾರೆ. ಅದೇ ಮಾಧುರ್ಯತೆಯು ಶ್ರೀಕೃಷ್ಣನ ವೇಣುವಾದನದಲ್ಲಿ ಕೂಡಾ ಕಂಡುಬರುತ್ತದೆ. ಎಲ್ಲರನ್ನು ಮತ್ತು ಎಲ್ಲವನ್ನೂ ಚಿತ್ತಾಕರ್ಷಿಸಿ ಸ್ವಾಧೀನಪಡಿಸಿಕೊಳ್ಳುವ ಅದ್ಭುತ ಚಾಮತ್ಕಾರಿಕ ಶಕ್ತಿ ಶ್ರೀಕೃಷ್ಣನ ವೇಣುವಾದನದ ಶಬ್ದದಲ್ಲಿದೆ. ಶ್ರೀಕೃಷ್ಣನ ಕೊಳಲಿನ ಧ್ವನಿಯನ್ನು ಕೇಳಿದೊಡನೆ ಯಮುನೆಯ ಪ್ರವಾಹದ ಗತಿ ನಿಧಾನವಾಯಿತು. ಶ್ರೀಕೃಷ್ಣನ ಕೊಳಲಿನ ಮಧುರ ಧ್ವನಿಯು ಮರಗಿಡ, ಮೃಗಪಕ್ಷಿಗಳನ್ನೂ ಆಕರ್ಷಿಸುತ್ತದೆ. ಶ್ರೀಕೃಷ್ಣನ ಕೊಳಲಿನ ಧ್ವನಿಯ ತರಂಗಗಳ ಮಧುರಕಂಪನವು ಎಲ್ಲರನ್ನು ಮತ್ತು ಎಲ್ಲವನ್ನೂ ಸ್ಥಂಭೀಭೂತರನ್ನಾಗಿಸುತ್ತದೆ.

ದಿವ್ಯಶಬ್ದದ ಕಂಪನಗಳು ಪವಾಡಗಳನ್ನುಂಟುಮಾಡಬಲ್ಲವು; ಎಲ್ಲರನ್ನೂ ಚಿತ್ತಾಕರ್ಷಿಸಿ ಸಮ್ಮೋಹಗೊಳಿಸುವಂತಹ ಉನ್ನತವಾದ ಅದ್ಭುತಶಕ್ತಿ ದಿವ್ಯಶಬ್ದದಲ್ಲಿದೆ. ಈ ಶಬ್ದವು ಏನನ್ನಾದರೂ ಕಟ್ಟಬಲ್ಲದು ಅಥವಾ ಕೆಡವಬಲ್ಲುದು. ಅದು ಏನನ್ನು ಬೇಕಾದರೂ ಮಾಡಬಲ್ಲುದು. ಅದಕ್ಕೆ ಅಂತಹ ಸಹಜ ಸಾಮರ್ಥ್ಯವಿದೆ. ನಾವು ನೋಡುವ ಆಕಾಶದಿಂದಲೂ ಆಚೆಗಿನ ಸೂಕ್ಷ್ಮಾತಿಸೂಕ್ಷ್ಮವಾದ ಒಂದು ಉನ್ನತ ನೆಲೆಯಿಂದ ಆ ದಿವ್ಯಶಬ್ದವು ಹೊರಡುತ್ತದೆ. ಈ ಸರ್ವಮಾನ್ಯ ಶಬ್ದವು ಅಪ್ರತಿಮವಾದ ಸವಿಯುಳ್ಳದ್ದು ಮತ್ತು ಅತ್ಯಂತ ಶುಭದಾಯಕವಾದದ್ದು. ಅದು ಎಷ್ಟೊಂದು ಶಕ್ತಿಯುತವಾದದ್ದು ಮತ್ತು ಅದು ಹೇಗೆ ನಮ್ಮನ್ನು ಬಂದಿಯಾಗಿಸುತ್ತದೆಂದರೆ, ಆ ಸವಿಯಾದ ಶಬ್ದದ ಪ್ರವಾಹದಲ್ಲಿ ನಾವು ಒಂದು ಹುಲ್ಲಿನ ಎಸಳಿನಂತೆ ಓಲಾಡುತ್ತಾ ಮೈಮರೆಯುವಂತೆ ಮಾಡಬಲ್ಲುದು. ಅಲ್ಲಿ ನಮ್ಮನ್ನು ನಾವೇ ಕಳೆದುಕೊಳ್ಳಬಹುದು, ಆದರೆ ನಾವು ಮರಣಹೊಂದುವುದಿಲ್ಲ, ಏಕೆಂದರೆ ಆತ್ಮವು ಶಾಶ್ವತವಾದದ್ದು. ಮೇಲೆ ಕೆಳಗೆ ಎಗರಾಡುತ್ತಾ ಆ ಸವಿಯಾದ ಶಬ್ದದ ಪ್ರವಾಹದಿಂದ ನಾವು ಆಡಿಸಲ್ಪಡುತ್ತೇವೆ.

ನಾವು ಒಂದು ಹುಲ್ಲಿನ ಕಡ್ಡಿಗಿಂತ, ಅದರ ಒಂದು ಎಸಳಿಗಿಂತಲೂ ಕಡಿಮೆ ಅರ್ಹತೆಯುಳ್ಳವರು. ಕೃಷ್ಣನ ಕೊಳಲಿನ ಧ್ವನಿಯು ಎಷ್ಟು ದೊಡ್ಡದು ಮತ್ತು ಎಷ್ಟು ಸವಿಯಾದದ್ದೆಂದರೆ, ಅದು ನಮ್ಮನ್ನು ಹೇಗೆ ಬೇಕಾದರೂ ಆಡಿಸಬಲ್ಲುದು. ಅಪ್ರತಿಮ ಸದ್ಗುಣತೆಗೆ ಮತ್ತು ಸವಿಗೆ ಸಮನಾಗಿರುವ ಆ ದಿವ್ಯನಾಮ ಮತ್ತು ದಿವ್ಯಶಬ್ದಕ್ಕೆ ಎಷ್ಟು ಶಕ್ತಿಯಿದೆ ಎಂಬುದನ್ನು ನಾವು ಕಲ್ಪಿಸುವುದನ್ನು ಪ್ರಾರಂಭಿಸಲಿಕ್ಕೂ ಆಗದು. "ಸ್ವಯಮ್ ಕೃಷ್ಣನಿಂದ ಭಿನ್ನವಲ್ಲದ ಅವನನಾಮ ಮತ್ತು ಅದರಶಬ್ದವನ್ನು ಕಡೆಗಣಿಸಬೇಡಿ" ಎಂದು ಶ್ರೀ ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ. ಅಪ್ರತಿಮ ಸವಿ ಮತ್ತು ಸದ್ಗುಣಗಳೆರಡೂ ಶ್ರೀಕೃಷ್ಣನ ದಿವ್ಯನಾಮದಲ್ಲಿವೆ. ತುಂಬಾ ಸುಲಭವಾಗಿ ಮತ್ತು ಉಚಿತವಾಗಿ ಈ ದಿವ್ಯನಾಮವು ತನ್ನನ್ನು ತಾನು ನಮಗೆಲ್ಲರಿಗೂ ಪ್ರದಾನಿಸುತ್ತಿದೆ. ಇದನ್ನು ಗಳಿಸಲು ದೈಹಿಕ ಪರಿಶ್ರಮದ ಅಥವಾ ಧನರಾಶಿಯ ಅಗತ್ಯವಿಲ್ಲ. ಹಾಗಾದರೆ ಇದನ್ನು ಗಳಿಸಲು ಬೇಕಾಗಿರುವುದೇನು? ಕೇವಲ ಪ್ರಾಮಾಣಿಕತೆ! ಒಬ್ಬನು ಸುಮ್ಮನೆ ಈ ದಿವ್ಯಶಬ್ದವನ್ನು ಪ್ರಾಮಾಣಿಕವಾಗಿ ಸ್ವೀಕರಿಸಿದನೆಂದಾದರೆ, ಅವನು ಯಾರೂ ಊಹಿಸಲಾಗದಷ್ಟು ಅಭಿವೃದ್ಧಿ ಮತ್ತು ಸದ್ಗುಣಗಳಿಂದ ಸಮೃದ್ಧನಾಗುತ್ತಾನೆ. ಯಾರು ಬೆಕಾದರೂ ಈ ದಿವ್ಯ ನಾಮವನ್ನು ಬಹಳ ಅಗ್ಗವಾಗಿ ಗಳಿಸಬಹುದು, ಆದರೆ ಇದನ್ನು ಪ್ರಾಮಾಣಿಕವಾಗಿ ಮತ್ತು ಹೃತ್ಪೂರ್ವಕವಾಗಿ ಜಪಿಸತಕ್ಕದ್ದು. ಸತ್ಯಾನ್ವೇಷಕನ ಮನಃಪೂರ್ವಕ ಪ್ರಾಮಾಣಿಕತೆಯೇ ಒಬ್ಬ ಸಂತನಿಂದ ಅಥವಾ ಒಬ್ಬ ಅಧಿಕೃತ ಪ್ರತಿನಿಧಿಯಿಂದ ಈ ದಿವ್ಯನಾಮವನ್ನು ಸ್ವೀಕರಿಸುವಂತೆ ಅವನನ್ನು ಪ್ರೇರೇಪಿಸುತ್ತದೆ.

ಶ್ರೀ ರಾಧಾಗೋವಿಂದರ ಏಕೀಭಾವವಾಗಿ ಅವತರಿಸಿ, ಸಂಕೀರ್ತನ ಆಂದೋಳನವನ್ನು ಉದ್ಘಾಟಿಸಿದ ಚೈತನ್ಯ ಮಹಾಪ್ರಭುಗಳು, ಶ್ರೀಕೃಷ್ಣ ಸಂಕೀರ್ತನೆಯನ್ನು ಶ್ಲಾಘಿಸಿದ್ದಾರೆ. "ಮೋಕ್ಷದ ಪರಿಣಾಮವನ್ನು, ಸಕಲ ಪರಿಪೂರ್ಣತೆಯನ್ನು, ಮತ್ತು, ಅಚಿಂತ್ಯವಾದ ಸವಿಯಲ್ಲಿ ಮತ್ತು ಪರಮಾನಂದದ ಸಾಗರದಲ್ಲಿ ನಾವು ಮೈಮರೆಯುವಂತಹ ಸಕಾರಾತ್ಮಕ ಪ್ರಾಪ್ತಿಯನ್ನು ಪ್ರದಾನಿಸುವ ಶ್ರೀಕೃಷ್ಣ ಸಂಕೀರ್ತನೆಯಲ್ಲಿ ಎಲ್ಲರೂ ತುಂಬು ಉತ್ಸಾಹದಿಂದ ಮತ್ತು ಪ್ರಾಮಾಣಿಕತೆಯಿಂದ ಪಾಲ್ಗೊಳ್ಳಬೇಕು" ಎಂಬ ಶ್ರೀ ಚೈತನ್ಯ ಮಹಾಪ್ರಭುಗಳ ಉಪದೇಶವು ಅತ್ಯಂತ ಉಪಯುಕ್ತವಾದದ್ದಾಗಿದೆ.

"ಶ್ರೀಕೃಷ್ಣ ಸಂಕೀರ್ತನೆಯು ಮರ್ತ್ಯಲೋಕಕ್ಕೆ ವಿಸ್ತರಿಸಲಿ, ಎಲ್ಲಾ ಜಗತ್ತುಗಳಿಗೆ ಇದು ಶ್ರೇಷ್ಠ ಹಾಗೂ ಉನ್ನತ ಪ್ರಯೋಜನವಾದುದರಿಂದ ಇದು ಎಲ್ಲರಿಗೂ ಶಾಶ್ವತವಾದ

ಪ್ರಯೋಜನವನ್ನು ನೀಡಬಲ್ಲುದು, ನಮ್ಮನ್ನು ಎಲ್ಲಾ ತರಹದ ಸಂಕಷ್ಟಗಳಿಂದ ಬಿಡುಗಡೆಗೊಳಿಸಿ, ಅತ್ಯುಚ್ಚ ಸ್ಥಾನದ ಪ್ರಾಪ್ತಿಯಲ್ಲಿ ನಮ್ಮನ್ನು ಸಂಸ್ಥಾಪಿಸಲು ಸಹಾಯಕವಾಗಬಲ್ಲ ಎಲ್ಲವನ್ನೂ ಇದು ಒಳಗೊಂಡಿದೆ'' ಎಂದು ಶ್ರೀ ಚೈತನ್ಯ ಮಹಾಪ್ರಭುಗಳು ಸಾರುತ್ತಾರೆ. ಇದು ಶ್ರೀ ಚೈತನ್ಯ ಮಹಾಪ್ರಭುಗಳ ಕೃಪೆ.

ಪ್ರಸಕ್ತ ಹೀನದರ್ಜೆಯ ಕಾಲವಾದ ಕಲಿಯುಗದಲ್ಲಿ ನಾಮ ಸಂಕೀರ್ತನವೊಂದೇ ನಮಗೆ ಸಹಕಾರಿಯಾಗಬಲ್ಲುದು. ಅವಶ್ಯವಾಗಿ ಇದು ಎಲ್ಲ ಯುಗಗಳಲ್ಲಿಯೂ ಪ್ರಯೋಜನಕಾರಿಯಾದುದು, ಆದರೆ, ಇತರ ಎಲ್ಲ ಪ್ರಯತ್ನಗಳು ವಿವಿಧ ಶಕ್ತಿಗಳಿಂದ ವಿರೋಧಿಸಲ್ಪಡುವ ಕಲಿಯುಗದಲ್ಲಿ ಇದನ್ನು ವಿಶೇಷವಾಗಿ ಶಿಫಾರಸು ಮಾಡಲಾಗಿದೆ. ನಾಮ ಸಂಕೀರ್ತನವು ಯಾವುದೇ ಸಂಕಷ್ಟಗಳಿಂದಾಗಲೀ, ಅಥವಾ ಯಾವುದೇ ಭೌತಜಗತ್ತಿನ ಅಲೆಗಳಿಂದಾಗಲೀ, ವಿರೋಧಿಸಲ್ಪಡಲಾರದು. ಆದುದರಿಂದ ಇದನ್ನು ಎಲ್ಲರೂ ಅಗತ್ಯವಾಗಿ ಸ್ವೀಕರಿಸಲೇಬೇಕು. ನಮ್ಮನ್ನು ನಾವು ಇದಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಂಡೆವೆಂದಾದರೆ, ನಾವು ಜೀವನದ ಅತ್ಯುನ್ನತ ಪರಿಪೂರ್ಣತೆಯನ್ನು ಗಳಿಸುತ್ತೇವೆ. ಬೇರೆ ಯಾವುದೇ ಅಭಿಯಾನದ ಅವಶ್ಯಕತೆಯೂ ಅಗತ್ಯವಿಲ್ಲ, ಏಕೆಂದರೆ, ಇತರ ಎಲ್ಲಾ ವಿಧಾನಗಳೂ ದೋಷಪೂರಿತವಾದವುಗಳು ಮತ್ತು ಅಪೂರ್ಣವಾದವುಗಳಾಗಿರುತ್ತವೆ. ಹಾಗಾಗಿ, ಅತ್ಯಂತ ಪ್ರಯೋಜನಕಾರಿ, ಮನಮೋಹಕ ಮತ್ತು ಸಾರ್ವತ್ರಿಕವಾದ ಪ್ರಕ್ರಿಯೆಯೇ ನಾಮಸಂಕೀರ್ತನ. ಇದು ನಮ್ಮನ್ನು ಬದುಕಿನ ಅತ್ಯಂತ ಉನ್ನತ ಗುರಿಗೆ ಕೊಂಡೊಯ್ಯುತ್ತದೆ ಮತ್ತು ಇದೊಂದೇ ಎಲ್ಲರನ್ನೂ ಎಲ್ಲಾ ಕಾಲದಲ್ಲಿ ಸಾರ್ವತ್ರಿಕವಾಗಿ ಮತ್ತು ಸಂಪೂರ್ಣವಾಗಿ ಸಂತುಷ್ಟಿಗೊಳಿಸಬಲ್ಲುದು.

ಕೃಷ್ಣನಿಂದ ಸಂಪರ್ಕ ಕಡಿದುಕೊಂಡ ಎಲ್ಲಾ ಜೀವಾತ್ಮರೂ ಈ ಮೂಲಕ ಸಹಾಯವನ್ನು ಹೊಂದಬಹುದು. ಬೇರೆ ಯಾವ ಆಂದೋಳನದ ಅಗತ್ಯವೂ ಇಲ್ಲ. ``ಶ್ರೀಕೃಷ್ಣನ ನಾಮಸಂಕೀರ್ತನಕ್ಕೆ ನಿಮ್ಮನ್ನು ನೀವು ಪ್ರತ್ಯೇಕವಾಗಿ ತೊಡಗಿಸಿಕೊಳ್ಳಿ. ಇದು ಎಲ್ಲರನ್ನೂ ಸ್ವೀಕರಿಸುವಂಥದ್ದು ಮತ್ತು ಪರಿಪೂರ್ಣತೆಯನ್ನು ನೀಡುವಂಥದ್ದು. ಯಾವುದೇ ಕಷ್ಟವಿಲ್ಲದೇ ಅತ್ಯಂತ ಕಡಿಮೆ ಶಕ್ತಿಯನ್ನು ಉಪಯೋಗಿಸಿ ಇದನ್ನು ಸಾಧಿಸಬಹುದು. ಈ ಕಲಿಯುಗದಲ್ಲಿ ಇದು ಉಚ್ಛ್ರಾಯಗೊಳ್ಳಲಿ, ಎಲ್ಲ ಜೀವಾತ್ಮರನ್ನು ತಂತಮ್ಮ ಸಹಜ ಸ್ಥಾನದಲ್ಲಿ ಪುನಃ ಸಂಸ್ಥಾಪಿಸಲಿ ಮತ್ತು ಸಕಲ ಜಗತ್ತಿನ ಏಳಿಗೆಗೋಸ್ಕರ ಸಂಮೃದ್ಧಿ ಹೊಂದಲಿ'' ಎಂದು ಶ್ರೀ ಚೈತನ್ಯ ಮಹಾಪ್ರಭುಗಳು ನಮಗೆ ಹೇಳುತ್ತಾರೆ.

"ನಾಮ ಸಂಕೀರ್ತನಮ್ ಯಸ್ಯ ಸರ್ವಪಾಪ ಪ್ರಣಾಶನಮ್
ಪ್ರಣಾಮೋ ದುಃಖ ಶಮನಃ ತಮ್ ನಮಾಮಿ ಹರಿಮ್ ಪರಮ್"

ಎಂಬ ಶ್ರೀಮದ್ಭಾಗವತದ ಕೊನೆಯ ಶ್ಲೋಕದ ಮೂಲಕ ಶ್ರಿ ವ್ಯಾಸಮಹರ್ಷಿಗಳು ಕಟ್ಟಕಡೆಯ ಉಪಸಂಹಾರವನ್ನು ನೀಡಿದ್ದಾರೆ.

ಪಾಪ ಅಂದರೆ, ಕ್ರಮರಹಿತ ಅಥವಾ ಹಾದಿತಪ್ಪಿದ ಬದುಕು ಎಂದರ್ಥ. ಪಾಪಪೂರ್ಣಕ್ರಿಯೆಗಳು, ಭೌತಿಕ ಆನಂದ ಹಾಗೂ ಮೋಕ್ಷದ ಬಯಕೆಗಳೂ ಇದರಲ್ಲಿ ಒಳಗೊಡಿವೆ. ಮೋಕ್ಷದ ಬಯಕೆ ಏಕೆ ಪಾಪಪೂರ್ಣ? ಏಕೆಂದರೆ ಇದೊಂದು ಅಸಹಜ ಸ್ಥಿತಿ. ನಮ್ಮ ಸಹಜ ಕ್ರಿಯೆಯೆಂದರೆ ಶ್ರೀಕೃಷ್ಣನನ್ನು ಭಕ್ತಿಪೂರ್ವಕವಾಗಿ ಸೇವಿಸುವುದು. ಆದರೆ ಮೋಕ್ಷದಲ್ಲಿ ನಾವು ಇದನ್ನು ಮಾಡುವುದಿಲ್ಲ. ಬರೇ ಮೋಕ್ಷ ಶ್ರೀಕೃಷ್ಣನ ಸೇವೆಯನ್ನು ಮಾಡಿದಂತಾಗುವುದಿಲ್ಲವಾದುದರಿಂದ ಇದು ಅಸಹಜ ಸ್ಥಿತಿ ಮತ್ತು ಪಾಪ ಕೂಡಾ. ನಮ್ಮ ಸಹಜ ಕರ್ತವ್ಯವನ್ನು ಕಡೆಗಾಣಿಸಿ ಅದರಿಂದ ಪ್ರತ್ಯೇಕವಾಗಿರುವುದು ಪಾಪಪೂರ್ಣತೆ. "ಶ್ರೀಕೃಷ್ಣನ ದಿವ್ಯನಾಮವು ನಾವು ಇಚ್ಛಿಸದ ಎಲ್ಲಾ ಪಾಪಕರ್ಮಗಳಿಂದ ಎಲ್ಲಾ ಕೆಟ್ಟನಡತೆಗಳಿಂದ ಮತ್ತು ಎಲ್ಲಾ ಕ್ಲೇಶಗಳಿಂದ ನಮ್ಮನ್ನು ಬಿಡುಗಡೆಗೊಳಿಸುತ್ತದೆ. ನಾವೆಲ್ಲರೂ ಅವನಿಗೆ ತಲೆಬಾಗೋಣ" ಎಂದು ಶ್ರೀಮದ್ಭಾಗವತದ ಅಂತಿಮ ಶ್ಲೋಕವು ಹೇಳುತ್ತದೆ. ಇದನ್ನು ಹೇಳುತ್ತಾ ಶ್ರೀಮದ್ಭಾಗವತವು ನಿಂತುಹೋಗುತ್ತದೆ, ಒಂದು ದಿವ್ಯ ಪ್ರಬಂಧವು ಮೌನವಾಗುತ್ತದೆ. ಶ್ರೀಮದ್ಭಾಗವತದ ಕೊನೆಯ ಶಬ್ದ ನಾಮಸಂಕೀರ್ತನ. ಶ್ರೀಮದ್ಭಾಗವತವು ಶ್ರೀಕೃಷ್ಣನ ದಿವ್ಯನಾಮದ ಜಪಕ್ಕೆ ಉನ್ನತವಾದ ಮಹತ್ವವನ್ನು ಕೊಟ್ಟಿದೆ ಮತ್ತು ಶ್ರೀ ಚೈತನ್ಯ ಮಹಾಪ್ರಭುಗಳು ಅದನ್ನು ಅಲ್ಲಿಂದ ಅಭಿವೃದ್ಧಿಗೊಳಿಸಿದ್ದಾರೆ.

ಎಲ್ಲಾ ವೈದಿಕ ಸಾಹಿತ್ಯಗಳ ಕರ್ತೃವಾದ ಶ್ರೀ ವ್ಯಾಸಮಹರ್ಷಿಗಳ ಕೊನೆಯ ಪ್ರಕಟಣೆಯಾದ ಶ್ರೀಮದ್ಭಾಗವತವು ಆಸ್ತಿಕತೆಯನ್ನು ಆ ಹಂತಕ್ಕೆ ತಂದು ಈ ರೀತಿ ಸಾರುತ್ತಾ ಅದನ್ನು ಸಾರ್ವಜನಿಕರಿಗೆ ಕೊಟ್ಟಿರುತ್ತದೆ. "ಶ್ರೀಕೃಷ್ಣನ ನಾಮವನ್ನು ಜಪಿಸಿರಿ! ಇದೊಂದನ್ನು ಮಾಡಿ! ಬೇರೆ ಯಾವುದರ ಅವಶ್ಯಕತೆಯೂ ಇಲ್ಲ, ಇದನ್ನು ಸ್ವೀಕರಿಸಿ" ಇದು ಭಾಗವತದ ನಿರ್ಣಯ, ಶ್ರೀ ವ್ಯಾಸದೇವರ ಶ್ರೇಷ್ಠ ಆಧ್ಯಾತ್ಮಿಕ ಉಡುಗೊರೆ! "ಶ್ರೀಕೃಷ್ಣನ ದಿವ್ಯನಾಮವನ್ನು ಜಪಿಸಿ ಮತ್ತು ಅಂಧಕಾರದ ಜಗತ್ತಿನಲ್ಲಿ ಅತ್ಯಂತ ಉದಾರವಾದ ಮತ್ತು ವಿಶಾಲವಾದ ವಿಚಾರಗಳೊಂದಿಗೆ ನಿಮ್ಮ ಜೀವನವನ್ನು ಪ್ರಾರಂಭಿಸಿ!"

ಉದಾತ್ತವಾದ ಮತ್ತು ಬಹುಯುಕ್ತವಾದ ಈ ವಿಚಾರದ ಅಂಚಿಗೆ ತಲುಪಿದ್ದು, ಈ ವಿಚಾರವನ್ನು ಸ್ಪರ್ಶಿಸಿ, ಸ್ವೀಕರಿಸಿ ನಮ್ಮ ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಈ ವಿಚಾರದ ಅಲೆಗಳಲ್ಲಿ ತೇಲಾಡುವಷ್ಟು ಸಮೀಪಿಸಿದುದಕ್ಕೆ ನಮ್ಮನ್ನು ನಾವು ಭಾಗ್ಯವಂತರೆಂದು ಪರಿಗಣಿಸಬಹುದು. ಎಷ್ಟೋ ಹಲವು ವಿಚಾರಗಳ ಮೂಲಕ ಮತ್ತು ವಿವಿಧ ಆಕರ್ಷಕ ಪ್ರತೀಕ್ಷೆಗಳ ಮೂಲಕ ಹಾದುಬಂದು, ಅವುಗಳನ್ನೆಲ್ಲಾ ಹಿಂದಕ್ಕೆ ಬಿಟ್ಟು, ನಾಮಸಂಕೀರ್ತನೆಯ ಸಾಗರದ ದಡದಲ್ಲಿ ನಿಂತಿರುತ್ತೇವೆ. ಈಗ ಶ್ರೀ ಗುರುವಿನ ಅನುಗ್ರಹ ಮತ್ತು ವೈಷ್ಣವರ ದಯೆಯಿಂದ ಈ ವಿಶಾಲ ಸಾಗರದಲ್ಲಿ ಧುಮುಕಿ, ನಾಮಸಂಕೀರ್ತನೆಯ ಅಮೃತಸುಧೆಯ ಅಲೆಗಳಲ್ಲಿ ಈಜಾಡಲು ಪ್ರಾರಂಭಿಸಬಹುದು.

ಇದು ಅವರ ಆಸ್ತಿ ಮತ್ತು ನಾವು ಇಲ್ಲಿ ಅವರ ಗುಲಾಮರು. ನಾಮ ಸಂಕೀರ್ತನೆಯ ಈ ಅಮೃತ ಸಾಗರಕ್ಕೆ ನಮ್ಮ ದೇಹಗಳನ್ನೆಸೆದು ಇಲ್ಲಿ ಈಜಾಡುವಂತಹ ದಿಟ್ಟತನ ನಮಗಿದೆ! ಆಧ್ಯಾತ್ಮಿಕ ಸಿದ್ಧಿಯ ಅತ್ಯಂತ ಉನ್ನತ ವಿಚಾರವಾದ ಶ್ರೀ ರಾಧಾಕುಂಡದಲ್ಲಿ ಈಜಾಡುವ ವಿಚಾರವನ್ನು ಕೂಡಾ ನಾಮಸಂಕೀರ್ತನೆಯ ಅತ್ಯುನ್ನತ ರೂಪದಲ್ಲಿ ಕಾಣಬಹುದು. ಶಿಕ್ಷಾಷ್ಟಕದ ಈ ಮೊದಲನೇಯ ಶ್ಲೋಕವು ಶ್ರೀಕೃಷ್ಣ ಸಂಕೀರ್ತನೆಯ ಅಗಾಧ ಸಾಗರದ ಸಕಾರಾತ್ಮಕ ಭಾಗವನ್ನು ಪ್ರತಿನಿಧಿಸುತ್ತದೆ. ಮುಂದಿನ ಶ್ಲೋಕವು ಸಕಾರಾತ್ಮಕ ಸಾಧ್ಯತೆಗಳನ್ನು ವಿವರಿಸುತ್ತದೆ.

ಶ್ರೀಲ ಭಕ್ತಿವಿನೋದ ಠಾಕೂರರು ಶಿಕ್ಷಾಷ್ಟಕಕ್ಕೆ ಸಂಸ್ಕೃತ ಟಿಪ್ಪಣಿಯನ್ನು ಹಾಗೂ ಬಾಂಗ್ಲಾ ಅನುವಾದವನ್ನು ನೀಡಿದ್ದಾರೆ, ಮತ್ತು ಅವರ ಟಿಪ್ಪಣಿಯು ಮೊತ್ತಮೊದಲ ಪ್ರಸ್ತುತಿಯಾಗಿರುತ್ತದೆ. ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರ ಪ್ರಭುಪಾದರು ಕೂಡಾ ಶಿಕ್ಷಾಷ್ಟಕಕ್ಕೆ ತಮ್ಮ ಟಿಪ್ಪಣಿಯನ್ನು ನೀಡಿರುತ್ತಾರೆ. ಇವೆರಡು ಟಿಪ್ಪಣಿಗಳ ಪ್ರಮುಖ ಅಂಶಗಳನ್ನು ಸಮಗ್ರವಾಗಿ ಅರ್ಥೈಸಿಕೊಳ್ಳಲು ಅವುಗಳನ್ನು ಬಹಳ ಜಾಗರೂಕತೆಯಿಂದ ಓದಬೇಕಾಗುತ್ತದೆ. ಹಾಗಾಗಿ, ಈ ವಿಷಯಗಳಲ್ಲಿ ನನ್ನ ಮನಸ್ಸಿಗೆ ತೋರಿದ ಭಾವನೆಗಳನ್ನು ಹೊರಹಾಕಿದ್ದೇನೆ.

ಈ ಶ್ಲೋಕಗಳಿಂದ ನನ್ನ ಮನಸ್ಸಿಗೆ ಏನು ಅನಿಸಿದೆಯೋ ಅದನ್ನು ನಾನು ವ್ಯಕ್ತಪಡಿಸಿದ್ದೇನೆ, ಮತ್ತು ಈ ಭಾವನೆಗಳು, ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರ, ಶ್ರೀಲ ಭಕ್ತಿವಿನೋದ ಠಾಕೂರ, ಶ್ರೀಲ ರೂಪಗೋಸ್ವಾಮಿ, ಶ್ರೀಲ ಸನಾತನ ಗೋಸ್ವಾಮಿ, ಶ್ರೀ ಚೈತನ್ಯ

ಮಹಾಪ್ರಭುಗಳು ಮತ್ತು ಎಲ್ಲಾ ಪೂರ್ವಾಚಾರ್ಯರುಗಳಿಂದ ನಾನು ಗಳಿಸಿದುದರ ಫಲಿತಾಂಶವಾಗಿರುತ್ತದೆ. ಅವರ ದಯೆಯಿಂದ ನನ್ನ ಉಗ್ರಾಣದಲ್ಲಿ ಕೂಡಿಟ್ಟ ದ್ರವ್ಯಗಳ ದಿವ್ಯ ಸಾರಾಂಶವನ್ನು ನಿಮ್ಮೆಲ್ಲರಿಗೆ ಕೊಡಲು ಪ್ರಯತ್ನಿಸುತ್ತಿದ್ದೇನೆ.

## ಶ್ರೀಕೃಷ್ಣ ತತ್ತ್ವವು ಎಲ್ಲವನ್ನೂ ಜಯಿಸುತ್ತದೆ

ಭಕ್ತಿಮಾರ್ಗವನ್ನು ಸ್ವೀಕರಿಸುವುದರಿಂದ ನಮ್ಮ ಆಂತರಿಕ ವ್ಯವಸ್ಥೆಯಲ್ಲಿ ಸಾರಾಸಗಟು ಪರಿವರ್ತನೆ ಪ್ರಾರಂಭವಾಗುತ್ತದೆ, ಮತ್ತು ಕ್ರಮೇಣ ಬಾಹ್ಯ ಜಗತ್ತಿನ ವಿಷಯಗಳ ಬಗ್ಗೆ ನಮಗಿರುವ ಆಕರ್ಷಣೆಯು ಮಾಯವಾಗುತ್ತದೆ. ಒಳಗೆ ಒಂದು ಯುದ್ಧ ನಡೆಯುತ್ತದೆ ಮತ್ತು ಯಾವಾಗ ನಮ್ಮ ಹೃದಯದೊಳಗೆ ಕೃಷ್ಣ ತತ್ತ್ವವು ಪ್ರವೇಶಿಸುತ್ತದೋ ಆವಾಗ ಇತರ ಎಲ್ಲಾ ಅನಗತ್ಯ ವಿಚಾರಗಳು ಮತ್ತು ಯೋಚನೆಗಳು ಕ್ರಮೇಣ ನಿವೃತ್ತಿ ಹೊಂದಲೇಬೇಕಾಗುತ್ತದೆ. ಇದನ್ನು ಶ್ರೀಮದ್ಭಾಗವತದ ಎರಡನೇ ಸ್ಕಂಧದ ಎಂಟನೇ ಅಧ್ಯಾಯದ ಐದನೇ ಶ್ಲೋಕದಲ್ಲಿ ವಿವರಿಸಿದೆ.

ಪ್ರವಿಷ್ಟಃ ಕರ್ಣರಂಧ್ರೇಣ ಸ್ವಾನಾಮ್ ಭಾವಸರೋರುಹಮ್
ಧುನೋತಿ ಶಮಲಮ್ ಕೃಷ್ಣಃ ಸಲಿಲಸ್ಯ ಯಥಾ ಶರತ್

ಶರತ್ಕಾಲ ಬಂದಾಗ, ನೀರಿನಲ್ಲಿರುವ ಮಣ್ಣು ಮಾಯವಾಗುತ್ತದೆ. ಇದೇ ರೀತಿ, ಶ್ರೀಕೃಷ್ಣ ತತ್ತ್ವವು ಒಬ್ಬನ ಹೃದಯವನ್ನು ಪ್ರವೇಶಿಸಿದಾಗ, ಎಲ್ಲಾ ಬೇರೆ ವಿಚಾರಗಳು ಮತ್ತು ಬಯಕೆಗಳು ಎಲ್ಲವನ್ನೂ ಕೃಷ್ಣನ ಆಧೀನಕ್ಕೆ ಕೊಟ್ಟು ನಿವೃತ್ತಿಹೊಂದಲೇಬೇಕು. ಕೃಷ್ಣಪ್ರಜ್ಞೆಯ ನಿಜವಾದ ಒಂದು ಹನಿ ಹೃದಯದೊಳಗೆ ಪ್ರವೇಶಿಸಿದಾಗ, ಕೃಷ್ಣನು ನಮ್ಮ ಹೃದಯ ಸಾಮ್ರಾಜ್ಯವನ್ನು ಜಯಿಸಿ ಒಡೆತನವನ್ನು ಸ್ವೀಕರಿಸುತ್ತಿದ್ದಹಾಗೆ, ವಿರೋಧಿ ಶಕ್ತಿಗಳೆಲ್ಲವೂ ಹೊರಟುಹೋಗಲೇಬೇಕು.

ಇದೇ ಕೃಷ್ಣಪ್ರಜ್ಞೆಯ ಲಕ್ಷಣ; ಯಾವುದೂ ಅದರೊಡನೆ ಸ್ಪರ್ಧೆಗೆ ನಿಲ್ಲಲಾರದು. ಯಾವುದೇ ಪ್ರಾಪಂಚಿಕ ಧರ್ಮಶ್ರದ್ಧೆಗಳು ಅಥವಾ ಭಕ್ತಿಯೆಂದು ಕರೆಯಲ್ಪಡುವ ಇತರ ದೇವತೆಗಳ ಆರಾಧನೆ ಕೂಡಾ! ಆಸ್ತಿಕತೆಯ ಇತರ ಎಲ್ಲಾ ವಿಚಾರಗಳು, ಕೃಷ್ಣತತ್ತ್ವಕ್ಕೆ ರಣರಂಗವನ್ನು ಒಪ್ಪಿಸಿ ತಾವೆಲ್ಲರೂ ನಿವೃತ್ತರಾಗಲೇಬೇಕು. ಯಾವ ಆಕ್ರಮಣಕಾರರೂ ಮಧುರಸೌಂದರ್ಯ ಹಾಗೂ ನಿರಂಕುಶವಾದ ಶ್ರೀಕೃಷ್ಣನ ಪ್ರಜ್ಞೆಯೊಂದಿಗೆ ಯುದ್ಧದಲ್ಲಿ ನಿಲ್ಲಲಾರರು.

ಸೌಂದರ್ಯ, ಮಧುರತೆ ಮತ್ತು ಆಕರ್ಷಣೆ ಅಧಿಕಾರವನ್ನು ಸೋಲಿಸಿ ಅದನ್ನು ಬಂದಿಯಾಗಿಸಬಲ್ಲುದು. ನಾವುಗಳು ನಿಜವಾಗಿಯೂ; ಸೌಂದರ್ಯ, ಮಧುರತೆ, ದಯೆ, ಮಮತೆ ಮತ್ತು ದಿವ್ಯ ಪ್ರೇಮಗಳನ್ನು ಬಯಸುತ್ತೇವೆ. ಇನ್ನೊಬ್ಬರ ಹಾನಿಯನ್ನು ಭರಿಸಲು ತನ್ನ ಸ್ವಂತ ಶಕ್ತಿ ಮತ್ತು ಔದಾರ್ಯತೆಯ ವ್ಯಯವು ಅಂತಿಮವಾಗಿ ಎಲ್ಲವನ್ನೂ ಜಯಿಸುತ್ತದೆ. ಇತರರಿಂದ ತೆಗೆದುಕೊಳ್ಳುವುದಕ್ಕಿಂತ, ಕೊಡುವುದರಲ್ಲಿ ಹೆಚ್ಚಿನ ಪ್ರತಿಫಲವಿದೆ. ದಿವ್ಯಪ್ರೇಮವೆಂದರೆ "ಬದುಕುವುದಕ್ಕಾಗಿ ಸಾಯುವುದು" ತನಗಾಗಿ ಬದುಕುವುದಲ್ಲ ಆದರೆ ಇತರರಿಗಾಗಿ ಬದುಕುವುದು. ತನ್ನ ಸ್ವಂತಿಕೆಯನ್ನು ಮರೆಯುವ ಉತ್ಕಟತೆಯ, ಅತ್ಯುನ್ನತ ಔದಾರ್ಯತೆಯ ಬದುಕಿನ ಮಾದರಿಯು ಕೃಷ್ಣಪ್ರಜ್ಞೆಯಲ್ಲಿ ಕಂಡುಬರುತ್ತದೆ.

ಕೃಷ್ಣಪ್ರಜ್ಞೆಯು ಎಷ್ಟು ಸುಂದರವಾದದ್ದೆಂದರೆ, ಯಾರು ಇದನ್ನು ಬೆಳೆಸಿಕೊಳ್ಳುತ್ತಾನೋ, ಅವನು ತನ್ನ ಸ್ವಂತ ಗುರುತನ್ನು ಮತ್ತು ಆಸ್ತಿತ್ವವನ್ನು ಮರೆತುಬಿಡುತ್ತಾನೆ. ಅವನು ಸಂಪೂರ್ಣವಾಗಿ ತನ್ನತನವನ್ನು ಮರೆತುಬಿಡುತ್ತಾನೆ. ಕೃಷ್ಣಪ್ರಜ್ಞೆಯಲ್ಲಿ ಅಂತಹ ಆಕರ್ಷಣೆಯಿದೆ. ಕೃಷ್ಣನನ್ನು ಯಾರುತಾನೇ ಪ್ರತಿಭಟಿಸಬಹುದು? ಅವನೊಡನೆ ಹೋರಾಡಲು ಬಂದವರೆಲ್ಲರನ್ನೂ ಅವನು ಶಸ್ತ್ರರಹಿತರನ್ನಾಗಿ ಮಾಡುತ್ತಾನೆ. ಯಾವರೀತಿಯಲ್ಲಾದರೂ ಕೃಷ್ಣ ಹೃದಯದೊಳಗೆ ಪ್ರವೇಶಿಸಿದನೆಂದಾದರೆ, ಎಲ್ಲವನ್ನೂ ಅವನು ಸ್ವಾಧೀನಪಡಿಸಿಕೊಳ್ಳುವುದರ ಹೊರತು ಬೇರೆ ಯಾವ ಪರಿಣಾಮವೂ ಉಂಟಾಗಲಾರದು. ಅಂತಹ ದಯಾಳು, ಉದಾರಿ ಮತ್ತು ಮೋಹಕ ವ್ಯಕ್ತಿ ಶ್ರೀಕೃಷ್ಣ! ನೈಜತೆ ಮತ್ತು ಸೌಂದರ್ಯದ ಮೂರ್ತಿ!

## ಶ್ಲೋಕ ೨

**ನಾಮ್ನಾಮಕಾರಿ ಬಹುಧಾ ನಿಜಸರ್ವಶಕ್ತಿಃ**
**ತತ್ರಾಪಿತಾ ನಿಯಮಿತಃ ಸ್ಮರಣೇ ನ ಕಾಲಃ**
**ಏತಾದೃಶೀ ತವ ಕೃಪಾ ಭಗವನ್ಮಮಾಪಿ**
**ದುರ್ದೈವಮೀದೃಶಮಿಹಾಜನಿ ನಾನುರಾಗಃ**

## ಅನುವಾದ

**ಓ ನನ್ನ ಒಡೆಯನೇ! ಭಗವಂತಾ! ನಿನ್ನ ದಿವ್ಯನಾಮವು ಎಲ್ಲರಿಗೂ ಮಂಗಳವನ್ನು ದಯಪಾಲಿಸುತ್ತದೆ. ಕೃಷ್ಣ, ಗೋವಿಂದ ಇತ್ಯಾದಿ ಅನಂತ ಹೆಸರುಗಳಿಂದ ನೀನು ಪ್ರಕಟನಾಗುತ್ತಿ. ನಿನ್ನ ಸಕಲ ದಿವ್ಯಶಕ್ತಿಯನ್ನು ನೀನು ನಿನ್ನ ಅನಂತ ದಿವ್ಯನಾಮಗಳಲ್ಲಿ ಕರುಣೆಯಿಂದ ವಿನಿಯೋಗಿಸಿರುವೆ, ಮತ್ತು ನಿನ್ನ ನಾಮಗಳನ್ನು ಜಪಿಸಲು ನಿರ್ದಿಷ್ಟ ಸ್ಥಳ, ಸಮಯ ಮುಂತಾದ ಯಾವುದೇ ಕಠಿಣ ನಿಯಮಗಳಿಲ್ಲ. ನಿನ್ನ ನಿಷ್ಕಾರಣ ಕೃಪೆಯಿಂದ ನೀನು ಶಬ್ದರೂಪದಲ್ಲಿ ಪ್ರಕಟನಾಗಿರುವೆ. ಆದರೆ! ದೌರ್ಭಾಗ್ಯವಶಾತ್ ನಿನ್ನ ದಿವ್ಯನಾಮಗಳಲ್ಲಿ ನನಗೆ ಅನುರಾಗವೇ ಹುಟ್ಟುತ್ತಿಲ್ಲ.**

## ಭಾವಾರ್ಥ

ಇಲ್ಲಿ "ಓ ನನ್ನ ದೇವಾ! ನಿನ್ನ ದಿವ್ಯನಾಮಗಳ ಜಪವನ್ನು ನೀನು ಪ್ರಕಟಿಸಿರುವೆ ಮತ್ತು ನಿನ್ನ ಸಕಲಶಕ್ತಿಯೂ ಆ ದಿವ್ಯನಾಮಗಳಲ್ಲಿ ವಿನಿಯೋಗವಾಗಿರುತ್ತದೆ" ಎಂದು ಹೇಳಿದ್ದಾರೆ. ಶ್ರೀಕೃಷ್ಣನ ದಿವ್ಯನಾಮ ಮತ್ತು ಅದರ ಶಕ್ತಿ ಎರಡೂ ನಿತ್ಯನಿರಂತರ. ಕೃಷ್ಣನ ಎಲ್ಲಾ ದಿವ್ಯಶಕ್ತಿಗಳು ಅವನ ದಿವ್ಯನಾಮಗಳಲ್ಲೂ ಕಂಡುಬರುತ್ತವೆ ಮತ್ತು ಕೃಷ್ಣನ ದಿವ್ಯನಾಮಗಳನ್ನು ಜಪಿಸಲು ಯಾವುದೇ ನಿರ್ದಿಷ್ಟ ಸಮಯ ಮತ್ತು ನಿರ್ದಿಷ್ಟ ಸ್ಥಳವನ್ನು ಕಡ್ಡಾಯವಾಗಿ ನಿಗದಿಪಡಿಸಿಲ್ಲ. ಹಾಗಾಗಿ ಒಬ್ಬನು ಕೃಷ್ಣನ ದಿವ್ಯನಾಮಗಳನ್ನು ಬೆಳಿಗ್ಗೆಯೇ ಜಪಿಸಬೇಕು, ಸ್ನಾನ ಮಾಡಿಯೇ ಜಪಿಸಬೇಕು ಅಥವಾ ಪುಣ್ಯಕ್ಷೇತ್ರಗಳಲ್ಲಿ ಮಾತ್ರ ಜಪಿಸಬೇಕೆಂಬಿತ್ಯಾದಿ ಯಾವ ನಿಯಮಗಳೂ ಇಲ್ಲ. ಯಾರು, ಎಲ್ಲಿ

ಬೇಕಾದರೂ, ಯಾವ ಸಂದರ್ಭದಲ್ಲಾದರೂ, ಯಾವ ಸಮಯದಲ್ಲಾದರೂ ಕೃಷ್ಣನ ದಿವ್ಯನಾಮಗಳನ್ನು ಜಪಿಸಬಹುದು.

ಈ ಶ್ಲೋಕದಲ್ಲಿ ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ, " ಓ ಕೃಷ್ಣಾ! ನೀನು ಎಲ್ಲರಿಗೂ ಒಂದು ಉದಾತ್ತವಾದ ಅವಕಾಶವನ್ನು ದಯಪಾಲಿಸಿರುವೆ. ನೀನು ನಿತ್ಯ ಕರುಣಾಮಯನಾಗಿದ್ದು ನಿನ್ನ ದಿವ್ಯನಾಮಗಳ ಜಪದ, ಭಜನೆಯ ಸೇವೆಯನ್ನು ನಮಗೆ ನೀಡಿರುವೆ. ಅದಾಗ್ಯೂ ನನ್ನ ದುರ್ದೈವ ಬಹಳ ಕೆಟ್ಟದ್ದು. ನಿನ್ನ ದಿವ್ಯನಾಮಗಳನ್ನು ಜಪಿಸಲು ನಾನು ನನ್ನಲ್ಲಿ ಯಾವುದೇ ಶ್ರದ್ಧಾಪೂರ್ವಕ ಬಯಕೆಯನ್ನು ಕಾಣುತ್ತಿಲ್ಲ. ನಿನ್ನ ದಿವ್ಯನಾಮಗಳಲ್ಲಿ ನನಗೆ ವಿಶ್ವಾಸವಾಗಲೀ, ಪ್ರೇಮವಾಗಲೀ ಅಥವಾ ನಾಮವನ್ನು ಜಪಿಸುವ ಆಸಕ್ತಿಯಾಗಲೀ ಹುಟ್ಟುತ್ತಿಲ್ಲ. ನಿನ್ನ ನಾಮಗಳನ್ನು ಜಪಿಸುವ ಸಹಜವಾದ ಹಂಬಲ ನನ್ನಲ್ಲಿಲ್ಲ. ನಾನು ಏನು ಮಾಡಲಿ?" ಇದು ಶ್ರೀಮಾನ್ ಮಹಾಪ್ರಭುಗಳ ಶಿಕ್ಷಾಷ್ಟಕದ ಎರಡನೇ ಶ್ಲೋಕ. ಅವರು ಹೇಳುತ್ತಾರೆ, "ಓ ಭಗವಂತಾ! ಈ ಸಾಪೇಕ್ಷತೆಯ ಭೌತಿಕ ಪ್ರಪಂಚದಿಂದ ನನ್ನನ್ನು ಉದ್ಧರಿಸಲು ನೀನು ಎಲ್ಲವನ್ನೂ ಒದಗಿಸಿರುವೆ. ನನ್ನನ್ನು ಉದ್ಧರಿಸುವ ನಿನ್ನ ಪ್ರಯತ್ನ ಅತ್ಯಂತ ಉದಾತ್ತವಾದುದು ಮತ್ತು ನನ್ನಿಂದ ನೀನು ಅಪೇಕ್ಷಿಸುವುದೇನೆಂದರೆ, ನಿನ್ನ ದಯೆಯನ್ನು ಸ್ವೀಕರಿಸಲು ಸಣ್ಣ ಪ್ರಮಾಣದ ಸಹಕಾರ, ಆದರೆ ನಿನ್ನ ಔದಾರ್ಯದ ಕರೆಗೆ ನಾನು ಸಂಪೂರ್ಣ ಕಿವುಡನಾಗಿರುವೆ, ಓ ದೇವಾ! ನಾನು ಎಂಥ ದುರ್ದೈವಿ!"

ಶ್ರೀ ಚೈತನ್ಯ ಮಹಾಪ್ರಭುಗಳು ತಮ್ಮ ಶಿಕ್ಷಾಷ್ಟಕದ ಮೊದಲ ಶ್ಲೋಕದಲ್ಲಿ ನಮಗೆ ಒಂದು ಉನ್ನತವಾದ ಭರವಸೆಯನ್ನು ನೀಡಿದ್ದಾರೆ. ಶ್ರೀಕೃಷ್ಣನ ದಿವ್ಯನಾಮಗಳ ಜಪವನ್ನು ಸಮರ್ಪಕವಾದ ರೀತಿಯಲ್ಲಿ ಕೈಗೊಂಡಾಗ ಅದು ಏಳುತರಹದ ಪರಿಣಾಮಗಳನ್ನು ಹಂತಹಂತವಾಗಿ ಅಭಿವೃದ್ಧಿಗೊಳಿಸುತ್ತದೆ ಎಂದು ಅವರು ವಿವರಿಸುತ್ತಾರೆ. ಮೊದಲ ಪರಿಣಾಮ ನಮ್ಮ ಪ್ರಜ್ಞೆಯನ್ನು ಪರಿಶುದ್ಧ ಗೊಳಿಸುವುದು, ಎರಡನೆಯದು ಭೌತಿಕ ವ್ಯಾಮೋಹದಿಂದ ಮುಕ್ತಿ, ಮೂರನೆಯ ಪರಿಣಾಮವಾಗಿ ಸಕಾರಾತ್ಮಕ ಸದ್ಗುಣಗಳು ನಮ್ಮ ಹೃದಯದಲ್ಲಿ ಎಚ್ಚತ್ತುಕೊಂಡು ನಮ್ಮನ್ನು ವೃಂದಾವನಕ್ಕೆ ಕೊಂಡೊಯ್ಯುತ್ತವೆ. ನಂತರ ಭಗವಂತನ ಅಂತಃಶಕ್ತಿಯಾದ ಯೋಗಮಾಯೆಯ, ಸ್ವರೂಪಶಕ್ತಿಯ ಮಾರ್ಗದರ್ಶನದಲ್ಲಿ ನಾವು ವಧೂ ವಿಚಾರಕ್ಕೆ ಬರುತ್ತೇವೆ; ನಾವು ಶಕ್ತಿಗಳು, ಕಡ್ಡಾಯರಹಿತವಾಗಿ ಶ್ರೀಕೃಷ್ಣನ ನಿಷ್ಕಾರಣ ಸೇವೆಯನ್ನು ನಾವು ಕೈಗೊಳ್ಳಬೇಕು.

ವಧೂ ಅಂದರೆ ಭಗವಂತನೊಡನೆ ನಿರಂತರವಾದ ಸಂಪೂರ್ಣ ಸಂಪರ್ಕವನ್ನು ಕಲ್ಪಿಸುವ ರಸ – ಮಧುರರಸ.

## ಆನಂದ ಪರವಶತೆಯ ಸಾಗರ

ಆ ಹಂತವನ್ನು ತಲುಪಿದನಂತರ ಉಳಿದ ಪರಿಣಾಮಗಳು ಯಾವುವು? ನಾವು ಆನಂದ ಸಾಗರದ ಭಾಗಗಳಾಗಿರುತ್ತೇವೆ, ಮತ್ತು ಈ ಆನಂದವು ಹಳಸಲು ಅಥವಾ ಚಲನಾರಹಿತವಾದದ್ದಲ್ಲ. ಇದು ನಿತ್ಯನವೀನ ಮತ್ತು ನಿರಂತರ ಚಲನೆಯುಳ್ಳದ್ದು.ಇದು ಪರಿಪೂರ್ಣ ಶುದ್ಧೀಕರಣವನ್ನು ನೀಡುವಂಥದ್ದು. ಅದಾಗ್ಯೂ ನಮ್ಮ ಪ್ರತ್ಯೇಕತಾಮನೋಭಾವಕ್ಕೆ ಇಲ್ಲಿ ಅವಕಾಶವಿದ್ದರೂ, ನಾವು ಹರಿನಾಮದ ಜಪವನ್ನು ಕೈಗೊಂಡಾಗ ನಮ್ಮ ಅಸ್ತಿತ್ತ್ವದ ಎಲ್ಲಾ ಭಾಗಗಳೂ ಪರಿಪೂರ್ಣವಾಗಿ ಶುದ್ಧೀಕರಣಗೊಂಡ ಅನುಭವ ನಮಗಾಗುತ್ತದೆ. ಮತ್ತು ಇದರ ಪರಿಣಾಮ ಕೇವಲ ವೈಯಕ್ತಿಕವಾಗಿ ನಮ್ಮಮೇಲೆ ಮಾತ್ರವಲ್ಲದೇ ನಾಮಸಂಕೀರ್ತನದ ಸಂಪರ್ಕದಲ್ಲಿರುವವರೆಲ್ಲರ ಮೇಲೂ ಆಗುತ್ತದೆ. ಅವರು ಸಾರ್ವತ್ರಿಕ ಪರಿವರ್ತನೆಯನ್ನು, ಸಾರ್ವತ್ರಿಕವಾದ ಪರಿಪೂರ್ಣ ಶುದ್ಧೀಕರಣವನ್ನು, ಅನುಭವಿಸುತ್ತಾರೆ. ಇವುಗಳು ದಿವ್ಯನಾಮದ ಜಪದಿಂದ ಉಂಟಾಗುವ ಏಳುತರಹದ ಫಲಿತಾಂಶಗಳು.

ಈ ಸಿದ್ಧಾಂತವನ್ನು ಶಿಕ್ಷಾಷ್ಟಕದ ಮೊದಲ ಶ್ಲೋಕದಲ್ಲಿ ವಿವರಿಸಿದ ನಂತರ, ಮಹಾಪ್ರಭುಗಳು ಈಗ ನಮ್ಮಲ್ಲಿರುವ ವಿರೋಧಭಾವವನ್ನು ಎರಡನೆಯ ಶ್ಲೋಕದಲ್ಲಿ ವಿವರಿಸುತ್ತಾರೆ. ದಿವ್ಯನಾಮದಲ್ಲಿ ಅಂತಹ ಶ್ರೇಷ್ಠವಾದ ಭರವಸೆಯಿರುವಾಗ ನಾವೇಕೆ ಇಷ್ಟು ಕಷ್ಟಗಳನ್ನು ಹೊಂದಿದ್ದೇವೆ? ಅಡಚಣೆಯಿರುವುದು ಎಲ್ಲಿ? ದಿವ್ಯನಾಮದಲ್ಲಿ ಕಂಡುಬರುವ ದಿವ್ಯತೆಯ ಔದಾರ್ಯಪೂರ್ಣ ಅನುಮೋದನೆಯ ಪ್ರಯೋಜನವನ್ನು ನಾವೇಕೆ ಅರ್ಥೈಸಿಕೊಳ್ಳುವುದಿಲ್ಲ? ಅಂದಾಜು ಮಾಡಲು ಸಾಧ್ಯವಾಗದಷ್ಟು ಕೃಪೆಯು ಕೃಷ್ಣನ ಕಡೆಯಿಂದ ಬರುತ್ತಿದೆ. ಅತ್ಯಂತ ಕಡಿಮೆ ಅವಶ್ಯಕತೆಗಳನ್ನು ನಮ್ಮ ಕಡೆಯಿಂದ ನಿರೀಕ್ಷಿಸಿ ಹಲವು ವರದಾನಗಳನ್ನು ಅವನು ನಮಗೆ ನೀಡುತ್ತಿದ್ದಾನೆ. ನಮಗೆ ಅವುಗಳ ಬಗ್ಗೆ ಸ್ವಲ್ಪವಾದರೂ ರುಚಿಯಿರಬೇಕು, ದಿವ್ಯನಾಮವನ್ನು ಸ್ವೀಕರಿಸಲು ಸ್ವಲ್ಪ ಹಂಬಲವಿರಬೇಕು; ನಮ್ಮಲ್ಲಿ ಅದು ಇಲ್ಲದಿರುವುದೇ ಅಡಚಣೆ!

ಹಾಗಾದರೆ ನಮಗೆ ಇರುವ ಭರವಸೆಯೇನು? ನಾವು ಅದನ್ನು ಹೇಗೆ ಗಳಿಸಿಕೊಳ್ಳಬಹುದು? ನಾವು ದಿವ್ಯನಾಮವನ್ನು ವಿಧ್ಯುಕ್ತವಾಗಿ ಸಮೀಪಿಸುತ್ತಿರಬಹುದು, ಆದರೆ ನಮ್ಮ ಹೃದಯಾಂತರಾಳದಿಂದಲ್ಲ. ಆದ್ದರಿಂದ, ಯಾವ ಪ್ರಕ್ರಿಯೆಯಿಂದ ನಾವು ಪ್ರಯೋಜನಪಡೆದು ಮುನ್ನಡೆ ಸಾಧಿಸಬಹುದು ಎಂಬ ಪ್ರಶ್ನೆಗೆ ಮೂರನೆಯ ಶ್ಲೋಕವು ಉತ್ತರ ನೀಡುತ್ತದೆ.

## ವಿನಮ್ರತೆ – "ನಾನು ಏನೂ ಅಲ್ಲ"

ಅದಾಗ್ಯೂ, ಕೃಷ್ಣನ ಅನುಗ್ರಹವನ್ನು ಸ್ವೀಕರಿಸಲು ಬೇಕಾಗಿರುವ ಕನಿಷ್ಠತಮ ಅರ್ಹತೆಯು ತನ್ನಲ್ಲಿಲ್ಲ ಎಂದೊಬ್ಬ ಭಾವಿಸಬಹುದು, ಹಾಗಿದ್ದಾಗ, ಇದು ನಿರಾಶಾದಾಯಕ ಪರಿಸ್ಥಿತಿಯೇನಲ್ಲ. ಈ ಮನೋಪ್ರವೃತ್ತಿಯೇ ಅವನನ್ನು ದೈನ್ಯತೆಯ ಮನೋಭಾವಕ್ಕೆ ಕೊಂಡೊಯ್ಯುತ್ತದೆ. ಯಾವಾಗ ಒಬ್ಬನು ಪರಮಪ್ರಭುವಿನೆಡೆಗೆ ಭಕ್ತಿಪೂರ್ವಕ ಆಚರಣೆಯನ್ನು ಪ್ರಾರಂಭಿಸುತ್ತಾನೋ, ಅವಾಗ, ತಾನು ಭಗವಂತನ ಮುಂದೆ ಏನೂ ಅಲ್ಲ ಎಂಬ ಭಾವನೆ ಹುಟ್ಟುತ್ತದೆ. "ನಾನು ಭಗವಂತನಿಗೆ ಏನನ್ನೂ ಮರಳಿ ಕೊಡಲಾರೆ; ಅವನ ದಯೆಯನ್ನು ಪಡೆಯಲು ಬೇಕಾಗಿರುವ ಕನಿಷ್ಠ ಅರ್ಹತೆಯೂ ನನ್ನಲ್ಲಿಲ್ಲ" ಎಂಬ ತಿಳುವಳಿಕೆ ಅವನನ್ನು " ನನಗೆ ಯಾವ ಅರ್ಹತೆಯೂ ಇಲ್ಲ, ನಾನು ಬರಿ ಟೊಳ್ಳು, ನಿಷ್ಪ್ರಯೋಜಕ" ಎಂಬ ವೈಚಾರಿಕತೆಗೆ ಕೊಂಡೊಯುತ್ತದೆ.

ಭಕ್ತನಾದವನು, ತಾನು ಕೇವಲ ಅನರ್ಹ ಮಾತ್ರವಲ್ಲ, ಭಗವಂತನ ಸೇವೆಗೆ ತೀರಾ ಅಯೋಗ್ಯ ಎಂದು ತನ್ನ ಮನಸ್ಸಿನೊಳಗೆ ಅಂದು ಕೊಳ್ಳುತ್ತಾನೆ. ಕೃಷ್ಣದಾಸ ಕವಿರಾಜ ಗೋಸ್ವಾಮಿಯವರು ಹೀಗೆ ಬರೆಯುತ್ತಾರೆ:–

ಜಗಾಯ್ ಮಧಾಯ್ ಹಯಿತೆ ಮುನಿಸೆ ಪಾಪಿಷ್ಠ
ಪುರಿಷೇರ ಕೀಟ ಹಯಿತೆ ಮುನಿ ಸೆ ಲಘಿಷ್ಠ

"ನಾನು ಜಗಾಯ್ ಮಧಾಯರಿಗಿಂತಲೂ ಪಾಪಿಷ್ಠ ಮತ್ತು ಮಲದಲ್ಲಿರುವ ಹುಳಕ್ಕಿಂತಲೂ ಕನಿಷ್ಠ"

ಭಗವಂತನ ದಿವ್ಯನಾಮದ ಸೇವೆಗೆ ಬೆಕಾದ ಕನಿಷ್ಠತಮ ಯೋಗ್ಯತೆಯೂ ತನಗಿಲ್ಲ ಎಂದು ಅನಿಸಿದಾಗ ನಾವು ಧೃತಿಗೆಡಬಾರದು, ಏಕೆಂದರೆ, ಈ ರೀತಿಯ ಪ್ರಜ್ಞೆ ಭಕ್ತರಿಗೆ ಸಹಜವಾದದ್ದು. ಅದೇವೇಳೆ, ನಮ್ಮ ಭಕ್ತಿಯ ಬಗ್ಗೆ ಅಪ್ರಾಮಾಣಿಕ ವಿಚಾರದಿಂದ ನಮ್ಮನ್ನು ನಾವು ಕಾಯ್ದುಕೊಳ್ಳಬೇಕು; ಅದು ನಮ್ಮ ವೈರಿ. "ಭಗವಂತನಲ್ಲಿ ನನಗೆ

ಪ್ರೀತಿಯಾಗಲೀ, ರುಚಿಯಾಗಲೀ ಸ್ವಲ್ಪವೂ ಇಲ್ಲ"ಎಂದು ಯೋಚಿಸುವುದು ಸರಿ, ಆದರೆ "ನನಗೆ ಸ್ವಲ್ಪ ಆಸಕ್ತಿಯಿದೆ, ಹಂಬಲವಿದೆ, ಸ್ವಲ್ಪ ಭಕ್ತಿಯೂ ಇದೆ" ಎಂಬ ಯೋಚನೆ ಅಪಾಯಕಾರಿ.

ಭಗವಂತನೊಂದಿಗೆ ಸಂಪರ್ಕ ಹೊಂದಲು ನಾವು ಸಂಪೂರ್ಣ ಬರಿದಾಗಿರಬೇಕು. ನಮ್ಮ ಸ್ವಯಮ್ ನಿರಾಕರಣೆ ಸಂಪೂರ್ಣವಾಗಿರಬೇಕು ಮತ್ತು ಪ್ರಾಮಾಣಿಕರಾಗಿರಬೇಕು. ಪ್ರಾಪಂಚಿಕ ಸಿದ್ಧಿ ನಕಾರಾತ್ಮಕವಾದದ್ದು, ಅದರಿಂದ ನಾವು ನಮ್ಮನ್ನು ಸಂಪೂರ್ಣವಾಗಿ ಹಿಂತೆಗೆದು ಕೊಳ್ಳಬೇಕು. "ನಾನು ಏನೂ ಅಲ್ಲ, ಭಗವಂತನ ಸೇವೆಯಲ್ಲಿ ಸ್ವೀಕರಿಸಲ್ಪಡಲು ಅಥವಾ ಉಪಯೋಗಿಸಲ್ಪಡಲು ನನಗೆ ಯಾವ ಅರ್ಹತೆಯೂ ಇಲ್ಲ, ನಾನು ತೀರಾ ಅಯೋಗ್ಯ" ಎಂದು ನಾವು ಯೋಚಿಸತಕ್ಕದ್ದು. ನಾವು ನಮ್ಮನ್ನು ಅಹಂಕಾರದ ಜಗತ್ತಿನಿಂದ ಸಂಪೂರ್ಣವಾಗಿ ಹಿಂತೆಗೆದುಕೊಂಡು ಭಗವಂತನ ಅಂತಃಶಕ್ತಿಯಾದ ಯೋಗಮಾಯೆಯಿಂದ ಬಂದಿಗಳಾಗಲ್ಪಡಲು ಸಮ್ಮತಿಸಬೇಕು. ಒಬ್ಬ ಗುಲಾಮನಿಗೆ ಯಾವುದೇ ಸ್ಥಾನವಿರುವುದಿಲ್ಲ; ಎಲ್ಲವೂ ಒಡೆಯನಿಗೆ ಸೇರಿದ್ದಾಗಿರುತ್ತದೆ. ಇದನ್ನು ಅರ್ಥೈಸಿಕೊಳ್ಳುವುದೇ ನಿಜವಾದ ಅರ್ಹತೆ. ನಮಗೆ ಅರ್ಹತೆಯಿದೆ ಎಂದು ನಾವು ಪ್ರತಿಪಾದಿಸತೊಡಗಿದೊಡನೆಯೇ ಅಡಚಣೆ ಪ್ರಾರಂಭವಾಗುತ್ತದೆ. ಆದ್ದರಿಂದ ಶ್ರೀಚೈತನ್ಯ ಮಹಾಪ್ರಭುಗಳು ಹೀಗೆ ಹೇಳುತ್ತಾರೆ :–

ನ ಪ್ರೇಮ ಗಂಧೋಸ್ತಿ ದರಾಪಿ ಮೇ ಹರೌ

"ಕೃಷ್ಣ ಪ್ರೇಮದ ಒಂದು ಎಳೆಯನ್ನು ಕೂಡಾ ನನ್ನ ಹೃದಯದಲ್ಲಿ ನಾನು ಕಾಣಲಿಲ್ಲ"

ಇದು ನಮ್ರತೆಯ ಪ್ರಮಾಣ, ಮತ್ತು, ಈ ಭಾವ ಪ್ರಾಮಾಣಿಕವಾಗಿರಬೇಕು. ಇದು ಅನುಕರಣೆಯಾಗಿರಬಾರದು. ಉನ್ನತ ಭಕ್ತರನ್ನು ಅನುಕರಿಸಲು ಮುಂದಾಗದಂತೆ ನಾವು ಜಾಗರೂಕರಾಗಿರಬೇಕು. ನನ್ನದು ಏನೂ ಇಲ್ಲ – ಎಲ್ಲವೂ ಅವನಿಗೆ ಸೇರಿದ್ದು, ಎಂಬ ಪ್ರಾಮಾಣಿಕ ಮನೋಭಾವ ಮತ್ತು ವೈಚಾರಿಕತೆಯೇ ಶ್ರೀಕೃಷ್ಣನ ದಿವ್ಯನಾಮವನ್ನು ಜಪಿಸಲು ಬೇಕಾಗಿರುವ ಏಕೈಕ ಅರ್ಹತೆ.

## ಶ್ಲೋಕ – ೩

**ತೃಣಾದಪಿ ಸುನೀಚೇನ ತರೋರಿವ ಸಹಿಷ್ಣುನಾ**
**ಅಮಾನಿನಾ ಮಾನದೇನ ಕೀರ್ತನೀಯ ಸದಾ ಹರಿಃ**

### ಅನುವಾದ

**ಯಾರು ಒಂದು ಹುಲ್ಲಿನ ಎಸಳಿಗಿಂತಲೂ ವಿನಮ್ರನೋ; ಒಂದು ವೃಕ್ಷಕ್ಕಿಂತಲೂ ಸಹನಶೀಲನೋ; ಇತರರಿಂದ ಎಳ್ಳಷ್ಟೂ ಆದರವನ್ನು ನಿರೀಕ್ಷಿಸದೇ ತಾನು ಇತರರನ್ನು ಯುಕ್ತವಾಗಿ ಆದರಿಸುತ್ತಾನೋ; ಅವನು ಯಾವಾಗಲೂ ಶ್ರೀಕೃಷ್ಣನ ದಿವ್ಯ ನಾಮಗಳನ್ನು ಜಪಿಸಲು ಅರ್ಹನು.**

### ಭಾವಾರ್ಥ

ನಾವು ನಮ್ಮನ್ನು ಕನಿಷ್ಠಕ್ಕಿಂತ ಕನಿಷ್ಠ ಎಂದು ತಿಳಿಯತಕ್ಕದ್ದು. ಶ್ರೀಲ ಭಕ್ತಿವಿನೋದ ಠಾಕೂರರು ಈ ಶ್ಲೋಕದ ಅರ್ಥಕ್ಕೆ ಈ ಕೆಳಗಿನಂತೆ ವಿಶ್ಲೇಷಣೆಯನ್ನು ನೀಡಿದ್ದಾರೆ:– ಒಂದು ಹುಲ್ಲಿನ ಎಸಳಿಗೂ ತನ್ನದೇ ಆದ ಮಹತ್ವವಿದೆ. ಆದರೆ ನಮಗೆ ಆ ಹುಲ್ಲಿನ ಎಸಳಿನಷ್ಟೂ ಮಹತ್ವವಿಲ್ಲ ಎಂಬ ಮನೋಭಾವದಲ್ಲಿ ನಾವು ಮುಖ್ಯವಾಗಿ ಇರತಕ್ಕದ್ದು. ನಮಗೆ ಯಾವುದೇ ಸಕಾರಾತ್ಮಕ ಮಹತ್ವವಿಲ್ಲ. ಒಬ್ಬ ಮನುಷ್ಯ ಅವಿದ್ಯಾವಂತನೆಂದರೆ ಅದು ಒಂದು ವಿಷಯ, ಆದರೆ ಒಬ್ಬ ಮನುಷ್ಯ ಮತಿಗೆಟ್ಟವನಾದರೆ ಅದು ಇನ್ನೂ ಅಪಾಯಕಾರಿ. ಏಕೆಂದರೆ ಅವನ ಯೋಚನೆಗಳು ಅಸ್ವಾಭಾವಿಕವಾಗಿರುತ್ತವೆ. ಹಾಗಾಗಿ ಶ್ರೀಲ ಭಕ್ತಿವಿನೋದ ಠಾಕೂರರು ಹೇಳುತ್ತಾರೆ; "ನನಗೆ ಪ್ರಜ್ಞೆಯಿದೆ, ಸ್ವಲ್ಪ ಬುದ್ಧಿಯಿದೆ, ಆದರೆ ಅದು ತಪ್ಪುದಾರಿಯಲ್ಲಿ ನಿರ್ದೇಶಿತವಾಗಿದೆ. ಒಂದು ಹುಲ್ಲಿನ ಎಸಳು ಯಾವುದೇ ರೀತಿಯಲ್ಲಿ ತಪ್ಪುದಾರಿಗೆ ನಿರ್ದೇಶಿತವಾಗಿರುವುದಿಲ್ಲ. ಅದು ತುಳಿಯಲ್ಪಟ್ಟಾಗ ವಿರುದ್ಧವಾಗಿ ಹಿಂದೆ ಪುಟಿಯುವ ಪ್ರವೃತ್ತಿಯನ್ನು ತೋರುವುದಿಲ್ಲ.

ಒಂದು ಹುಲ್ಲಿನ ಎಸಳು ಬಿರುಗಾಳಿಗೆಸಿಕ್ಕಿ ಆಕಡೆ ಈಕಡೆ ತೂರಾಡಲ್ಪಡಬಹುದು, ಅಥವಾ ಬಾಹ್ಯ ವಾತಾವರಣದ ಪ್ರಭಾವದಿಂದ ಆಕಡೆ ಈಕಡೆ ವಾಲಾಡಬಹುದು, ಆದರೆ, ನಾನು ಒಂದು ನಿರ್ದಿಷ್ಟ ದಿಕ್ಕಿಗೆ ಹೋಗುವಲ್ಲಿ ಪ್ರತಿರೋಧಿಯಾಗಿರುತ್ತೇನೆ, ವಾತಾವರಣದ ಅಲೆಗಳು ನನ್ನನ್ನು ಒಂದು ನಿರ್ದಿಷ್ಟ ದಿಕ್ಕಿಗೆ ಕೊಂಡೊಯ್ಯಬೇಕೆಂದಿದ್ದರೆ ನಾನು ಅದನ್ನು ವಿರೋಧಿಸಲು ಪ್ರಯತ್ನಿಸುತ್ತೇನೆ. ನೀವು ನಿಜವಾಗಿ ನನ್ನ ಮಹತ್ವವನ್ನು ಪರಿಗಣಿಸುವುದಾದರೆ, ನನ್ನ ಸ್ಥಾನ ಒಂದು ಹುಲ್ಲಿನ ಎಸಳಿಗಿಂತಲೂ ಕನಿಷ್ಠವಾದದ್ದು, ಏಕೆಂದರೆ ನನ್ನಲ್ಲಿ ವಿರೋಧಿಸುವ ಪ್ರವೃತ್ತಿಯಿದೆ.'' ಅನಂತ ಸದ್ಗುಣತೆಯೊಡನೆ ನಾವು ನಮ್ಮನ್ನು ಒಂದು ಸಮೀಪದ ಸಂಬಧಕ್ಕೆ ತರಬಯಸಿದಾಗ ''ನನಗೆ ಯಾವುದೇ ಮಹತ್ವವಿಲ್ಲ, ನಿಜವಾಗಿ ಹೇಳುವುದಾದರೆ, ನನ್ನ ಮಹತ್ವವು ನಕಾರಾತ್ಮಕವಾದದ್ದು. ಭಗವಂತನ ಕೃಪೆಯನ್ನು ವಿರೋಧಿಸುವುದು ನನ್ನ ಪ್ರವೃತ್ತಿ. ಕೃಷ್ಣ ನನ್ನನ್ನು ಹರಸಬಯಸಿದಾಗ ನಾನು ಅದಕ್ಕೆ ಪ್ರತಿರೋಧವನ್ನು ತೋರುತ್ತೇನೆ. ಆಧ್ಯಾತ್ಮಿಕ ಆತ್ಮಹತ್ಯೆಯನ್ನು ಗೈಯ್ಯುವಂತಹ ಒಂದು ಮೂಲಧಾತುವಿನಲ್ಲಿ ನಾನು ಸ್ಥಿತನಾಗಿದ್ದೇನೆ. ಕೃಷ್ಣ ನನ್ನನ್ನು ಹರಸಲು ಬರುತ್ತಾನೆ, ಆದರೆ ನಾನು ಅವನನ್ನು ವಿರೋಧಿಸುತ್ತೇನೆ. ನನ್ನೊಳಗೆ ಇರುವ ಶಕ್ತಿಯು ಆತ್ಮಹತ್ಯೆಗೆ ಪ್ರಯತ್ನಿಸುತ್ತಿದೆ. ಇದು ನನ್ನ ಸ್ಥಿತಿ. ಆದರೆ, ಹುಲ್ಲಿನ ಎಳೆ ಯಾವುದನ್ನೂ, ಯಾರನ್ನೂ ವಿರೋಧಿಸುವುದಿಲ್ಲ. ಅಂತಹ ಒಂದು ಹೀನಾಯ ಸ್ಥಾನದಲ್ಲಿ ನಾನು ಸ್ಥಿತನಾಗಿದ್ದೇನೆ'' ಎಂದು ನಾವು ಯೋಚಿಸತಕ್ಕದ್ದು. ಈ ರೀತಿಯ ಚಿಂತನೆಯೊಂದಿಗೆ ನಾವು ನಿರಂಕುಶ ಸತ್ಯದ ಸದ್ಗುಣತೆಯನ್ನು ದಿವ್ಯನಾಮದ ರೂಪದಲ್ಲಿ ಸ್ವೀಕರಿಸಬಹುದು.

ಈ ದಾರಿಯು ಸುಗಮವಾಗಿರುತ್ತದೆ ಎಂದು ನಾವು ಯಾವತ್ತೂ ತಿಳಿಯತಕ್ಕದ್ದಲ್ಲ; ಹೊರಗಿನಿಂದ ಎಷ್ಟೋ ಕಷ್ಟಗಳು ಎದುರಾಗಬಹುದು. ನಾವು ಬೀದಿಗಳಲ್ಲಿ ಹರಿನಾಮ ಸಂಕೀರ್ತನೆಯನ್ನು ಮಾಡುವಾಗ ''ಏ ಮಂಗಗಳೇ, ವಾನರರೇ! ಎಂದು ಕೆಲವು ಜನರು ಕಿರುಚಿ ನಮ್ಮನ್ನು ಪರಿಹಾಸ್ಯಮಾಡಬಹುದು, ಈ ಮಾರ್ಗದಲ್ಲಿ ಎಷ್ಟೋ ತರಹದ ವಿರೋಧಗಳು ಹಾಗೂ ಅಡಚಣೆಗಳು ಬಂದು ನಮ್ಮನ್ನು ಅಡ್ಡಿಪಡಿಸಬಹುದು, ಆದರೆ, ನಾವು ವೃಕ್ಷದಂತಹ ಸಹಿಷ್ಣುತತೆಯನ್ನು ಆಚರಿಸಬೇಕು. ವೃಕ್ಷದ ಉದಾಹರಣೆಯನ್ನು ಏಕೆ ಕೊಟ್ಟಿದ್ದಾರೆ? ಅದನ್ನು ಈರೀತಿ ವಿಶ್ಲೇಷಿಸಲಾಗಿದೆ; ಒಂದು ವೃಕ್ಷಕ್ಕೆ ನೀರನ್ನು ಹಾಕದಿದ್ದರೆ ಅದು ಯಾವುದೇ ರೀತಿಯ ಪ್ರತಿಭಟನೆಯನ್ನು ತೋರುವುದಿಲ್ಲ.ಮರದ ಎಲೆಗಳನ್ನು ಕಿತ್ತು, ರೆಂಬೆಗಳನ್ನು ಕಡಿದು, ಅಥವಾ ಮರವನ್ನೇ ಬುಡಸಮೇತ ಕಡಿದು

ನೆಲಕ್ಕುರುಳಿಸಿ ಅದಕ್ಕೆ ತೊಂದರೆ ಕೊಟ್ಟರೂ ಅದು ಮೌನವಾಗಿರುತ್ತದೆ. ಹೀಯಾಳಿಕೆ, ಬಡತನ ಅಥವಾ ಯಾವುದೇ ರೀತಿಯ ಇತರ ಪ್ರತಿಕೂಲ ಸನ್ನಿವೇಶಗಳು ನಮ್ಮ ಶುದ್ಧೀಕರಣಕ್ಕೆ ಅತ್ಯಗತ್ಯ. ಬಹಳ ಸಣ್ಣ ಪ್ರಮಾಣದ ಶಿಕ್ಷೆಯಿಂದ ನಾವು ಈ ಭೌತಿಕ ಬದುಕಿನಿಂದ ಬಿಡುಗಡೆಯಾಗುತ್ತೇವೆ ಎಂಬುದನ್ನು ಅರ್ಥೈಸಿಕೊಳ್ಳಬೇಕು.

ಕೃಷ್ಣ ಪ್ರಜ್ಞೆಯ ಮೂಲಕ ನಾವು ಬದುಕಿನ ಅತ್ಯುನ್ನತ ಪರಿಪೂರ್ಣತೆಯ ಸಂಪರ್ಕವನ್ನು ಹೊಂದಿದ್ದೇವೆ. ಅದಕ್ಕೆ ಯಾವ ಬೆಲೆಯನ್ನು ತೆರಲು ನಾವು ಸಿದ್ಧರಿದ್ದೇವೆ? ಅದು ಊಹೆಗೆ ನಿಲುಕದ್ದು. ಉನ್ನತ ಧ್ಯೇಯವನ್ನು ಮನ್ನಿಸುತ್ತಾ ಯಾವುದೇ ರೀತಿಯ ಸಣ್ಣ ಒತ್ತಾಯ ಪೂರ್ವಕ ಬೇಡಿಕೆಯನ್ನಾದರೂ ನಾವು ನಗುನಗುತ್ತಾ ಸ್ವೀಕರಿಸಬೇಕು. ನಾವು ನಿಜವಾಗಿಯೂ ಭರವಸೆಯುಳ್ಳವರಾಗಿದ್ದರೆ, ನಮ್ಮ ಉಜ್ವಲ ಭವಿಷ್ಯದಬಗ್ಗೆ ನಮಗೆ ವಿಶ್ವಾಸವಿದ್ದರೆ, ಪ್ರಕೃತಿಯು ನಮ್ಮಿಂದ ಬಯಸುವ ಕನಿಷ್ಠ ಬೆಲೆಯನ್ನು ನಾವು ಹರುಷಪೂರ್ವಕವಾಗಿ ತೆರಬಹುದು.

## "ಕೃಷ್ಣ! ನಾನು ನಿನಗೊಂದು ಪಾಠ ಕಲಿಸುತ್ತೇನೆ !"

ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರರ ಗುರುಗಳಾದ ಶ್ರೀಲ ಗೌರಕಿಶೋರದಾಸ ಬಾಬಾಜಿ ಮಹಾರಾಜರು ನವದ್ವೀಪದ ಪಟ್ಟಣಗಳಲ್ಲಿ ಮನೆಮನೆಗೆ ಭಿಕ್ಷಕ್ಕೆ ಹೋಗುತ್ತಿದ್ದರು. ಕೆಲವೊಂದು ಸಲ ಹೀಗೆ ಭಿಕ್ಷಕ್ಕೆ ಹೋದವರನ್ನು ಅಲ್ಲಿಯ ಜನರು ಹೀಯಾಳಿಸುತ್ತಿದ್ದರು ಅಥವಾ ಅವರಿಗೆ ಕಿರುಕುಳ ಕೊಡುತ್ತಿದ್ದರು. ಗೌರಕಿಶೋರದಾಸ ಬಾಬಾಜಿಯವರಂತಹ ಘನತೆವೆತ್ತ ಮಹಾತ್ಮರನ್ನು ಕೂಡಾ ಅವರು ಬಿಡುತ್ತಿರಲಿಲ್ಲ. ಕೆಲವು ತುಂಟ ಹುಡುಗರು ಅವರೆಡೆಗೆ ಕಲ್ಲುಗಳನ್ನೆಸೆದರೆ, ಇನ್ನುಕೆಲವರು ಅವರಮೇಲೆ ಮಣ್ಣು ಮತ್ತು ಕಸವನ್ನೆಸೆಯುತ್ತಿದ್ದರು. ಆಗ ಅವರು ಹೀಗೆಂದು ಹೇಳುತ್ತಿದ್ದರು "ಓ ಕೃಷ್ಣ ! ನನ್ನೊಡನೆ ನೀನು ಬಹಳ ಕ್ರೂರವಾಗಿ ವರ್ತಿಸುತ್ತಿರುವೆ! ಈ ಬಗ್ಗೆ ನಾನು ನಿನ್ನ ಮಾತೆ ಯಶೋದೆಯಲ್ಲಿ ನಿನ್ನ ಮೇಲೆ ದೂರು ಹೇಳುವೆ" ಇದು ಅವರ ಪ್ರತಿಕ್ರಿಯೆಯಾಗಿರುತ್ತಿತ್ತು ಮತ್ತು ಈ ಮೂಲಕ ಅವರು ಸನ್ನಿವೇಶವನ್ನು ಸರಿದೂಗಿಸುತ್ತಿದ್ದರು. ಹಾಗಾಗಿ ನಮಗೆ ಯಾವುದೇ ರೀತಿಯ ತೊಂದರೆಗಳುಂಟಾದಾಗ ಅವುಗಳ ಹಿಂದೆ ಕೃಷ್ಣನನ್ನು ನೋಡಲು ನಾವು ಕಲಿಯಬೇಕು. ಸೈದ್ಧಾಂತಿಕ ಗಣಿತ ಪ್ರಕಾರ, ಖಂಡಿತವಾಗಿಯೂ ಕೃಷ್ಣನ ಸಂಕಲ್ಪವಿಲ್ಲದೇ ಏನೇನೂ ಘಟಿಸಲಾರದು. ಆದರೆ, ಗೌರಕಿಶೋರದಾಸ ಬಾಬಾಜಿಯವರಂತಹ ಒಬ್ಬ ಶುದ್ಧಭಕ್ತ ವಾಸ್ತವಿಕವಾಗಿ

ಇಲ್ಲಿ ಕೃಷ್ಣನ ಸಂಕಲ್ಪವನ್ನು ನೋಡುತ್ತಾರೆ. "ಓ ಕೃಷ್ಣ ! ನೀನು ಈ ಮಕ್ಕಳನ್ನು ಪ್ರೋತ್ಸಾಹಿಸುತ್ತಿರುವೆ, ನೀನು ನನಗೆ ತೊಂದರೆಯನ್ನೊಡ್ಡುತ್ತಿರುವೆ, ನಾನು ನಿನಗೊಂದು ಪಾಠ ಕಲಿಸುತ್ತೇನೆ. ಈ ಸಮಸ್ಯೆಯನ್ನು ಯಾವರೀತಿ ಬಗೆಹರಿಸಬೇಕೆಂಬುದು ನನಗೆ ತಿಳಿದಿದೆ. ನಿನ್ನ ಮಾತೆ ಯಶೋದೆಗೆ ನಿನ್ನ ಮೇಲೆ ದೂರು ಕೊಡುವೆ ಮತ್ತು ಅವಳು ನಿನ್ನನ್ನು ಶಿಕ್ಷಿಸುತ್ತಾಳೆ". ಶುದ್ಧಭಕ್ತರು ಯಾವಾಗಲೂ, ಪ್ರತಿಯೊಂದು ಘಟನೆಯ ಹಿಂದೆ ಕೃಷ್ಣನಿದ್ದಾನೆ ಎಂಬ ಪ್ರಜ್ಞೆಯಲ್ಲಿ ಸ್ಥಿತರಾಗಿರುತ್ತಾರೆ ಮತ್ತು ಅವರು ಎಲ್ಲಾ ಸನ್ನಿವೇಶಗಳನ್ನು ಅದೇ ರೀತಿ ಸ್ವೀಕರಿಸುತ್ತಾರೆ. ಇಂತಹ ವರ್ತನೆ ನಮಗೆ ದಾರಿದೀಪ ಮತ್ತು ಅನುಸರಣೀಯವಾಗಿರುತ್ತದೆ. ಸಹಜವಾಗಿ ತಲೆದೋರುವ ಹಲವು ಪ್ರತಿಕೂಲ ಸನ್ನಿವೇಶಗಳಿಗೆ ನಾವು ನಮ್ಮನ್ನು ಸರಿಹೊಂದಿಸಿಕೊಂಡು ಮುನ್ನಡೆಯಲು ಈ ದಾರಿದೀಪವು ನಮಗೆ ಮಾರ್ಗದರ್ಶನವನ್ನು ನೀಡುತ್ತದೆ. ಇಲ್ಲಿ ಒಂದು ಮಧುರವಾದ ಹೊಂದಾಣಿಕೆಯು ಕಂಡುಬರುತ್ತದೆ. ಹಾಗಾಗಿ ನಾವು ವೃಕ್ಷದಂತೆ ಸಹಿಷ್ಣುಗಳಾಗಿರಬೇಕು ಎಂದು ಉಪದೇಶಿಸಲ್ಪಟ್ಟಿದ್ದೇವೆ. ನಾವು ಯಾವುದೇ ಪ್ರತಿರೋಧವನ್ನು ಒಡ್ಡದಿದ್ದಾಗಲೂ ಸಹ, ಪ್ರತಿರೋಧಗಳು ನಮ್ಮನ್ನು ತೊಂದರೆಗೀಡುಮಾಡಬಹುದು. ನಾವು ಅವುಗಳನ್ನು ಸಹಿಸಲೇಬೇಕು.

ನಾವು ಇತರರಿಗೆ ಗೌರವವನ್ನು ತೋರಲೇಬೇಕು. ಪ್ರತಿಷ್ಠೆಯೆನ್ನುವುದು ಶ್ರೀಕೃಷ್ಣನ ಭಕ್ತರ ಅತ್ಯಂತ ಸೂಕ್ಷ್ಮ ಹಾಗೂ ಅತ್ಯಂತದೊಡ್ಡ ವೈರಿಯಾಗಿರುತ್ತದೆ. ಪ್ರತಿಷ್ಠೆಯು ಅಂತಿಮವಾಗಿ ನಮ್ಮನ್ನು ಮಾಯಾವಾದದೆಡೆಗೆ, ಏಕತ್ವವಾದಿಗಳು ಹೇಳುವ "ಸೋಹಮ್! ನಾನು; ನಾನು ಒಡೆಯ; ದಾಸೋಹಮ್ ಅಲ್ಲ ಅಂದರೆ ನಾನು ಆಧೀನ ಅಲ್ಲ; ಆದರೆ ನಾನು ಆ ಅತ್ಯುನ್ನತ ಧಾತುವಿನಿಂದ ಉಂಟಾದವನು,ನಾನೇ ಅದು; ನಾನೇ ಅವನು!" ಎಂಬ ವಿಚಾರದೆಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಪ್ರತಿಷ್ಠೆಯು ನಾನು ಕ್ಲೇಶಗಳಿಂದ ಸಂಕಷ್ಟಕ್ಕೀಡಾಗಿರುವ ಅತ್ಯಂತ ಸಣ್ಣ ಧಾತು ಎಂಬ ನೈಜ ಭಾವನೆಯನ್ನು ನಮ್ಮಿಂದ ತೊಡೆದುಹಾಕುತ್ತದೆ. ಈ ಆಚಾರಗಳು ಮಾಯಾವಾದಿಗಳಿಂದ ಕಡೆಗಣಿಸಲ್ಪಟ್ಟಿವೆ. ಸ್ಥಾನಮಾನ, ಅಹಂಕಾರ, ಪ್ರತಿಷ್ಠೆ; ನಮ್ಮ ಅತ್ಯಂತ ಕೆಟ್ಟ ವೈರಿಗಳಾಗಿರುತ್ತವೆ. ಈ ಶ್ಲೋಕದಲ್ಲಿ ಪ್ರತಿಷ್ಠೆ ಮತ್ತು ಅಹಂಕಾರಗಳೊಂದಿಗೆ ವಿಶಿಷ್ಟವಾಗಿ ವ್ಯವಹರಿಸುವುದನ್ನು ಉಪದೇಶಿಸಲಾಗಿದೆ.

"ನೀವು ಯಾರಿಂದಲೂ, ಸ್ವಯಮ್ ಪರಿಸರದಿಂದಲೂ ಸಹ ಯಾವುದೇ ಗೌರವವನ್ನು ಅಪೇಕ್ಷಿಸಬಾರದು; ಅದೇವೇಳೆ ಪ್ರತಿಯೊಬ್ಬರನ್ನೂ, ಪರಿಸರದ

ಪ್ರತಿಯೊಂದು ವಸ್ತುವನ್ನೂ ಅವರವರ ಸ್ಥಾನಮಾನಕ್ಕನುಗುಣವಾಗಿ ಆದರಿಸತಕ್ಕದ್ದು, ಗೌರವವನ್ನು ನೀಡಿ, ಆದರೆ ಹೊರಗಿನಿಂದ ಗೌರವವನ್ನು ನಿರೀಕ್ಷಿಸದಿರಿ'' ಎಂದು ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ. ಈ ವಿಷಯದಬಗ್ಗೆ ನಾವು ಬಹಳ ಜಾಗರೂಕರಾಗಿರಬೇಕು, ಏಕೆಂದರೆ, ಪ್ರತಿಷ್ಠೆಯೆನ್ನುವುದು ನಮ್ಮೊಳಗೇ ಹುದುಗಿರುವ ಅತ್ಯಂತ ಕೆಟ್ಟ ಹಾಗೂ ಪ್ರಭಾವಶಾಲಿ ವೈರಿಯಾಗಿರುತ್ತದೆ.

ಹೇಗಾದರೂ ಈ ವೈರಿಯನ್ನು ನಾವು ನಿವಾರಿಸಿಕೊಂಡರೆ ಅಥವಾ ಅದನ್ನು ಜಯಿಸಿದರೆ, ನಾವು ಕೃಷ್ಣನ ಗುಲಾಮಗಿರಿಗೆ ಪ್ರವೇಶಪಡೆದು, ನಮ್ಮ ಬದುಕನ್ನು ಸಾರಾಸಗಟಾಗಿ ಕೃಷ್ಣನಿಗಾಗಿ ತ್ಯಾಗಮಾಡಿದವರೊಂದಿಗೆ ಸೇರಿಕೊಳ್ಳಬಹುದು. ``ಯಾವಕಡೆಯಿಂದಲೂ, ಯಾವಪ್ರಕಾರ ದಲ್ಲಿಯೂ, ಯಾವುದೇ ಸ್ಥಾನಮಾನ ಅಥವಾ ಪ್ರತಿಷ್ಠೆಯನ್ನು ಅಪೇಕ್ಷಿಸಬೇಡಿ. ಅದೇವೇಳೆ ಇತರ ಪ್ರತಿಯೊಬ್ಬರಿಗೂ ತಕ್ಕುದಾದ ಗೌರವವನ್ನು ನೀಡಿ ಆದರಿಸಿ'' ಎಂಬುದೇ ಈ ಶ್ಲೋಕದ ಪ್ರಧಾನ ಅರ್ಥ.

## ಶ್ರೀಲ ರಘುನಾಥದಾಸ ಗೋಸ್ವಾಮಿ

೧೯೩೦ರ ಮೊದಲಲ್ಲಿ ನಮ್ಮ ಗುರುಗಳಾದ ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರರು ವೃಂದಾವನಕ್ಕೆ ಮೋಟಾರುಕಾರಿನಲ್ಲಿ ಪ್ರಯಾಣಿಸಿದರು. ಆ ಕಾಲದಲ್ಲಿ ಒಬ್ಬ ಸಂತ ಕಾರಿನಲ್ಲಿ ಪ್ರಯಾಣಿಸುವುದು ಕಂಡುಕೇಳರಿಯದ ಸಂಗತಿಯಾಗಿತ್ತು. ಒಂದುದಿನ ಒಬ್ಬ ಪುರೋಹಿತರು, ಆಧ್ಯಾತ್ಮಿಕ ಸಿದ್ಧಿಯ ಅತ್ಯುನ್ನತ ವಿಚಾರಗಳನ್ನು ಬೋಧಿಸಿದ ಶ್ರೀಲ ರಘುನಾಥದಾಸ ಗೋಸ್ವಾಮಿಯವರ ಸ್ಥಾನವನ್ನು ವಿರೋಧಿಸಿ, ನಮ್ಮ ಗುರುಗಳನ್ನು ಹಿಯಾಳಿಸಿದರು. ``ನಾವು ಕೇವಲ ಪವಿತ್ರಧಾಮವಾದ ವೃಂದಾವನದ ನಿವಾಸಿಗಳು ಮಾತ್ರವಲ್ಲ, ಆದರೆ ಉಚ್ಚಕುಲವಾದ ಬ್ರಾಹ್ಮಣವಂಶದ ಸದಸ್ಯರು, ಹಾಗಾಗಿ ನಾವು ದಾಸಗೋಸ್ವಾಮಿಯವರನ್ನು ಆಶೀರ್ವದಿಸಬಹುದು, ಏಕೆಂದರೆ ಅವರು ಕೆಳವರ್ಗದ ಕುಟುಂಬದಲ್ಲಿ ಹುಟ್ಟಿದವರು, ಮತ್ತು ಅವರೇ ಸ್ವತಃ ನಮ್ಮಲ್ಲಿ ಆಶೀರ್ವಾದವನ್ನು ಯಾಚಿಸಿದ್ದಾರೆ''.

ವಾಸ್ತವವಾಗಿ ದಾಸಗೋಸ್ವಾಮಿಯವರು ಅತ್ಯಂತ ನಮ್ರತೆಯಿಂದ ಒಮ್ಮೆ ಈ ರೀತಿ ಪ್ರಾರ್ಥಿಸಿದ್ದರು.

ಗುರೌ ಗೋಷ್ಠೇ ಗೋಷ್ಠಾಲಯಿಷು ಸುಜನೇ ಭೂಸುರಗಣೇ
ಸ್ವಮಂತ್ರೇ ಶ್ರೀನಾಮ್ನಿ ವ್ರಜನವಯುವದ್ವಂದ್ವಶರಣೇ

ಸದಾ ದಂಭಮ್ ಹಿತ್ವಾ ಕುರು ರತಿಮ್ ಅಪೂರ್ವಮ್ ಅತಿತರಾಮ್
ಅಯೇ ಸ್ವಾಂತಭ್ರಾತಶ್ ಚಟುಭಿರ್ ಅಭಿಯಾಚೆ ಧೃತಪದಃ

"ಓ ಮನಸ್ಸೇ! ನನ್ನ ಸೋದರನೇ! ನಾನು ನಿನ್ನ ಕಾಲಿಗೆಬಿದ್ದು ಅಂಗಲಾಚುತ್ತೇನೆ! ಎಲ್ಲಾ ಪ್ರತಿಷ್ಠೆಯನ್ನು ಬಿಟ್ಟುಬಿಡು, ಮತ್ತು ನನ್ನ ಪವಿತ್ರಗುರುವನ್ನು, ಪವಿತ್ರಧಾಮವಾದ ವೃಂದಾವನವನ್ನು, ವ್ರಜದ ಗೋಪಿಯರನ್ನು ಹಾಗೂ ಗೋಪಾಲಕರನ್ನು, ಭಗವಾನ್ ಶ್ರೀಕೃಷ್ಣನ ಪ್ರೀತಿಯ ಭಕ್ತರನ್ನು, ಭೂಸುರರಾದ ಶುದ್ಧ ಬ್ರಾಹ್ಮಣರನ್ನು, ಗಾಯತ್ರಿ ಮಂತ್ರವನ್ನು, ಶ್ರೀಕೃಷ್ಣನ ಮತ್ತು ವ್ರಜದ ಪವಿತ್ರ ಯುವ ದಂಪತಿಗಳಾದ ಶ್ರೀ ರಾಧಾಗೊವಿಂದರ ದಿವ್ಯನಾಮಗಳನ್ನು ಸ್ಮರಿಸುತ್ತಾ ಆನಂದಭರಿತ ಪ್ರೇಮವನ್ನು ಸವಿಯುತ್ತಿರು" ನಾವು ಪವಿತ್ರ ಧಾಮವಾದ ವೃಂದಾವನದ ನಿವಾಸಿಗಳು ಮತ್ತು ಬ್ರಾಹ್ಮಣರು ಕೂಡಾ, ಹಾಗಾಗಿ ರಘುನಾಥ ಗೋಸ್ವಾಮಿಯವರನ್ನು ಆಶೀರ್ವದಿಸುವ ಸ್ಥಾನದಲ್ಲಿ ನಾವಿದ್ದೇವೆ" ಎಂದು ಆ ಬ್ರಾಹ್ಮಣ ಉದ್ಗರಿಸಿದ. ಆ ಸಮಯದಲ್ಲಿ ರಾಧಾಕುಂಡದ ಹತ್ತಿರವಿದ್ದ ನಮ್ಮ ಗುರುಮಹಾರಾಜರು ಆ ಬ್ರಾಹ್ಮಣನ ಮಾತುಗಳನ್ನು ಕೇಳಿಸಿಕೊಂಡು ಉಪವಾಸವನ್ನು ಆರಂಭಿಸಿದರು. "ನಾನು ಈ ಮಾತುಗಳನ್ನು ಕೇಳಿಸಿಕೊಳ್ಳಲೇಬೇಕಾಗಿದೆ; ಕಾಮ, ಕ್ರೋಧ ಮತ್ತು ಲೋಭಗಳಿಂದ ಪ್ರಭಾವಿತನಾಗಿರುವ ಈವ್ಯಕ್ತಿ, ನಮ್ಮ ಸಂಪ್ರದಾಯದ ಅತ್ಯಂತ ಗೌರವಾನ್ವಿತ ಬೋಧಕರಾದ ಶ್ರೀರಘುನಾಥದಾಸ ಗೋಸ್ವಾಮಿಯವರನ್ನು ತಾನು ಹರಸಬಲ್ಲೆ ಎಂದು ನುಡಿಯುತ್ತಿದ್ದಾನೆ! ಮತ್ತು ಈ ಮಾತುಗಳನ್ನು ನಾನು ಕೇಳಿಸಿಕೊಳ್ಳ ಬೇಕಾಗಿದೆ! ಎಂದು ಅಭಿಪ್ರಾಯಪಟ್ಟ ನಮ್ಮ ಗುರುಗಳು ಆ ಬ್ರಾಹ್ಮಣನ ಮಾತುಗಳಿಗೆ ಯಾವುದೇ ಪ್ರತಿರೋಧವನ್ನು ತೋರದೇ ತಾವು ಉಪವಾಸವನ್ನು ಆರಂಭಿಸಿದರು.

ನಾವು ಕೂಡಾ ತಿನ್ನುವುದನ್ನು ನಿಲ್ಲಿಸಿದೆವು ಮತ್ತು ನಮ್ಮ ಗುಂಪಿನವರೆಲ್ಲರೂ ಈ ಉಪವಾಸದಲ್ಲಿ ಪಾಲ್ಗೊಂಡರು. ನಮ್ಮ ಶಿಬಿರವಿಡೀ ಉಪವಾಸವನ್ನು ಆಚರಿಸುತ್ತಿದೆ ಎಂದು ತಿಳಿದ ಸ್ಥಳೀಯ ಗಣ್ಯರೊಬ್ಬರು ಕಾರಣವನ್ನು ತಿಳಿದು, ಅದಕ್ಕೆ ಕಾರಣನಾದ ಆ ನಿಂದಕ ಬ್ರಾಹ್ಮಣನನ್ನು ನಮ್ಮ ಗುರುಗಳ ಸನಿಹಕ್ಕೆ ಕರೆತಂದರು. ಆ ಬ್ರಾಹ್ಮಣನು ತನ್ನನ್ನು ಕ್ಷಮಿಸುವಂತೆ ನಮ್ಮ ಗುರುಮಹಾರಾಜರನ್ನು ಕೇಳಿಕೊಂಡಾಗ, ಸಮಾಧಾನ ಹೊಂದಿದ ನಮ್ಮ ಗುರುಗಳು, ಆ ಬ್ರಾಹ್ಮಣನಿಗೆ ಗೌರವವನ್ನು ಸೂಚಿಸಿದ ನಂತರ ತಮ್ಮ ಉಪವಾಸ ವ್ರತವನ್ನು ಮುರಿದರು. ಆ ಸಮಯದಲ್ಲಿ ಯಾರೋ ಒಬ್ಬರು ಹೀಗೆ

ಹೇಳಿದರು "ಅವರೆಲ್ಲರೂ ಮೂಢ ಅಜ್ಞಾನಿಗಳು, ಅವರ ಮಾತುಗಳಿಂದ ನೀವೇಕೆ ಅಷ್ಟು ವಿಚಲಿತರಾಗುತ್ತೀರಿ? ನೀವು ಅವರ ಮಾತುಗಳನ್ನು ಕಡೆಗಣಿಸಬೇಕು" ಅದಕ್ಕೆ ಪ್ರತಿಯಾಗಿ ನಮ್ಮ ಗುರುಮಹಾರಾಜರು ಹೀಗೆ ನುಡಿದರು "ನಾನು ಒಬ್ಬ ಸಾಮಾನ್ಯ ಬಾಬಾಜಿಯಾಗಿದ್ದು ಈ ಮಾತುಗಳನ್ನು ಕೇಳಿಸಿಕೊಂಡಿದ್ದರೆ ಸುಮ್ಮನೆ ನನ್ನ ಕಿವಿಗಳನ್ನು ಮುಚ್ಚಿಕೊಂಡು ಹೊರಟುಹೋಗುತ್ತಿದ್ದೆ. ಆದರೆ ನಾನು ಉದಾಹರಣಾ ಪೂರ್ವಕವಾಗಿ ಬೋಧಿಸುವ ಒಬ್ಬ ಆಚಾರ್ಯನ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದೇನೆ, ನನ್ನ ಗುರುದೇವರ ವಿರುದ್ಧ ಟೀಕೆಯನ್ನು ನಾನು ಪ್ರತಿರೋಧಿಸದಿದ್ದರೆ ನಾನು ಮೋಟಾರುಕಾರಿನಲ್ಲಿ ಓಡಾಡುವುದನ್ನು ಹೇಗೆ ಸಮರ್ಥಿಸಿಕೊಳ್ಳಬಲ್ಲೆ!"

ಈ ಮಾತುಗಳನ್ನು ಅವರು ಪದೇ ಪದೇ ಉಪಯೋಗಿಸುತ್ತಿದ್ದರು. "ನಾನು ವೃಂದಾವನದಲ್ಲಿ ಮೋಟಾರುಕಾರಿನಲ್ಲಿ ಏಕೆ ಓಡಾಡುತ್ತಿದ್ದೇನೆ? ಸುಮ್ಮನೆ ಕಾವಿಯನ್ನು ಧರಿಸಿ ನಿರ್ಜನ ಪ್ರದೇಶದಲ್ಲಿ ವಾಸಿಸುವ ಒಬ್ಬ "ನಿಷ್ಕಿಂಚನ ಬಾಬಾಜಿ" ನಾನಾಗಿದ್ದರೆ ಈ ಮನುಷ್ಯನ ಮಾತುಗಳಿಗೆ ಯಾವುದೇ ವಿರೋಧವನ್ನು ತೋರಿಸುತ್ತಿರಲಿಲ್ಲ. ನನ್ನನ್ನು ನಾನು ಕಾಪಾಡಿಕೊಳ್ಳುವುದಕ್ಕೆ ಈ ಜಾಗವನ್ನು ಬಿಟ್ಟು ಬೇರೆ ಜಾಗಕ್ಕೆ ಹೋಗುತ್ತಿದ್ದೆ. ಆದರೆ ಒಬ್ಬ ಆಚಾರ್ಯನಾಗಿ, ಒಬ್ಬ ಬೋಧಕನಾಗಿ, ದೊಡ್ಡ ಮೋಟಾರುಕಾರಿನಲ್ಲಿ ಓಡಾಡುತ್ತಿರವುದರಿಂದ ಶ್ರೇಷ್ಠಭಕ್ತರ ಹಿರಿಮೆಯನ್ನು ನಾನು ಸಮರ್ಥಿಸಲೇಬೇಕು. ನಾನು ಈ ಜವಾಬ್ದಾರಿಯನ್ನು ವಹಿಸಿಕೊಂಡಿರುವುದರಿಂದ ಇಂತಹ ಸನ್ನಿವೇಶಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ನಾನು ಇವುಗಳನ್ನು ಎದುರಿಸಲೇಬೇಕು ಮತ್ತು ಇಂತಹ ಸನ್ನಿವೇಶಗಳು ಯಾರ ಗಮನಕ್ಕೂ ಬಾರದೇ, ವಿರೋಧಿಸಲ್ಪಡದೇ ಮುಂದುವರಿಯುವುದನ್ನು ನಿಲ್ಲಿಸಲು ನನ್ನ ಶಕ್ತ್ಯಾನುಸಾರ ಎಲ್ಲವನ್ನೂ ಮಾಡಬೇಕು"

## "ನೈಜ ನಮ್ರತೆಯ ಎದುರು ಕೃತ್ರಿಮ ನಮ್ರತೆ"

ನಮ್ರತೆಯು ತನ್ನ ಕಾರ್ಯರೂಪಕ ಅಚರಣೆಯಲ್ಲಿ ಹೊಂದಾಣಿಕೆ ಮತ್ತು ಮಾರ್ಪಾಡುಗಳನ್ನು ಮಾಡಿಕೊಳ್ಳತಕ್ಕದ್ದು. ಒಂದುಸಾರಿ ಹರೇಕೃಷ್ಣ ಮಂದಿರವೊಂದು ಆಕ್ರಮಿಸಲ್ಪಟ್ಟಾಗ, ಮಂದಿರವನ್ನು ರಕ್ಷಿಸಲು ಭಕ್ತರಿಂದ ಬಂದೂಕನ್ನು ಬಳಸಲಾಗಿತ್ತು. ನಂತರ ಸ್ಥಳೀಯ ಜನರಿಂದ ಭಕ್ತರಬಗ್ಗೆ ಈ ರೀತಿಯ ಫಿರ್ಯಾದಿಗಳು ಕೇಳಿಬಂದವು. "ಓಹ್! ಈ ಭಕ್ತರು ನಮ್ರರೇ? ಇವರು ಸಹಿಷ್ಣುಗಳೇ? ಹುಲ್ಲಿನ ಎಸಳಿಗಿಂತಲೂ ನಮ್ರರಾಗಿರಬೇಕಾದ ಮತ್ತು ವೃಕ್ಷಕ್ಕಿಂತಲೂ ಸಹಿಷ್ಣುಗಳಾಗಿರಬೇಕೆಂದಿರುವ

ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆ ಗಳನ್ನು ಉಲ್ಲಂಘಿಸುತ್ತಿದ್ದಾರೆ? ಅವರು ಭಕ್ತರಾಗಿರಲು ಸಾಧ್ಯವಿಲ್ಲ''ಎಂಬ ಹಲವು ದೂರುಗಳು ನನಗೆ ಬರುತ್ತಿದ್ದವು. ಆದರೆ ನಾನು ''ಅವರು ಸರಿಯಾದ ಕೆಲಸವನ್ನೇ ಮಾಡಿದ್ದಾರೆ! ಹುಲ್ಲಿನ ಎಸಳಿಗಿಂತ ನಮ್ರವಾಗಿ ಮತ್ತು ವೃಕ್ಷಕ್ಕಿಂತಲೂ ಸಹಿಷ್ಣುಗಳಾಗಿರಬೇಕೆಂದಿರುವ ಆದೇಶವು ಒಬ್ಬ ಭಕ್ತನೆದುರು ಹೇಗಿರಬೇಕೆಂಬುದಕ್ಕೆ ಅನ್ವಯಿಸುತ್ತದೆಯೇ ಹೊರತು ಮತಿಭ್ರಮಣೆಯಾದವರೊಂದಿಗೆ ವ್ಯವಹರಿಸಲು ಅಲ್ಲ!'' ಎಂದು ಉತ್ತರಿಸಿ ಅವರನ್ನು ಸಮರ್ಥಿಸುತ್ತಿದ್ದೆ.

ಸಾಮಾನ್ಯ ದರ್ಜೆಯ ಜನರು ಅಜ್ಞಾನಿಗಳಾಗಿರುತ್ತಾರೆ. ಅವರು ಬುದ್ಧಿಗೇಡಿಗಳು. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬ ಪರಿಜ್ಞಾನ ಅವರಿಗಿರುವುದಿಲ್ಲ. ಹಾಗಾಗಿ ಅವರ ಅಭಿಪ್ರಾಯಗಳಿಗೆ ಯಾವುದೇ ಮಹತ್ವವಿರುವುದಿಲ್ಲ. ಒಬ್ಬ ಭಕ್ತನು ಎಲ್ಲರನ್ನೂ ಆದರಿಸಿ ತಾನು ಯಾವುದೇ ಗೌರವವನ್ನು ಅಪೇಕ್ಷಿಸುವುದಿಲ್ಲ ಎಂದು ತೀರ್ಮಾನಿಸಲು ಯಾರು ಅರ್ಹರು? ಅವನು ನಿಜವಾಗಿಯೂ ನಮ್ರನೇ? ಸಹಿಷ್ಣುವೇ? ಎಂದು ಯಾರು ತೀರ್ಮಾನಿಸುತ್ತಾರೆ? ಹುಚ್ಚರೇ? ಅಥವಾ ಅಜ್ಞಾನಿಗಳೇ? ಯಾರು ನಮ್ರರು, ಯಾರು ಸಹನಶೀಲರು ಮತ್ತು ಯಾರು ಇತರರಿಗೆ ಗೌರವವನ್ನು ಹೊಂದಿರುವವರು ಎಂದು ತೀರ್ಮಾನಿಸುವ ಪ್ರಜ್ಞೆಯೇನಾದರೂ ಇವರಿಗೆ ಇದೆಯೇ? ನಮ್ರತೆಯನ್ನು ತೀರ್ಮಾನಿಸಬಲ್ಲ ಒಂದು ನಿರ್ದಿಷ್ಟ ಮಾಪನವಿರಲೇಬೇಕು. ಉನ್ನತ ವಿಚಾರವಾದಿಗಳಿಂದ ಪ್ರಮಾಣಿತವಾದ ನಿರ್ಣಯಗಳಲ್ಲಿ ನಮಗೆ ಅಸಕ್ತಿಯಿದೆ. ಅಜ್ಞಾನಿಗಳ ಗುಂಪಿನ ಅಭಿಪ್ರಾಯಗಳಲ್ಲಲ್ಲ.

ಯಾರು ಬೇಕಾದರೂ ತನ್ನ ಕೃತ್ರಿಮ ನಮ್ರತೆಯಿಂದ ಸಾಮಾನ್ಯ ಜನತೆಯನ್ನು ಮೋಸಗೊಳಿಸಬಹುದು ಎಂಬುದು ನಿಜ. ಆದರೆ ನಮ್ರತೆಯ ಪ್ರದರ್ಶನ ನಮ್ರತೆಯಾಗುವುದಿಲ್ಲ. ಇದು ಅಂತರಂಗದಿಂದ ಬರಬೇಕು ಮತ್ತು ಅದಕ್ಕೆ ಒಂದು ಗುರಿಯಿರಬೇಕು. ನಮ್ರತೆ, ಸಹನಶೀಲತೆ ಮತ್ತು ಅಭಿಮಾನಶೂನ್ಯತೆ, ಇವೆಲ್ಲವೂ ಒಬ್ಬ ಸುಸಂಸ್ಕೃತ, ಪ್ರಬುದ್ಧ, ವ್ಯಕ್ತಿಯ ತೀರ್ಮಾನದಿಂದ ಪರಿಗಣಿಸಲ್ಪಡುವಂಥದ್ದು. ಆನೆ, ಹುಲಿ ಅಥವಾ ನರಿಗಳನ್ನು ಹೋಲುವ ಅಜ್ಞಾನಿಗಳ ಅಭಿಪ್ರಾಯದಿಂದಲ್ಲ. ಯಾವುದು ವಿನಯ, ಯಾವುದು ಅಸಹನೆ, ಯಾವುದು ಅವಿನಯ ಎಂಬುದನ್ನು ತೀರ್ಮಾನಿಸಲು ಇವರನ್ನು ಬಿಡಬೇಕೆ? ಖಂಡಿತವಾಗಿಯೂ ಅಲ್ಲ. ''ಮಂದಿರದೊಳಗಿನ ಮೂರ್ತಿ ಅಪವಿತ್ರ ವಾಗುವುದರಲ್ಲಿದೆ! ಆದರೆ ನಾನು ಏನೂ ಮಾಡದೆ ಸುಮ್ಮನಿರುತ್ತೇನೆ,

ಏಕೆಂದರೆ ನಾನು ನಮ್ರನಾಗಿರಬೇಕು ಮತ್ತು ಸಹನಶೀಲ ನಾಗಿರಬೇಕು! ಒಂದು ನಾಯಿಯು ಮಂದಿರವನ್ನು ಪ್ರವೇಶಿಸುತ್ತಿದೆ ! ನಾನು ಅದನ್ನು ವಿರೋಧಿಸದೇ ಅದಕ್ಕೆ ಗೌರವವನ್ನು ತೋರಬೇಕು!'' ಎಂದು ಒಬ್ಬ ಭಕ್ತನು ಯೋಚಿಸಿಕೊಂಡಿರಬೇಕೆ? ಇಲ್ಲ, ಇದು ಖಂಡಿತವಾಗಿಯೂ ನಮ್ರತೆ ಮತ್ತು ಸಹನಶೀಲತೆಯ ಲಕ್ಷಣವಲ್ಲ.

ನೈಜತೆಯ ಒಂದು ಸಾಮಾನ್ಯ ವೈಚಾರಿಕ ಜ್ಞಾನ ನಮಗಿರಬೇಕು. ಇತರರಿಗೆ ಗೌರವವನ್ನು ತೋರುವ ವಿಚಾರಗಳಲ್ಲಿರುವ ಅಕ್ರಮವನ್ನು ಮುಂದುವರಿಯಲು ನಾವು ಬಿಡಬಾರದು. ಯಾರಾದರೂ ದುಷ್ಕರ್ಮಿಗಳು ಭಕ್ತರನ್ನು ಬಾಧಿಸಿದಾಗ, ದೇವಸ್ಥಾನದ ಮೂರ್ತಿಯನ್ನು ಅಪವಿತ್ರಗೊಳಿಸಲು ಮುಂದಾದಾಗ, ನಾಯಿಯು ಮಂದಿರದೊಳಗೆ ಪ್ರವೇಶಿಸಿದಾಗ, ಏನೂ ಪ್ರತಿಕ್ರಿಯೆ ತೋರದೇ ಸುಮ್ಮನಿರುವುದು ನಮ್ರತೆ, ಸಹನಶೀಲತೆ ಮತ್ತು ಇತರರಿಗೆ ಗೌರವವನ್ನು ತೋರುವ ಲಕ್ಷಣಗಳು ಎಂದು ನಾವು ಯೋಚಿಸಬಾರದು. ನಮ್ಮ ಆಸಕ್ತಿ ಕೇವಲ ಶಾಸ್ತ್ರಗಳ ಸಾಹಿತಿಕ ಅರ್ಥದಲ್ಲಿ ಮಾತ್ರವಲ್ಲ ಆದರೆ ಅವುಗಳನ್ನು ಕಾರ್ಯರೂಪದಲ್ಲಿ ಆಚರಿಸುವ ಅರ್ಥದಲ್ಲಿ ಕೂಡ.

## ಗುಲಾಮನ ಗುಲಾಮ

ನಾನು ವಿನಮ್ರ ಎಂಬುದರ ಅರ್ಥ, ನಾನೊಬ್ಬ ವೈಷ್ಣವರ ಗುಲಾಮನ ಗುಲಾಮ ಎಂದು. ಆ ಪ್ರಜ್ಞೆಯೊಂದಿಗೆ ನಾವು ಮುಂದುವರಿಯಬೇಕು. ಯಾರಾದರೂ ನನ್ನ ಒಡೆಯನನ್ನು ಅಪವಿತ್ರಗೊಳಿಸಲು ಬಂದರೆ, ಮೊದಲು ನನ್ನನ್ನು ತ್ಯಾಗಮಾಡತಕ್ಕದ್ದು, ಏಕೆಂದರೆ ''ನಾನು ಕನಿಷ್ಠ ಮಹತ್ವವುಳ್ಳವನು, ನನ್ನ ತ್ಯಾಗದಿಂದ ಯಾವುದೇ ನಷ್ಟವಾಗಲಾರದು; ನನ್ನ ಗುರುವಿನ, ಭಕ್ತರ, ನನ್ನ ಒಡೆಯನ ಹಾಗೂ ಅವನಕುಟುಂಬದ ಸದಸ್ಯರ ಘನತೆಯನ್ನು ಕಾಪಾಡಲು ನನ್ನನ್ನು ನಾನು ಬಲಿಕೊಡಲೇಬೇಕು'' ಎಂಬುದಾಗಿ ನಾವು ಚಿಂತಿಸತಕದ್ದು.

ಯಾವುದು ಆದರಿಸಲ್ಪಡಬೇಕು ಎಂಬುದನ್ನು ನಾವು ಅರ್ಥೈಸಿಕೊಳ್ಳತಕ್ಕದ್ದು. ನಮ್ಮ ಗೌರವವನ್ನು ನಾವು ಅತ್ಯುನ್ನತ ಸತ್ಯಕ್ಕೆ, ದೇವಾಧಿದೇವನಿಗೆ ಸಲ್ಲಿಸುತ್ತೇವೆ. ನಮ್ಮ ಯಾವತ್ತೂ ವ್ಯವಹಾರಗಳು ಆ ಧ್ಯೇಯದೊಡನೆ ಸಾಮರಸ್ಯವನ್ನು ಹೊಂದಿರಬೇಕು. ನಮ್ಮೊಳಗೆ ನಾವು ಸಾಪೇಕ್ಷತೆಯ ಉನ್ನತ ವಿಚಾರವನ್ನು ಇರಿಸಿಕೊಂಡರೆ, ನಾವು ನಮ್ಮನ್ನು ಅತ್ಯಂತ ಕೆಳಮಟ್ಟದವರಾಗಿ ನೋಡಬಹುದು. ನಮ್ಮ ಪೋಷಕರಿಗೆ

ಅಪಾಯ ಸಂಭವಿಸಿದಲ್ಲಿ ಮೊದಲು ನಮ್ಮನ್ನು ನಾವು ಬಲಿಕೊಡುತ್ತೇವೆ. ನಮ್ರತೆಯ ತಾತ್ಪರ್ಯವನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುವಾಗ ಇವೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳಬೇಕು, ಭೌತಿಕ ಅನುಕರಣೆಯನ್ನಲ್ಲ, ಆದರೆ ನಿಷ್ಕಪಟ ವಿನಮ್ರತೆಯನ್ನು; ಇದು ಒಂದು ಕಾರ್ಯರೂಪಕ ತಿಳುವಳಿಕೆಯ ಪ್ರಶ್ನೆ. ಪ್ರಸಿದ್ಧಿ ಮತ್ತು ಆದರವನ್ನು ಭಗವಂತನಿಗೆ ಮತ್ತು ಅವನ ಭಕ್ತರಿಗೆ ಬಿಟ್ಟುಕೊಡತಕ್ಕದ್ದು, ಬೇರೆಯಾರಿಗೂ ಅಲ್ಲ.

ಭಕ್ತಿಯ ಉನ್ನತ ಹಂತಗಳಲ್ಲಿ, ಖಂಡಿತವಾಗಿ, ಭೌತಿಕ ಸಂಪರ್ಕವನ್ನು ಸಂಪೂರ್ಣವಾಗಿ ಕಡಿದುಕೊಂಡ ಪರಮಹಂಸ ಸಾಧುಗಳಿಗೆ ನಮ್ರತೆಯನ್ನು ಇನ್ನೊಂದುರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿಬರಬಹುದು. ಆದರೆ ಪ್ರಚಾರದ ಹಂತದಲ್ಲಿ ಎರಡನೇ ದರ್ಜೆಯ ಭಕ್ತರು ಸನ್ನಿವೇಶಗಳನ್ನು ಬೇರೆರೀತಿಯಲ್ಲಿ ಸ್ವೀಕರಿಸಬೇಕಾಗುತ್ತದೆ. ನಮ್ಮ ಗುರುಮಹಾರಾಜರು ಹೇಳಿದಹಾಗೆ "ಒಂದುವೇಳೆ ನಾನು ದೃಢಪ್ರತಿಪಾದಕನಲ್ಲದೇ, ಏಕಾಂತವಾಸಿ, ಬಾಬಾಜಿ ವೇಷದಲ್ಲಿದ್ದಿದ್ದರೆ, ಆ ಜಾಗದಿಂದ ಯಾವುದೇ ಪ್ರತಿರೋಧವನ್ನೊಡ್ಡದೇ ಹೊರಟು ಹೋಗುತ್ತಿದ್ದೆ. ಆದರೆ ನಾವು ಧರ್ಮಪ್ರಚಾರ ಮಾಡುವಾಗ, ಹಲವು ಜೀವಾತ್ಮರನ್ನು ಭಗವಂತನ ಧಾಮಕ್ಕೆ ನಿರ್ದೇಶಿಸುವ ಹೊಣೆಯನ್ನು ಹೊತ್ತಿರುವಾಗ, ಅದಕ್ಕೆ ಅನುಗುಣವಾಗಿ ನಮ್ಮನ್ನು ನಾವು ಹೊಂದಿಸಿಕೊಳ್ಳಬೇಕು". ಸಾಮಾನ್ಯವಾಗಿ, ನಮ್ಮ ವೈಯಕ್ತಿಕ ವಿರೋಧಿಗಳನ್ನು ನಾವು ಸಮಭಾವದಲ್ಲಿ ನೋಡಲಾರೆವು, ಆದರೆ ನಾವು ಭಗವಂತನ ಪರವಾಗಿ ಒಂದು ವ್ಯವಸ್ಥಿತಮಾರ್ಗದಲ್ಲಿ ಪ್ರಚಾರಮಾಡುವಾಗ ನಮ್ಮ ಕರ್ತವ್ಯ ಬದಲಾಗುತ್ತದೆ. ವಿರೋಧಿಗಳನ್ನು ನಾವು ಪ್ರತ್ಯೇಕವಾಗಿ ಪರಿಗಣಿಸಲಾಗದು.

ಶಾಸ್ತ್ರಗಳಲ್ಲಿ ಶ್ರೀಲ ಜೀವಗೋಸ್ವಾಮಿಯವರು ಹೇಳಿರುವ ಪ್ರಕಾರ, ಒಬ್ಬನ ನಿರ್ದಿಷ್ಟ ಸ್ಥಾನಮಾನಕ್ಕೆ ಅನುಗುಣವಾಗಿ ಈ ವಿಷಯಗಳನ್ನು ಪರಿಗಣಿಸಬೇಕು ಮತ್ತು ಅಗತ್ಯವಿರುವುದನ್ನು ಮಾಡಬೇಕು. ಅವರ ಆದೇಶದ ಪ್ರಕಾರ, ಒಬ್ಬ ಭಕ್ತನಿಗೆ ಅಧಿಕಾರ, ಅಂತಸ್ತು ಇದ್ದಲ್ಲಿ, ಅವನು ರಾಜನಾಗಿದ್ದಲ್ಲಿ, ಮತ್ತು ಶುದ್ಧವೈಷ್ಣವರೊಬ್ಬರನ್ನು ಯಾರಾದರೂ ಪದೇ ಪದೇ ಮರಳಿ ಮರಳಿ ನಿಂದನೆ ಮಾಡುತ್ತಿರುವುದನ್ನು ಕಂಡರೆ, ರಾಜನಾದವನು ಅವನನ್ನು ಕಾನೂನುಬದ್ಧವಾಗಿ ದಂಡಿಸಿ ರಾಜ್ಯದಿಂದ ಹೊರಗಟ್ಟತಕ್ಕದ್ದು ಅಥವಾ ಅವನ ನಾಲಿಗೆಯನ್ನು ಕತ್ತರಿಸತಕ್ಕದ್ದು(ವೈಷ್ಣವ ನಿಂದಕ ಜಿಹ್ವಾಹಾತ). ಆದರೆ ಅದು ಸಾಮಾನ್ಯ ಮನುಷ್ಯನ ಕರ್ತವ್ಯವಲ್ಲ; ಸಾಮಾನ್ಯ ಮನುಷ್ಯನೊಬ್ಬ ಆ ರೀತಿ

ನಡೆದುಕೊಂಡರೆ ಅನಾಹುತವಾದೀತು. ನಾವು ಯಾರಮೇಲೂ ದೈಹಿಕದಂಡನೆಯನ್ನು ಹೇರಲು ಕಾತರಿಸಬಾರದು.

ಹನುಮಂತ ಒಬ್ಬ ವೈಷ್ಣವ, ಆದರೆ ಅವನು ಎಷ್ಟೋ ಜೀವಗಳನ್ನು ನಾಶಮಾಡಿದ್ದನ್ನು ಕಾಣುತ್ತೇವೆ. ಅದೇ ವಿಷಯ ಅರ್ಜುನ ಹಾಗೂ ಇನ್ನಿತರ ಭಕ್ತರ ವಿಷಯದಲ್ಲಿ ಕೂಡಾ ಸತ್ಯ. ಶ್ರೀಕೃಷ್ಣ ಮತ್ತು ಶ್ರೀರಾಮರು ಕೂಡಾ ಹಲವಾರು ರಾಕ್ಷಸರನ್ನು ಯುದ್ಧದಲ್ಲಿ ಕೊಂದಿದ್ದನ್ನು ನೋಡಬಹುದು. ನಮ್ರತೆಯ ದೈಹಿಕ ಪ್ರದರ್ಶನ ಅದರ ನಿಜವಾದ ಅರ್ಥವನ್ನು ಪ್ರತಿನಿಧಿಸುವುದಿಲ್ಲ. ಶ್ರೀಗುರು ಅಥವಾ ವೈಷ್ಣವರ ನಿಂದನೆಯುಂಟಾದಾಗ ಒಬ್ಬ ಭಕ್ತನು ತನ್ನ ಸಾಮರ್ಥ್ಯಕ್ಕನುಗುಣವಾಗಿ ನಿಂದಕರನ್ನು ವಿರೋಧಿಸುತ್ತಾನೆ.

ಶ್ರೀಲ ಭಕ್ತಿವಿನೋದ ಠಾಕೂರರು ತಾವು ರಚಿಸಿದ ಗೀತೆಯೊಂದರಲ್ಲಿ ಹೇಳುತ್ತಾರೆ; ನಾವು ಇತರರ ದುಷ್ಕೃತ್ಯಗಳನ್ನು ಮತ್ತು ಪರಿಸರದಲ್ಲಿ ಉಂಟಾದ ಪ್ರಕ್ಷುಬ್ಧತೆಯನ್ನು ಸಹಿಸಿಕೊಳ್ಳುವುದು ಮಾತ್ರವಲ್ಲದೇ, ಯಾರಿಂದ ನಾವು ತೊಂದರೆಗೊಳಪಟಿದ್ದೇವೋ ಅವರಿಗೆ ಒಳಿತನ್ನು ಕೂಡಾ ಮಾಡಬೇಕು. ಇದಕ್ಕೆ ವೃಕ್ಷದ ಉದಾಹರಣೆಯನ್ನು ಕೊಡಲಾಗಿದೆ. ಒಬ್ಬ ವೃಕ್ಷವನ್ನು ಕಡಿದು ಉರುಳಿಸಿದರೂ ಕೂಡಾ ಆ ವೃಕ್ಷವು ಅದನ್ನು ಕಡಿದವನಿಗೆ ನೆರಳನ್ನು ಮತ್ತು ನೆಮ್ಮದಿಯನ್ನು ನೀಡುತ್ತದೆ. ಕೊನೆಯದಾಗಿ ಅವರು ಹೇಳುತ್ತಾರೆ; ವಿನಮ್ರತೆ, ದಯೆ, ಇತರರಿಗೆ ಗೌರವ, ಸ್ಥಾನಮಾನ ಮತ್ತು ಪ್ರಸಿದ್ಧಿಯ ತ್ಯಾಗ, ಈ ನಾಲ್ಕು ಶ್ರೀಕೃಷ್ಣನ ದಿವ್ಯನಾಮಗಳನ್ನು ಜಪಿಸಲು ಬೇಕಿರುವ ಅರ್ಹತೆಗಳು.

ನಾವು ಕನಿಷ್ಠರಲ್ಲಿ ಕನಿಷ್ಠರು, ನಾವು ಭಿಕಾರಿಗಳು ಎಂಬ ಪ್ರಜ್ಞೆ ನಮ್ಮಲ್ಲಿ ಸದಾ ಜಾಗೃತವಾಗಿರಬೇಕು. "ನಾನು ಭಿಕಾರಿಯಾಗಿದ್ದರೂ ಕೂಡಾ, ಅತ್ಯಂತ ಶ್ರೇಷ್ಠವಾದುದನ್ನು ಬೇಡಲು ಬಂದಿರುವೆ; ಪ್ರಕ್ಷುಬ್ಧತೆಯು ನನ್ನ ಪ್ರಯತ್ನಕ್ಕೆ ಅಡ್ಡಿಯಾಗದಿರಲಿ" ಎಂದು ನಾವು ಯೋಚಿಸಬೇಕು. ಅದೇವೇಳೆ ಪರಿಸರದೊಂದಿಗೆ ನಮ್ಮ ವರ್ತನೆ ಗೌರವಪೂರ್ವಕವಾಗಿರಬೇಕು.

ಕೃಷ್ಣನ ದಿವ್ಯ ವೈಚಾರಿಕತೆಯಲ್ಲಿ ವಿದ್ಯಾವಂತನಾದಮೇಲೆ, ಒಬ್ಬ ಅವರವರ ಸ್ಥಾನಮಾನಕ್ಕನುಗುಣವಾಗಿ ಪ್ರತಿಯೊಬ್ಬರನ್ನೂ ಗೌರವಿಸಬೇಕು. ನಾವು ಭಗವಂತನ ಸೇವಕನ ಸ್ಥಾನವನ್ನು ಸ್ವೀಕರಿಸಬೇಕೆಂಬುದು ನಾಮಭಜನೆಯಲ್ಲಿ ನಿರ್ದೇಶಿತವಾದ

ಆದೇಶವಾಗಿದೆ. ನೀವು ಕೃಷ್ಣನ ದಿವ್ಯನಾಮವನ್ನು ಜಪಿಸಬೇಕೆಂದಿದ್ದರೆ, ಈ ಪ್ರಪಂಚದ ಕ್ಷುಲ್ಲಕ ವಿಷಯಗಳಲ್ಲಿ ನಿಮ್ಮ ಸಮಯ ಹಾಗೂ ಶಕ್ತಿಯನ್ನು ವ್ಯಯಿಸಬೇಡಿ. ಭೌತಿಕ ನೆಮ್ಮದಿ, ಧನಾರ್ಜನೆ ಮತ್ತು ಪ್ರತಿಷ್ಠೆಯಂತಹ ಕ್ಷುಲ್ಲಕ ವಿಷಯಗಳ ಸಂಗ್ರಹಣೆಯ ಇಚ್ಛೆಯಿಂದ ನಿಮ್ಮ ಗಮನವು ಪ್ರಕ್ಷುಬ್ಧವಾಗದಂತೆ ನೋಡಿಕೊಳ್ಳಿ. ನೆನಪಿಡಿ! ನೀವು ಉನ್ನತವಾದ ವಸ್ತುವಿಗೋಸ್ಕರ ಪ್ರಯತ್ನಿಸುತ್ತುರುವಿರಿ ಮತ್ತು ಕೃಷ್ಣಪ್ರಜ್ಞೆಗೆ ಹೋಲಿಸಿದರೆ ಇತರ ಎಲ್ಲಾ ವಿಷಯಗಳೂ ನಿಕೃಷ್ಟ. ಹಾಗಾಗಿ ನಿಮ್ಮ ಶಕ್ತಿಯನ್ನು ಮತ್ತು ಅಮೂಲ್ಯ ಸಮಯವನ್ನು ಹಾಳುಮಾಡಬೇಡಿ. ಮಿತವ್ಯಯಿಗಳಾಗಿ. ಜೀವನದ ಅತ್ಯುನ್ನತ ಗುರಿಯನ್ನು ಸಾಧಿಸುವ ಅವಕಾಶ ನಿಮಗಿದೆ.

## ಶ್ಲೋಕ ೪

**ನ ಧನಮ್ ನ ಜನಮ್ ನ ಸುಂದರೀಮ್**
**ಕವಿತಾಂ ವಾ ಜಗದೀಶ ಕಾಮಯೇ**
**ಮಮ ಜನ್ಮನಿ ಜನ್ಮನೀಶ್ವರೇ**
**ಭವತಾದ್ಭಕ್ತಿರಹೈತುಕೀ ತ್ವಯಿ**

## ಅನುವಾದ

**ಓ ಭಗವಂತಾ! ನನಗೆ ಧನಾರ್ಜನೆಯು, ಅನುಯಾಯಿಗಳನ್ನು ಹೊಂದುವ, ಸುಂದರ ಸ್ತ್ರೀಯರ ಮತ್ತು ಮೋಕ್ಷದ ಬಯಕೆಗಳಿಲ್ಲ. ಜನ್ಮ ಜನ್ಮಾಂತರದಲ್ಲೂ ನಿನ್ನ ನಿಷ್ಕಾರಣ ಭಕ್ತಿಪೂರ್ವಕಸೇವೆಯ ಅವಕಾಶ ನನ್ನದಾಗಲಿ ಎಂಬುದೊಂದೇ ನನ್ನ ಪ್ರಾರ್ಥನೆ.**

## ಭಾವಾರ್ಥ

ಈ ದಿಕ್ಕಿನಲ್ಲಿ ನಾವು ಮುಂದುವರಿಯುವ ಪ್ರಯತ್ನವನ್ನು ಮಾಡಬೇಕು. ಶ್ರೀ ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ "ನನಗೆ ಧನ ಬೇಡ(ನ ಧನಮ್), ನನಗೆ ಜನಪ್ರಿಯತೆ ಅಥವಾ ಹಿಂಬಾಲಕರು ಬೇಡ(ನ ಜನಮ್), ಸುಂದರ ಸ್ತ್ರೀಯರ ಸಾಂಗತ್ಯ ಬೇಡ (ನ ಸುಂದರೀಮ್), ನನಗೆ ಹೆಸರು ಅಥವಾ ಕವಿಯಂತೆ ಖ್ಯಾತಿ (ಕವಿತಾಮ್ ವಾ) ಬೇಡ" ಇದು ಈ ಶ್ಲೋಕದ ಸಾಮಾನ್ಯ ಅರ್ಥ. ಆದರೆ ಶ್ರೀಲ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರ ಮತ್ತು ಶ್ರೀಲ ಭಕ್ತಿವಿನೋದ ಠಾಕೂರರ ಟಿಪ್ಪಣಿಗಳಲ್ಲಿ ಈ ಶ್ಲೋಕವನ್ನು ಬಹಳ ಆಳವಾಗಿ ವಿಶ್ಲೇಷಿಸಲಾಗಿದೆ.

ನಮ್ಮ ಗುರುಮಹಾರಾಜರು ಈ ಶ್ಲೋಕದ ಟಿಪ್ಪಣಿಯಲ್ಲಿ, ಸಂಪತ್ತು, ಹಿಂಬಾಲಕರು, ಸ್ತ್ರೀಯರು ಮತ್ತು ಪಾಂಡಿತ್ಯಗಳು; ಸಂಪತ್ತು, ಕರ್ತವ್ಯ, ಇಂದ್ರಿಯತೋಷಣೆ ಮತ್ತು ಮೋಕ್ಷ (ಧರ್ಮ, ಅರ್ಥ,ಕಾಮ ಮತ್ತು ಮೋಕ್ಷ)ಗಳನ್ನು ಪ್ರತಿನಿಧಿಸುತ್ತವೆ ಎಂದಿದ್ದಾರೆ. ಶ್ರೀಲ ಭಕ್ತಿವಿನೋದ ಠಾಕೂರರು ಈ ಪ್ರಕರಣದಲ್ಲಿ "ಸಂಪತ್ತು" ಎಂದರೆ ಒಬ್ಬನ

ನಿಯಮಿತವಾದ ಕರ್ತವ್ಯಗಳಫಲವಾಗಿ ಬಂದ ಸಂಪತ್ತು ಎಂದು ವಿವರಿಸಿದ್ದಾರೆ. ಇದನ್ನು ಅರ್ಥ ಅಥವಾ ಆರ್ಥಿಕತೆಯ ಅಭಿವೃದ್ಧಿ ಎಂದು ಕೂಡಾ ಅರ್ಥೈಸಿಕೊಳ್ಳಬಹುದು. ಹಿಂಬಾಲಕರು ಎಂದರೆ, ನೆಮ್ಮದಿಗೋಸ್ಕರ ಇರುವ ದೈಹಿಕ ಸಂಬಂಧಗಳು; ಹೆಂಡತಿ, ಮಕ್ಕಳು, ಬಂಧುಗಳು ಇತ್ಯಾದಿ. ಸುಂದರೀಮ್ ಅಂದರೆ, ಇಂದ್ರಿಯ ತೃಪ್ತಿಗೋಸ್ಕರ ಸ್ತ್ರೀಸಂಗ ಅಥವಾ ಕಾಮ; ಮತ್ತು ಕವಿತಾಮ್ ಎಂದರೆ, ಕಾವ್ಯ. ಇದು ಮೋಕ್ಷವನ್ನು ಪ್ರತಿನಿಧಿಸುತ್ತದೆ. ಮೋಕ್ಷವು ತೋರಿಕೆಗೆ ಬಹಳ ಮಹತ್ವದ್ದಾಗಿ ಕಂಡುಬಂದರೂ, ಯಥಾರ್ಥವಾಗಿ, ಕಾವ್ಯದಹಾಗೆ ಇದು ಕೇವಲ ಭಾಷಾಲಂಕಾರ ಅಷ್ಟೇ. ಈ ಮೋಕ್ಷವು ಕೇವಲ ಊಹೆ ಅಷ್ಟೇ. ಏಕೆಂದರೆ ಇದರ ಅಂತಿಮ ಫಲಿತಾಂಶವಾಗಿ ಇಲ್ಲಿ ಒಬ್ಬನ ಬದುಕು ಮಾಯವಾಗುತ್ತದೆ.

ಶ್ರೀ ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ, "ಓ ಜಗದೊಡೆಯಾ! ನಾನು ನಿನ್ನಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯ ಉದ್ದೇಶವನ್ನು ಹೊಂದಿರದ ಸ್ವಯಂಪ್ರೇರಿತ ಭಕ್ತಿಗಾಗಿ ಪ್ರಾರ್ಥಿಸುತ್ತೇನೆ. ಸ್ವಾಭಾವಿಕವಾದ ಸೇವಾ ಮನೋಭಾವವು ನನಗೆ ಬೇಕು". ಪ್ರೇಮ ಎಂದರೆ, ಭಾವ, ಪ್ರೀತಿ. "ನಾನು ನಿನ್ನ ಸೇವೆಯನ್ನು ಕೈಗೊಳ್ಳುತ್ತೇನೆ, ಅದಕ್ಕೆ ಪ್ರತಿಯಾಗಿ ಇನ್ನೂ ಹೆಚ್ಚು ಹೆಚ್ಚಾಗಿ ನಿನ್ನ ಸೇವೆಯನ್ನು ಅಪೇಕ್ಷಿಸುವ ಪ್ರವೃತ್ತಿಯನ್ನು ನನಗೆ ನೀಡು! ನಿನ್ನ ಸೇವೆಯನ್ನು ಮಾಡಲು ಹೆಚ್ಚಿನ ಶಕ್ತಿಯನ್ನು ಮತ್ತು ಹಂಬಲವನ್ನು ನೀಡು! ಹಣಕಾಸಿನ ವ್ಯವಹಾರದಲ್ಲಿ ಬಡ್ಡಿಯೇ ಬಂಡವಾಳವಾಗುವಂತೆ ನಿನ್ನಲ್ಲಿ ನನ್ನ ಒಲವು ಇನ್ನೂ ವೃದ್ಧಿಯಾಗುತ್ತದೆ. ನಾನು ನಿನ್ನ ಸೇವೆಯನ್ನು ಮಾಡುತ್ತೇನೆ, ಮತ್ತು ನೀನು ನನಗೆ ಏನಾದರೂ ಕೊಡಲು ಇಚ್ಛಿಸುವುದಾದರೆ, ನನ್ನ ಸೇವಾಮನೋಭಾವವನ್ನು ಹೆಚ್ಚಿಸಲು ಬಂಡವಾಳವನ್ನು ನೀಡು, ಆಗ ನನ್ನ ಸೇವಾ ಮನೋಭಾವ ವೃದ್ಧಿಯಾಗುತ್ತದೆ." ಈ ರೀತಿಯಾಗಿ ಒಬ್ಬ ನಿಜವಾದ ಭಕ್ತನು ಕೃಷ್ಣನನ್ನು ಪ್ರಾರ್ಥಿಸುತ್ತಾನೆ.

"ಓ ಭಗವಂತಾ! ನನ್ನ ಕರ್ಮಗಳ ಫಲವಾಗಿ ನಾನು ಎಲ್ಲಿಯೇ ಜನಿಸಲಿ, ನಿನ್ನ ಸೇವೆಯನ್ನು ಮಾತ್ರ ಬಯಸುತ್ತೇನೆ, ಮತ್ತು ಯಾವುದೇ ಉದ್ದೇಶಗಳಿಲ್ಲದೇ ನಿನ್ನನ್ನು ಸೇವಿಸಬಯಸುತ್ತೇನೆ. ಯಾವುದೇ ಪ್ರತಿಫಲವನ್ನು ಬಯಸುವುದಿಲ್ಲ". ನಮ್ಮನ್ನು ನಾಲ್ಕು ದಿಕ್ಕುಗಳಿಂದ ಸುತ್ತುವರಿದಿರುವ ಸಾಮಾನ್ಯ ಬಯಕೆಗಳೇ ಈ ನಾಲ್ಕು ದರ್ಜೆಗಳು. ಸಂಪತ್ತು, ಹಿಂಬಾಲಕರು, ಸ್ತ್ರೀಸಂಗ ಮತ್ತು ಮೋಕ್ಷ ಅಂದರೆ; ಧರ್ಮ, ಅರ್ಥ,ಕಾಮ ಮತ್ತು ಮೋಕ್ಷ. ಈ ಪ್ರಕಾರ ಈ ಶ್ಲೋಕದಲ್ಲಿ ಬದುಕಿನ ವಿವಿಧ ಧ್ಯೇಯಗಳ ದರ್ಜೆಗಳು ವೈಜ್ಞಾನಿಕವಾಗಿ ವಿಶ್ಲೇಷಿಸಲ್ಪಟ್ಟಿವೆ.

## ಪರಿಶುದ್ಧ ಪ್ರಾರ್ಥನೆಗಳು

ಆದರೆ ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ "ನನ್ನ ಪ್ರಭುವೇ ! ಈ ವಿಷಯಗಳಲ್ಲಿ ನನಗೆ ಯಾವುದೇ ಆಸಕ್ತಿಯಿಲ್ಲ, ನನಗೆ ಮೋಕ್ಷದ ಬಯಕೆಯೂ ಇಲ್ಲ. "ನನಗೆ ಮೋಕ್ಷವನ್ನು ಕೊಡು, ಮೋಕ್ಷವನ್ನು ಹೊಂದಿ ನಾನು ನಿನಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಬಲ್ಲೆ ಎಂದು ಕೂಡಾ ನಾನು ಪ್ರಾರ್ಥಿಸುವುದಿಲ್ಲ." ಭಗವಂತನ ಮುಂದೆ ಈ ತರಹದ ಯಾವುದೇ ಕರಾರುಗಳನ್ನು ನಾವು ಮಂಡಿಸಬಾರದು.ಇದು ಅತ್ಯಂತ ಶುದ್ಧ ಪ್ರಾರ್ಥನೆ. "ನನ್ನ ಕರ್ಮಫಲಗಳಿಗನುಗುಣವಾಗಿ, ನಾನು ಪಕ್ಷಿಯಾಗಿ, ಮೃಗವಾಗಿ, ಇಲ್ಲಿ ಅಥವಾ ಅಲ್ಲಿ, ಅಥವಾ ನರಕದಲ್ಲಿ ಕೂಡಾ ಜನಿಸಬಹುದು, ಪರವಾಗಿಲ್ಲ. ನಾನು ಒಂದೇ ಒಂದು ವಿಷಯವನ್ನು ಮಾತ್ರ ಬಯಸುತ್ತೇನೆ. ನನ್ನಲ್ಲಿ ನಿನ್ನ ಬಗೆಗಿನ ಆಕರ್ಷಣೆ ಎಂದೂ ಕೊನೆಗೊಳ್ಳದಿರಲಿ, ಬದಲಾಗಿ ಅದು ಇನ್ನೂ ಹೆಚ್ಚು ವೃದ್ಧಿಸುತ್ತಿರಲಿ ಎಂದು ನಾನು ಪ್ರಾರ್ಥಿಸುತ್ತೇನೆ".

ಭಕ್ತಿಯೆಂಬುದು ನಿಷ್ಕಾರಣವಾದದ್ದು. ಅಹೈತುಕೀ; ಇದು ಸ್ಪಷ್ಟವಾಗಿ ಸ್ವಾಭಾವಿಕ ಮತ್ತು ಯಾವುದೇ ಇತರ ಬಯಕೆಗಳನ್ನು ಹೊಂದಿರುವುದಿಲ್ಲ "ಬಡ್ಡಿಯು ಬಂಡವಾಳವಾಗಿ ಹೂಡಲ್ಪಟ್ಟರೆ ನಾನು ಎಂದಿಗೂ ಲಾಭವನ್ನು ಅನುಭವಿಸುವುದು ಸಾಧ್ಯವಿಲ್ಲ" ಎಂದು ಯಾರಾದರೂ ಹೇಳಬಹುದು. ಆದರೆ ನಾವು ಸಮರ್ಪಣೆಯ ಮೂಲಕ ಆನಂದಿಸುವುದರಲ್ಲಿ ಆಸಕ್ತಿಯನ್ನು ಹೊಂದಿರುವವರು. "ನನ್ನ ಖರ್ಚಿನಲ್ಲಿ ಇತರರು ಆನಂದಿಸಲಿ" ಎಂಬ ತತ್ತ್ವವೇ ಅತ್ಯುನ್ನತ ಆನಂದದ ತಳಪಾಯವಾಗಿದೆ. "ಇತರರೊಡನೆ ಕೃಷ್ಣನು ಆನಂದಿಸಲಿ, ನಾನು ಬಲಿಪಶುವಾಗುವೆ" ಎಂದು ಭಕ್ತನಾದವನು ಯೋಚಿಸುತ್ತಾನೆ.

ಭಕ್ತಿವಿನೋದ ಠಾಕೂರರು ಹೇಳುತ್ತಾರೆ, ಒಂದು ತಿಳುವಳಿಕೆಯಿಲ್ಲದ ಶಿಶುವು ತನ್ನನ್ನು ಒಬ್ಬ ವೈರಿ ಅಥವಾ ಒಂದು ರೋಗವು ಆಕ್ರಮಿಸಿದಾಗ, ಅದು ತನ್ನನ್ನು ತಾನು ಕಾಪಾಡಿಕೊಳ್ಳಲಾರದು. ಅದೇ ರೀತಿ ಪ್ರಾರಂಭದಲ್ಲಿ, ದಿವ್ಯನಾಮದ ಬಗ್ಗೆ ನಿಮ್ಮ ತಿಳುವಳಿಕೆಯು ಶೈಶವಾವಸ್ಥೆಯಲ್ಲಿರುವಾಗ, ದಿವ್ಯನಾಮದ ವಿರುದ್ಧ ಅನರ್ಥಗಳು ಮತ್ತು ಅನ್ಯಾಯಗಳು ಮೇಲುಗೈ ಸಾಧಿಸಬಹುದು. ಆದರೆ ಒಬ್ಬನ ತಿಳುವಳಿಕೆಯು ಪ್ರಬುದ್ಧವಾದಾಗ ಅನರ್ಥಗಳು ಅವನನ್ನು ಸಮೀಪಿಸಲಾರವು. ಆದರೆ ಪ್ರಾರಂಭದಲ್ಲಿ ಎಷ್ಟೋ ಅನರ್ಥಗಳು ಬರುತ್ತವೆ ಮತ್ತು ಆಕ್ರಮಿಸುತ್ತವೆ

## ಆತ್ಮಾಹುತಿ ದಳ

“ದಿವ್ಯನಾಮವು ಸುಂದರವಾದದ್ದು, ಕೃಪಾಮಯವಾದದ್ದು ಮತ್ತು ಆಕರ್ಷಕವಾದದ್ದು. ಅದರ ವಿರುದ್ಧವಿರುವ ಎಲ್ಲಾ ಅನರ್ಥಗಳೊಂದಿಗೆ ನನ್ನನ್ನು ಸಾಯಲು ಬಿಡಿ, ಆವಾಗ ಉಳಿದ ಎಲ್ಲರೂ ದಿವ್ಯನಾಮದ ಅಮೃತವನ್ನು ಆಸ್ವಾದಿಸಬಹುದು” ಎಂದು ಭಕ್ತಿವಿನೋದ ಠಾಕೂರರು ಹೇಳುತ್ತಾರೆ. ಯುದ್ಧದ ಸಮಯದಲ್ಲಿ ಸ್ಫೋಟಕಗಳನ್ನು ತನ್ನ ಕಂಕುಳಲ್ಲಿಟ್ಟುಕೊಂಡು ವಿರೋಧಿ ನೌಕೆಯ ಹೊಗೆಕೊಳವೆಯೊಳಗೆ ಧುಮುಕುವ ಆತ್ಮಾಹುತಿದಳದ ಯೋಧನಂತೆ ಅವರು ಬಲಿಯಾಗಬೇಕೆಂದಿದ್ದಾರೆ. ಜಪಾನೀಯರು ಈ ಆತ್ಮಾಹುತಿ ದಳವನ್ನು ಬ್ರಿಟಿಷರ ವಿರುದ್ಧ ಸಮರದಲ್ಲಿ ಪ್ರಾರಂಭಿಸಿದರು. ಅವರ ಈ ನಿರ್ಭೀತ ಕಾರ್ಯದಬಗ್ಗೆ ಕೇಳಿಸಿಕೊಂಡಾಗ ಹಿಟ್ಲರ್ “ಜಪಾನೀಯರಿಂದ ನಾವು ಕಲಿಯಬೇಕಾದದ್ದು ಬಹಳವಿದೆ” ಎಂದು ಉದ್ಗರಿಸಿದನಂತೆ. ಹಾಗಾಗಿ ಭಕ್ತಿವಿನೋದ ಠಾಕೂರರು ಈ ರೀತಿ ಪ್ರಾರ್ಥಿಸುತ್ತಾರೆ “ದಿವ್ಯ ನಾಮದ ವಿರುದ್ಧದ ಎಲ್ಲಾ ಅನರ್ಥಗಳೊಂದಿಗೆ ನಾನು ಸಾಯಬೇಕೆಂದಿದ್ದೇನೆ, ಆಗ ಎಲ್ಲರೂ ದಿವ್ಯನಾಮದ ಸೇವೆಯ ಅಮೃತನ್ನು ಆಸ್ವಾದಿಸಬಹುದು”.

ವಾಸುದೇವದತ್ತರು ಕೂಡಾ ಹೀಗೆಯೇ ಪ್ರಾರ್ಥಿಸಿದರು. “ಎಲ್ಲಾ ಜೀವಾತ್ಮರ ಪಾಪಗಳನ್ನು ನನಗೆ ಕೊಡಿ ಮತ್ತು ನನ್ನನ್ನು ನರಕಕ್ಕೆ ಎಸೆಯಿರಿ, ಹಾಗಾಗಿ ಎಲ್ಲರೂ ಕೃಷ್ಣಪ್ರೇಮದ ಪ್ರಯೋಜನವನ್ನು ಪಡೆಯಬಹುದು” ಅಂತಹ ಉನ್ನತವಾದ ಮನೋಭಾವದೊಂದಿಗೆ ಅವರು ಅಮರರಾಗುತ್ತಾರೆ. ಅದೇ “ಬದುಕುವುದಕ್ಕಾಗಿ ಸಾಯುವುದು”. ಇಂತಹ ಭಾವುಕತೆಯನ್ನು ಉಂಟುಮಾಡಬಲ್ಲ ಅಷ್ಟೊಂದು ಉನ್ನತ ಗೌರವ ಭಗವಂತನಲ್ಲಿ ನಮಗೆ ಇರುವಾಗ ನಾವು ಉನ್ನತವಾದ ಬದುಕನ್ನು ಬದುಕುವ ಬದುಕಿನ ಅತ್ಯುನ್ನತ ಪ್ರಾಪ್ತಿಯನ್ನು ಕಾಣುತ್ತೇವೆ. ಆ ಆನಂದವೇ ನಮಗೆ ಬೇಕಾಗಿರುವುದು. ಈ ಭಾವವನ್ನು ಚೈತನ್ಯ ಮಹಾಪ್ರಭುಗಳ ಶಿಕ್ಷಾಷ್ಟಕದ ಕೊನೆಯ ಶ್ಲೋಕವು ವಿವರಿಸುತ್ತದೆ. ನಾರದ ಮಹರ್ಷಿಗಳು ಕೃಷ್ಣನ ತಲೆನೋವಿನ ಪರಿಹಾರಕ್ಕಾಗಿ ಗೋಪಿಯರಲ್ಲಿ ಅವರ ಪಾದಧೂಳಿಯನ್ನು ಯಾಚಿಸಿದ ಪ್ರಕರಣದಲ್ಲಿಯೂ ಈ ಉದಾಹರಣೆಯನ್ನು ಕಾಣುತ್ತೇವೆ. ಇಲ್ಲಿ ನಾವು ಆತ್ಮಸಮರ್ಪಣೆಯ ಪರಾಕಾಷ್ಠೆಯನ್ನು ಕಾಣುತ್ತೇವೆ. ಅದೇ ಭಕ್ತಿಯ ಪರಿಪೂರ್ಣ ಸಾರಾಂಶ. ಭಕ್ತನ ನೈಜ ಬದುಕು ಸಮರ್ಪಣೆಯನ್ನು ಅವಲಂಬಿಸಿದೆ. ಸಮರ್ಪಣಾ ಮನೋಭಾವ ಹೆಚ್ಚಾದಷ್ಟೂ ಪ್ರಯೋಜನ ವೃದ್ಧಿಸುತ್ತದೆ.

ಸಮರ್ಪಣೆ ಎಂದರೆ "ಬದುಕುವುದಕ್ಕಾಗಿ ಸಾಯುವುದು" ಇದು ನನ್ನ ಅಚ್ಚುಮೆಚ್ಚಿನ ಉಕ್ತಿ. ಇವು ಹೇಗೆಲ್ಲನ ಶಬ್ದಗಳು. "ಬದುಕುವುದಕ್ಕಾಗಿ ಸಾಯಿ". ಜಗತ್ತಿಗೆ ತಿಳಿದಿರುವ ಅತ್ಯುನ್ನತ ಉಪಭೋಕ್ತೃ ಕೃಷ್ಣ. ನಮ್ಮನ್ನು ನಾವು ಅವನಿಗೆ ಸಮರ್ಪಿಸಲು ಹಿಂಜರಿಯಬಾರದು.

## ಶ್ಲೋಕ ೫

**ಅಯಿ ನಂದ ತನುಜ! ಕಿಂಕರಂ**
**ಪತಿತಂ ಮಾಂ ವಿಷಮೇ ಭವಾಂಬುಧೌ ।**
**ಕೃಪಯಾ ತವಪಾದಪಂಕಜ–**
**ಸ್ಥಿತಧೂಲೀಸದೃಶಂ ವಿಚಿಂತಯ ॥**

## ಅನುವಾದ

**ಓ ನಂದಮಹಾರಾಜನ ಪುತ್ರನೇ ! ನಾನು ನಿನ್ನ ನಿತ್ಯ ಸೇವಕ, ನನ್ನ ಸ್ವಯಂಕೃತ ಕರ್ಮಫಲಗಳಿಂದಾಗಿ ನಾನು ಜನ್ಮ ಮತ್ತು ಮೃತ್ಯುಗಳ ಭಯಾನಕ ಸಾಗರದಲ್ಲಿ ಬಿದ್ದಿರುತ್ತೇನೆ. ಈ ಪತಿತಾತ್ಮನನ್ನು ಸ್ವೀಕರಿಸಿ, ನಿನ್ನ ದಿವ್ಯ ಪಾದಕಮಲಗಳಲ್ಲಿ ಒಂದು ಧೂಳಿನ ಕಣವಾಗಿ ನನ್ನನ್ನು ಪರಿಗಣಿಸು.**

## ಭಾವಾರ್ಥ

ಇಲ್ಲಿ ಚೈತನ್ಯ ಮಹಾಪ್ರಭುಗಳು ಹೀಗೆ ಪ್ರಾರ್ಥಿಸುತ್ತಾರೆ, ಓ ಭಗವಂತಾ, ದಯವಿಟ್ಟು ನನ್ನನ್ನು ಪರಿಗಣಿಸು; ನಿನ್ನ ಕೃಪಾದೃಷ್ಟಿಯ ಧಾಮದೊಳಕ್ಕೆ ನಾನು ಪ್ರವೇಶಿಸಬೇಕೆಂದಿದ್ದೇನೆ. ನನ್ನ ಬಗ್ಗೆ ನಾನು ಯುಕ್ತವಾಗಿ ಹೇಗೆ ಕಾಳಜಿವಹಿಸಬೇಕೆಂದು ನನಗೆ ತಿಳಿಯದಾಗಿದೆ. ಹಾಗಾಗಿ, ನಾನು ನಿನ್ನಿಂದ ಕಾಳಜಿಯನ್ನು ಆಹ್ವಾನಿಸುತ್ತಿದ್ದೇನೆ. ದಯವಿಟ್ಟು ನನ್ನನ್ನು ಸ್ವೀಕರಿಸಿ ನಿನ್ನ ಧಾಮದೊಳಕ್ಕೆ ನನಗೆ ಪ್ರವೇಶವನ್ನು ಅನುಗ್ರಹಿಸು. ನೀನೆ ನನ್ನ ರಕ್ಷಕ, ನಿನ್ನ ರಕ್ಷಣೆಯಡಿಯಲ್ಲಿ ನಾನು ಬದುಕಬೇಕೆಂದಿದ್ದೇನೆ.

ಈ ಭಗವಂತ ಯಾರು? ಭಗವಂತನ ಬಗ್ಗೆ ನಾವು ವಿವಿಧ ಕಲ್ಪನೆಗಳನ್ನು ವಿವಿಧ ಮೂಲಗಳಿಂದ ಕೇಳಿರುತ್ತೇವೆ. ಆದರೆ ಇಲ್ಲಿ ನಾವು ಭಗವಂತನ ಬಗ್ಗೆ ಒಂದು ಸುಂದರವಾದ ವಿಚಾರಕ್ಕೆ ಬಂದಿದ್ದೇವೆ. ಅದೆಂದರೆ, ನಂದಮಹಾರಾಜನ ಪುತ್ರ ಕೃಷ್ಣನ

ಕಲ್ಪನೆ–ಕೃಷ್ಣ ತತ್ತ್ವ. ಇದು ವೃಂದಾವನದಲ್ಲಿ ಮಾತ್ರ ಕಾಣಸಿಗುತ್ತದೆ.

ರಘುಪತಿ ಉಪಾಧ್ಯಾಯರೆಂಬ ಶ್ರೇಷ್ಠ ವಿದ್ವಾಂಸರೊಬ್ಬರು ಒಮ್ಮೆ ಶ್ರೀ ಚೈತನ್ಯ ಮಹಾಪ್ರಭುಗಳನ್ನು ಮಥುರೆಯ ಸಮೀಪ ಭೇಟಿ ಮಾಡಿದರು. ಅಲ್ಲಿ ಅವರೊಡನೆ ನಡೆದ ಸಂಭಾಷಣೆಯ ಮಧ್ಯೆ ಮಹಾಪ್ರಭುಗಳು ಅವರನ್ನು ಹೀಗೆ ಕೇಳಿದರು; ನಾವು ಯಾರನ್ನು ನಮ್ಮ ಒಡೆಯನನ್ನಾಗಿ ಸ್ವೀಕರಿಸಬೇಕು? ನಮ್ಮ ಜೀವನದ ಅಂತಿಮ ಗುರಿ ಯಾರು? ಅದಕ್ಕೆ ರಘುಪತಿ ಉಪಾಧ್ಯಾಯರು ಹೀಗೆ ಉತ್ತರಿಸಿದರು:–

ಶ್ರುತಿಮ್ ಅಪರೆ ಸ್ಮೃತಿಮ್ ಇತರೆ
ಭಾರತಮ್ ಅನ್ಯೇ ಭಜಂತು ಭವಭೀತಾಃ ।
ಅಹಂ ಇಹ ನಂದಂ ವಂದೇ
ಯಸ್ಯಾಲಿಂದೇ ಪರಂ ಬ್ರಹ್ಮ ॥

ಈ ಜಗತ್ತಿನೊಳಗೆ ಮರುಹುಟ್ಟಿನ ಬಗ್ಗೆ ಭಯವಿರುವವರು ವೇದಶಾಸ್ತ್ರಗಳ ಉಪದೇಶಗಳನ್ನು ಅನುಸರಿಸಬಹುದು, ಉಳಿದವರು ಮಹಾಭಾರತವೇ ಮುಂತಾದ ಪೌರಾಣಿಕ ಸಿದ್ಧಾಂತಗಳನ್ನು ಅನುಸರಿಸಬಹುದು. ಆದರೆ ನಾನು ಮಾತ್ರ; ಯಾರ ಮನೆಯಂಗಳದಲ್ಲಿ ಪರಾತ್ಪರ ಪರಮ ಪುರುಷನು ಮಗುವಿನ ರೂಪದಲ್ಲಿ ಆಟವಾಡಿಕೊಂಡಿರುವನೋ, ಆ ನಂದಮಹಾರಾಜನನ್ನು ಅನುಸರಿಸುತ್ತೇನೆ.

ವರ್ಣಾಶ್ರಮಧರ್ಮದ ನಿಯಮಗಳ ಪ್ರಕಾರ ಸಾಮಾನ್ಯವಾಗಿ ಜನರು ಸ್ಮೃತಿ ಅಥವಾ ವೇದಶಾಸ್ತ್ರಗಳನ್ನು ಆಧರಿಸಿದ ಆದೇಶಗಳನ್ನು ಅನುಸರಿಸುತ್ತಾರೆ. ಈ ಮೂಲಕ ಅವರು ದೈವಿಕ ಛಾಯೆಯನ್ನು ಹೊಂದಿರುವ ದೈಹಿಕ ಕ್ರಿಯೆಗಳಲ್ಲಿ ನಿಯುಕ್ತರಾಗಿರುತ್ತಾರೆ. ಲೌಕಿಕತೆಯ ಬೇಡಿಕೆಗಳಿಂದ ಹೊರತಾಗಿರುವವರು, ಅಂದರೆ, ಪ್ರಾಪಂಚಿಕ ಭೋಗಲಾಲಸೆ ಮತ್ತು ಶೋಷಣೆಗಳಿಂದ ಮುಕ್ತರಾಗಬೇಕೆಂದಿರುವವರು ಸಾಮಾನ್ಯವಾಗಿ ಉಪನಿಷತ್ತುಗಳ ಆದೇಶಗಳನ್ನು ಪಾಲಿಸುತ್ತಾರೆ. ಏಕೆಂದರೆ, ಉಪನಿಷತ್ತುಗಳು ಉನ್ನತ ವಿಚಾರಗಳನ್ನು ಹೊಂದಿದ ಆದೇಶಗಳನ್ನು ಕೊಡುತ್ತವೆ. ರಘುಪತಿ ಉಪಾಧ್ಯಾಯರು ಹೇಳುತ್ತಾರೆ. ನಾನು ಈ ವಿಷಯಗಳಬಗ್ಗೆ ಕಾಳಜಿಯಿಡುವುದಿಲ್ಲ. ಆದರೆ ನನ್ನ ಹೃದಯಾಂತರಾಳದ ಆದೇಶಗಳನ್ನು ನಾನು ಅನುಸರಿಸಲೇಬೇಕು. ನಾನು ನನ್ನ

ಮೆದುಳನ್ನು ಹೆಚ್ಚಿಗೆ ಪರಿಗಣಿಸುವುದಿಲ್ಲ; ವಾಸ್ತವಿಕ ಶಾಂತಿಯು ತನ್ನ ಸಂಪರ್ಕವನ್ನು ಹೆಚ್ಚಾಗಿ ಹೃದಯದೊಂದಿಗೆ ಇಟ್ಟುಕೊಂಡಿರುತ್ತದೆ ಎಂದು ನಾನು ಪರಿಗಣಿಸುತ್ತೇನೆ ಮತ್ತು ನನ್ನ ಹೃದಯವು ಯಾವಾಗಲೂ ಕೃಷ್ಣನ ತಂದೆ ನಂದಮಹಾರಾಜನಲ್ಲಿ ಆಕರ್ಷಿತವಾಗಿರುತ್ತದೆ. ವೈದಿಕ ಗ್ರಂಥಗಳು ಅಧಿಕೃತವಾಗಿ ಕೃಷ್ಣನನ್ನು ಪರಾತ್ಪರ ಸತ್ಯ, ಪರಮಪುರುಷ ಎಂದು ಪರಿಗಣಿಸಿವೆ. ಮತ್ತು ಆ ಪರಾತ್ಪರ ಸತ್ಯ, ನಂದಮಹಾರಾಜನ ಮನೆಯಂಗಳದಲ್ಲಿ ಅಂಬೆಗಾಲಿಟ್ಟುಕೊಂಡು ಆಟವಾಡುತ್ತಿದ್ದಾನೆ. ಹಾಗಾಗಿ ನಾನು ವಾಸ್ತವಿಕ, ಪ್ರತ್ಯಕ್ಷ ಸತ್ಯವನ್ನು ಅಲ್ಲಿ ನೋಡುತ್ತಿದ್ದೇನೆ. ನಂದ ಮಹಾರಾಜ ಪರಾತ್ಪರ ಸತ್ಯವನ್ನು ಹೇಗೆ ಆಕರ್ಷಿಸಿದ? ಈ ಪ್ರಶ್ನೆಯನ್ನು ಶ್ರೀಮದ್ಭಾಗವತದ ಹತ್ತನೇ ಸ್ಕಂಧದಲ್ಲಿ, ಎಂಟನೇ ಅಧ್ಯಾಯದ ನಲವತ್ತಾರನೇ ಶ್ಲೋಕದಲ್ಲಿ ಭಕ್ತನಾದ ಪರೀಕ್ಷಿತ ಮಹಾರಾಜ  ಬಾಲಸಾಧು ಶುಕದೇವ ಗೋಸ್ವಾಮಿಯವರನ್ನು ಕೇಳುತ್ತಾನೆ:–

ನಂದಃ ಕಿಂ ಅಕರೋದ್ ಬ್ರಹ್ಮನ್
ಶ್ರೇಯ ಏವಂ ಮಹೋದಯಮ್ ।
ಯಶೋದಾ ಚ ಮಹಾಭಾಗಾ
ಪಪೌ ಯಸ್ಯಾಃ ಸ್ತನಂ ಹರಿಃ ॥

ಓ ಬ್ರಹ್ಮಜ್ಞಾನಿಗಳೇ! ನೀವು ಯಾವಾಗಲೂ ಪ್ರತ್ಯೇಕವಾದ ಪ್ರಜ್ಞಾ ಪ್ರಪಂಚದಲ್ಲಿ ಮುಳುಗಿರುವವರು. ಲೌಕಿಕ ಧ್ಯೇಯಗಳಬಗ್ಗೆ ಮಾನ್ಯತೆಯ ಯಾವುದೇ ಕುರುಹೂ ನಿಮ್ಮಲ್ಲಿ ಕಂಡುಬರುವುದಿಲ್ಲ, ಏಕೆಂದರೆ, ನೀವು ಯವಾಗಲೂ ಪಾರಮಾರ್ಥಿಕ ವಿಷಯಗಳ ಪ್ರಪಂಚದಲ್ಲಿ ಮಗ್ನರಾಗಿರುತ್ತೀರಿ. ಲೌಕಿಕ ಧ್ಯೇಯಗಳ ನಮ್ಮ ಪ್ರಪಂಚದೆಡೆಗೆ ನಿಮ್ಮ ಪ್ರಜ್ಞೆಯು ಎಂದಿಗೂ ಸಂಚರಿಸಲಾರದು. ಮತ್ತು, ಕೃಷ್ಣನೇ ಪರಾತ್ಪರ ಸತ್ಯ ಎಂದು ನೀವು ಹೇಳುತ್ತಿರುವಿರಿ. ನನ್ನ ಪ್ರಭುವೇ ! ನಾನೊಂದು ಪ್ರಶ್ನೆಯನ್ನು ಕೇಳುತ್ತೇನೆ; ಪರಾತ್ಪರ ಪರಮಸತ್ಯ–ಕೃಷ್ಣನು, ಅತ್ಯಂತ ಸಲಿಗೆಯಿಂದ ನಂದಮಹಾರಾಜನ ಮನೆಯಂಗಳದಲ್ಲಿ ಚಿಕ್ಕ ಮಗುವಾಗಿ ಅಂಬೆಗಾಲಿಟ್ಟುಕೊಂಡು ಆಟವಾಡಿಕೊಂಡಿರಬೇಕಾದರೆ, ನಂದಮಹಾರಾಜನು ಯಾವ ವೈದಿಕ ಆದೇಶಗಳನ್ನು ಪಾಲಿಸಿರುವನು, ಯಾವ ರೀತಿಯ ಸಾಕ್ಷಾತ್ಕಾರವನ್ನು ಅವನು ಹೊಂದಿರುವನು? ಇಲ್ಲಿ ಕೃಷ್ಣನು ನಂದಮಹಾರಾಜನ ಆಧೀನದಲ್ಲಿರುವಂತೆ ತೋರುತ್ತದೆ. ಇದು ಅತ್ಯಂತ ಅದ್ಭುತವಾದ ಸಂಗತಿ, ಇದು ಹೇಗೆಸಾಧ್ಯ?

## ಪರಾತ್ಪರನು ಯಶೋದೆಯ ಸ್ತನಪಾನವನ್ನು ಮಾಡುತ್ತಾನೆ

ಯೋಗಿಗಳು, ಋಷಿಗಳು, ಶ್ರೇಷ್ಠ ವಿದ್ವಾಂಸರು ಮತ್ತು ತಪಸ್ವಿಗಳು ಕೆಲವೊಂದುಸಾರಿ ತಾವು ತಮ್ಮ ಸಾಕ್ಷಾತ್ಕಾರದ ಗುರಿಯ ಅಪೂರ್ವ ಪರಾಕಾಷ್ಠೆಯನ್ನು ಹೊಂದಿರುವುದಾಗಿ ಹೇಳುತ್ತಾರೆ ಮತ್ತು ಅಲ್ಲಿಂದ ಅವರು ಇದ್ದಕ್ಕಿದ್ದಹಾಗೆಯೇ ಹಿಂದಿರುಗುತ್ತಾರೆ. ಆ ಒಂದು ಉನ್ನತವಾದ ನೆಲೆಯಲ್ಲಿ ಅವರು ತಮ್ಮ ಗಮನವನ್ನು ಹೆಚ್ಚುಕಾಲ ಕೇಂದ್ರೀಕರಿಸಲು ಸಾಧ್ಯವಾಗುವುದಿಲ್ಲ. ಆ ಪರಮೋನ್ನತ ಸತ್ಯವು, ಯಶೋದೆಯ ಮಡಿಲಲ್ಲಿ ಮಗುವಾಗಿ ಕುಳಿತುಕೊಂಡು ಅವಳ ಸ್ತನಗಳನ್ನು ಹೀರುವುದು ಹೇಗೆ ಸಾಧ್ಯ? ಇದೆಲ್ಲವೂ ಸಾಧ್ಯವಾಗುವುದಾದರೆ, ಈ ವಿಷಯಗಳೆಲ್ಲಾ ಸತ್ಯವಾದುವಾದರೆ, ಅತುನ್ನತ ಅಸ್ತಿತ್ವದೊಡನೆ ಅಂತಹ ಒಂದು ನಿಕಟವಾದ, ಆತ್ಮೀಯ ಸಂಬಂಧವನ್ನು ನಾನೂ ಹೊಂದಬಹುದಾದ ಆ ವಿಧಾನಕ್ಕೆ ನಾನೇಕೆ ಆಕರ್ಷಿತನಾಗಬಾರದು?

ನಮ್ಮ ಶಕ್ತಿಯ ಪ್ರಯೋಗ(ಕರ್ಮ)ದಿಂದ ನಾವು ಒಂದು ಒಳ್ಳೆಯ ನೆಲೆಯನ್ನು ಹೊಂದಬಹುದು; ಕರ್ಮಗಳ ಫಲಗಳಲ್ಲಿ ವಿಶ್ವಾಸವಿಡದೇ, ನಮ್ಮ ಪ್ರಜ್ಞೆಯನ್ನು ಉನ್ನತ ಮಟ್ಟಕ್ಕೆ ಏರಿಸುವ(ಜ್ಞಾನ) ಮೂಲಕ ನಾವು ಮೋಕ್ಷಕ್ಕೆ ಪ್ರಯತ್ನಿಸಬಹುದು. ಆದರೆ, ನಾವು ನಂದ ಮಹಾರಾಜ ಮತ್ತು ಅವನ ಪಂಗಡದ ಸದಸ್ಯರಂತಹ ಉನ್ನತ ಆಧ್ಯಾತ್ಮಿಕ ನೆಲೆಗೆ ಸಂಬಂಧಿಸಿದ ಪರಿಣತರ ಸಹಾಯದಿಂದ ಜೀವನದ ಪರಿಹಾರದ ಬಗ್ಗೆ ವಿಚಾರಿಸಿದರೆ, ಪ್ರೇಮ ಮತ್ತು ಸಮರ್ಪಣೆಯ ಧಾಮವನ್ನು ಪ್ರವೇಶಿಸಬಹುದು.

ನನ್ನ ಹೃದಯವು ನೇರವಾಗಿ ಆಗ್ರಹಿಸುವ, ಅತ್ಯಂತ ನಿಕಟವರ್ತಿ, ಸ್ಪಷ್ಟ, ಪ್ರತ್ಯಕ್ಷ, ವಾಸ್ತವಿಕ ಹಾಗೂ ಅತ್ಯಂತ ಅಪೂರ್ವವಾದ ಪರಾತ್ಪರ ಸತ್ಯನಾದ ಶ್ರೀಕೃಷ್ಣನನ್ನು ನಾನು ನೋಡಬಹುದಾದರೆ, ನಿರರ್ಥಕ ವಿಧಾನಗಳನ್ನು ಅನುಸರಿಸಿ ನಾನೇಕೆ ಕಾಲಹರಣ ಮಾಡಬೇಕು ಎಂದು ನನ್ನ ಶ್ರದ್ಧೆ ಮತ್ತು ಸಾಮಾನ್ಯ ಜ್ಞಾನ ಧಾರ್ಮಿಕತೆಯಬಗ್ಗೆ ನನಗೆ ಹೇಳುತ್ತದೆ. ನಾನು ಅನ್ವೇಷಿಸುತ್ತಿರುವ ಧ್ಯೇಯವನ್ನು ನಾನು ನೇರವಾಗಿ ಪ್ರಾರ್ಥಿಸುತ್ತೇನೆ. ನನ್ನ ಕಿವಿಯೊಂದನ್ನು ಹದ್ದು ಕಚ್ಚಿಕೊಂಡು ಹಾರಿಹೋಯಿತು ಎಂದು ಯಾರಾದರೂ ಹೇಳಿದರೆ, ನಾನು ನನ್ನ ಕಿವಿಯಿದೆಯೇ ಇಲ್ಲವೇ ಎಂದು ನನ್ನ ಕಿವಿಯಿರುವ ಜಾಗವನ್ನು ಮುಟ್ಟಿನೋಡಿ ರುಜುವಾತುಪಡಿಸಿಕೊಳ್ಳುವುದಕ್ಕೆ ಮುಂಚೆಯೇ ಹದ್ದನ್ನು ಅಟ್ಟಿಸಿಕೊಂಡುಹೋಗಬೇಕೆ? ನಾನು ಪರಾತ್ಪರ ಸತ್ಯವನ್ನು ಅಷ್ಟು ನಿಕಟವಾಗಿ ಹೊಂದಬಹುದಾದರೆ, ನಾನು ನನ್ನನ್ನು ಅಲ್ಲಿ ಇಲ್ಲಿ ಅಡ್ಡಾಡಲು ಏಕೆ ಬಿಡಬೇಕು?

ಪರಾತ್ಪರ ಸತ್ಯವು ತನ್ನೆಲ್ಲಾ ಮೋಹಕತೆಯೊಡನೆ ದಯಮಾಡಿಸುತ್ತದೆ, ಮತ್ತು ಅವನ ಮೋಹಕತೆಯು ರಹಸ್ಯವಾದದ್ದಲ್ಲ, ಅದು ಅತ್ಯಂತ ಗಣ್ಯ ಹಾಗೂ ಶ್ರೇಷ್ಠ ವ್ಯಕ್ತಿಗಳಿಂದ ಆಕರ್ಷಿಸಲ್ಪಟ್ಟಿರುವಂಥಾದ್ದು ಎಂದು ನನಗೆ ಕಂಡುಬಂದಲ್ಲಿ; ತಪಸ್ವಿಗಳ, ವಿತಂಡವಾದಿಗಳ, ತ್ಯಾಗಿಗಳ ಭ್ರಾಮಕ ಕಲ್ಪನೆಗಳಹಿಂದೆ ನಾನು ಓಡಬೇಕೆ?ಎಂದಿಗೂ ಇಲ್ಲ!

ಇದು ಸಾಮಾನ್ಯ ಪ್ರಜ್ಞೆ. ನಂದಮಹಾರಾಜನ ಪುತ್ರ ಕೃಷ್ಣನೇ ಪರಾತ್ಪರ ಪರಮಪುರುಷ ಎಂಬ ಸತ್ಯ ಅಧಿಕೃತ ಮೂಲಗಳಿಂದ ನೇರವಾಗಿ ಪ್ರಮಾಣಿತವಾಗಿದೆ. ಆ ಒಂದು ತಿಳುವಳಿಕೆಯ ದರ್ಜೆಗೆ ನಾವು ಬಂದಾಗ, ನಾವು ಕೇಳಬಹುದು! ಓ ಕೃಷ್ಣಾ! ಪ್ರೇಮಪ್ರಪಂಚದ ದೊರೆಯೇ! ನಿನ್ನ ಒಲುಮೆಗಾಗಿ ನಾನು ಪ್ರಾರ್ಥಿಸುತ್ತೇನೆ, ನಾನು ನಿನ್ನ ಸೇವಕ, ನಿನ್ನೊಂದಿಗೆ ನನಗೆ ಏನೋ ಸಂಪರ್ಕವಿರುವಂತೆ ನಾನು ನನ್ನೊಳಗೆ ಭಾವಿಸುತ್ತಿದ್ದೇನೆ. ನಾನು ನಿನಗೆ ಅಧೀನ, ಆದರೂ ಹೇಗೋ ನಾನು ವ್ಯತಿರಿಕ್ತ ಸನ್ನಿವೇಷಗಳಲ್ಲಿದ್ದೇನೆ. ನಿನ್ನಲ್ಲಿ ನಾನು ಸಂಪೂರ್ಣ ಗಮನವನ್ನು ಕೇಂದ್ರೀಕರಿಸದಂತೆ ನನ್ನನ್ನು ನಿನ್ನಿಂದ ಬೇರೆಡೆಗೆ ಸೆಳೆಯುವ ಎಷ್ಟೊ ವೈರಿಗಳು ನನ್ನೊಳಗಿದ್ದಾರೆ. ಅದೇವೇಳೆ, ನೀನೇ ನನ್ನ ಒಡೆಯ, ನನ್ನ ಸಕಲವೂ ನೀನೇ ಎಂದು ನನ್ನ ಹೃದಯಾಂತರಾಳದಿಂದ ಭಾವಿಸುತ್ತಿದ್ದೇನೆ. ನಿನ್ನ ಸಾಂಗತ್ಯವಿಲ್ಲದೇ ನನ್ನ ಹೃದಯ ಸಂತೃಪ್ತಿಗೊಳ್ಳಲಾರದು. ಆದ್ದರಿಂದ ನಾನು ನಿನ್ನಲ್ಲಿ ಪ್ರಾರ್ಥಿಸುತ್ತಿದ್ದೇನೆ. ನಾನು ಪ್ರತಿಕೂಲ ಸನ್ನಿವೇಶಗಳಲ್ಲಿದ್ದೇನೆ, ನಾನು ನರಳುತ್ತಿದ್ದೇನೆ ಮತ್ತು ನಿನ್ನ ಕೃಪೆಯಿಲ್ಲದೇ ನನ್ನ ಪ್ರಸಕ್ತ ಬಂದಿತನದ ಪರಿಸ್ಥಿತಿಯಿಂದ ಬಿಡುಗಡೆಹೊಂದಲು ನನಗೆ ಬೇರೆ ಯಾವ ದಾರಿಯೂ ಕಾಣುತ್ತಿಲ್ಲ.

“ನಿನ್ನೊಡನೆ ನಿರಂತರವಾದ ಸಂಪರ್ಕವನ್ನು ನಾನು ಹೊಂದಿಲ್ಲ ಎಂಬ ಭಾವವನ್ನು ನಾನು ಹೊಂದಿದ್ದೇನೆ; ಒಂದುವೇಳೆ ಹಾಗಿದ್ದರೆ, ಈ ವಿರಹ ಅಸಾಧ್ಯವಾಗಿರುತ್ತಿತ್ತು. ಒಂದು ಅವತಾರದಹಾಗೆ ನಾನು ನಿನ್ನ ಸಂಪೂರ್ಣ ಭಾಗವಲ್ಲ” ಎಂದು ಇಲ್ಲಿ ಹೇಳಿದೆ. ಇತರ ಅವತಾರಗಳು ಭಗವಂತನ ಸ್ವಾಂಶಾವತಾರಗಳು, ಆದರೆ, ಜೀವಾತ್ಮರು ಅವನ ಶಕ್ತಿಯ ಆಂಶಿಕ ಪ್ರತಿನಿಧಿಗಳು–ವಿಭಿನ್ನಾಂಶಗಳು.

ಜೀವಾತ್ಮರು ತನ್ನಿಂದ ಬೇರ್ಪಟ್ಟ ತನ್ನ ಶಾಶ್ವತ ಅಂಶಗಳು ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳುತ್ತಾನೆ. ಆತ್ಮಗಳು ಅವನ ತಟಸ್ಥ ಶಕ್ತಿಯಿಂದ

ಬಂದವಾಗಿರುತ್ತವೆ.(ಕೃಷ್ಣೇರ ತಟಸ್ಥಶಕ್ತಿ; ಭೇದಾಭೇದ ಪ್ರಕಾಶ), ಮತ್ತು ಆತ್ಮವು ಭಗವಂತನ ಶಕ್ತಿಯ ಅಣುಗಾತ್ರದ ಒಂದು ತುಣುಕಾಗಿರುತ್ತದೆ. ಇದನ್ನು ಸೂರ್ಯ ಮತ್ತು ಅವನ ಕಿರಣಕ್ಕೆ ಹೋಲಿಸಬಹುದು. ಆದರೆ ಇಲ್ಲಿ ಒಬ್ಬ ಭಕ್ತ ಪ್ರಾರ್ಥಿಸುತ್ತಿದ್ದಾನೆ, ನಾನು ನಿನ್ನ ದೇಹದ ಬೇರ್ಪಟ್ಟ ಅಂಶವಲ್ಲ, ನಾನು ಒಂದು ಕಿರಣವೂ ಅಲ್ಲ, ಆದರೆ ನನ್ನ ಪ್ರತಿನಿಧಿತ್ವ ಒಂದು ಧೂಳಿನ ಕಣಕ್ಕೆ ಸಮನಾಗಿದೆ, ಕೇವಲ ಧೂಳಿನ ಒಂದು ಕಣಕ್ಕೆ, ನಿನ್ನ ದೇಹದ ಶೋಭೆಯಿಂದ ಹೊರಟ ಒಂದು ಕಿರಣದ ಭಾಗಕ್ಕೂ ಅಲ್ಲ.

ಈ ಮೂಲಕ, ವಿನಂತಿಯು ಹೀಗೆಯೇ ಇರಬೇಕು ಎಂದು ಶ್ರೀಮಾನ್ ಮಹಾಪ್ರಭುಗಳು ನಮ್ಮನ್ನು ಪ್ರತಿನಿಧಿಸುತ್ತಿದ್ದಾರೆ. ನಾನು ನಿನ್ನಿಂದ ಬೇರ್ಪಡಿಸಲಾಗದಂತಹ ಒಂದು ಭಾಗ ಎಂದು ಪರಿಗಣಿಸಲ್ಪಡುವಂತಹ ಭಾಗ್ಯವನ್ನು ನಾನು ಹೊಂದಿದ್ದೇನೆ ಎಂದು ಭಾವಿಸಿ ನನ್ನನ್ನು ನಾನು ತೃಪ್ತಿಪಡಿಸಿಕೊಳ್ಳಲಾರೆ. ನಾನು ಬೇರ್ಪಡಲ್ಪಡುವ ಭಾಗ, ಆದರೆ ನನಗೆ ನಿನ್ನ ಕೃಪೆ ಬೇಕು. ದಯಮಾಡಿ ನನ್ನಮೇಲೆ ಕರುಣೆತೋರು; ವಿಶೇಷ ಸಮ್ಮತಿಗಾಗಿ ನಿನ್ನ ಕೃಪೆಯನ್ನು ನಾನು ಆಹ್ವಾನಿಸುತ್ತಿದ್ದೇನೆ. ನಿನ್ನ ಪಾದಕಮಲಗಳಲ್ಲಿನ ಒಂದು ಧೂಳಿನ ಕಣವಾಗಿ ನನ್ನನ್ನು ಪರಿಗಣಿಸು. ಇದೇ ನನ್ನ ಪ್ರಾರ್ಥನೆ.

## ಶ್ಲೋಕ ೬

**ನಯನಂ ಗಲದಶ್ರುಧಾರಯಾ**
**ವದನಂ ಗದ್ಗದರುದ್ಧಯಾ ಗಿರಾ ।**
**ಪುಲಕೈರ್ನಿಚಿತಂ ವಪುಃ ಕದಾ**
**ತವ ನಾಮಗ್ರಹಣೇ ಭವಿಷ್ಯತಿ ॥**

## ಅನುವಾದ

**ಓ ಭಗವಂತಾ! ಎಂದು ನಿನ್ನ ದಿವ್ಯನಾಮಗಳನ್ನು ಜಪಿಸುವಾಗ ನನ್ನ ಕಣ್ಣುಗಳಿಂದ ಅಲೆಅಲೆಯಾಗಿ ಅಶ್ರುಧಾರೆ ಹರಿದೀತು? ಭಾವುಕತೆಯಿಂದ ನನ್ನ ಧ್ವನಿಯು ಕಂಪಿಸೀತು? ಮತ್ತು, ಎಂದು ನನ್ನ ದೇಹ ಪುಲಕಿತಗೊಂಡೀತು?**

## ಭಾವಾರ್ಥ

ಈ ಶ್ಲೋಕದಲ್ಲಿ, ಭಕ್ತನ ಹಿಂದಿನ ಪ್ರಾರ್ಥನೆಗಳು ಸಮ್ಮತಿಸಲ್ಪಟ್ಟಿವೆ ಮತ್ತು ಅವನು ಕೃಷ್ಣನ ಪ್ರಾಂತ್ಯದೊಳಗೆ ಒಂದು ಸ್ಥಾನವನ್ನು ಗಳಿಸಿಕೊಂಡಿರುತ್ತಾನೆ. ಈಗ ಅವನ ಆಕಾಂಕ್ಷೆಗಳಿಗೆ ಕೊನೆಯೇ ಇಲ್ಲ. ಒಂದು ಸುರಕ್ಷಿತವಾದ ಸ್ಥಾನಕ್ಕೆ ಭರ್ತಿಯಾಗಿದ್ದರೂ, ಇನ್ನೂ ಮೇಲಿನ ದರ್ಜೆಗೆ ಭಡ್ತಿಹೊಂದಲು ಪ್ರಾರ್ಥಿಸುತ್ತಿದ್ದಾನೆ. ಮೊದಲಿಗೆ ಕೃಷ್ಣನ ದಿವ್ಯ ಪಾದಕಮಲದಡಿಯಲ್ಲಿ ಒಂದು ಧೂಳಿನ ಕಣವಾಗಿರುವಂತೆ ಪ್ರಾರ್ಥಿಸಿದ. ಅವನ ಆಸೆಯು ನೆರವೇರಿತು. ಧೂಳಿನ ಕಣಕ್ಕೆ ಕೃಷ್ಣನ ಪಾದಕಮಲದ ಸಂಪರ್ಕ ದೊರಕಿತು ಮತ್ತು ಆ ಧೂಳಿನಕಣ ಪವಾಡಸದೃಶವಾಗಿಯೋ ಎಂಬಂತೆ ಪರಿವರ್ತನೆಯನ್ನು ಕಂಡಿತು. ಈಗ ಹೆಚ್ಚಿನ, ಇನ್ನೂ ಉನ್ನತ ಬೇಡಿಕೆಗಳು ತಾವೇ ತಾವಾಗಿ ಬರುತ್ತಿದ್ದಾವೆ.

ಏನಿದು? ನಾನು ನಿನ್ನ ಪಾದಕಮಲದಡಿಯಲ್ಲಿ ಧೂಳಿನ ಕಣವಾಗಿರುವಂತೆ ಪ್ರಾರ್ಥಿಸಿದೆ, ಆದರೆ ಈಗ ನಾನು ಏನು ಅನುಭವಿಸುತ್ತಿದ್ದೇನೆ? ನಾನು ಈ ನೆಲದ ಧೂಳು, ಮತ್ತು ನೀನು ಪರಾತ್ಪರ ಸತ್ಯ, ಪರಮೋನ್ನತ ಆಸ್ತಿತ್ವ. ಆದರೆ ಈ ಧೂಳಿನ ಕಣವು ಕೇವಲ

ನಿನ್ನ ಪಾದಕಮಲದ ಸ್ಪರ್ಶದಿಂದ ಊಹಿಸಲಾಗದಂತಹ ಒಂದು ಉನ್ನತ ದ್ರವ್ಯವಾಗಿ ಮಾರ್ಪಟ್ಟಿದೆ ಎಂದು ಒಬ್ಬ ಭಕ್ತ ಯೋಚಿಸುತ್ತಾನೆ. ನನ್ನಲ್ಲಿ ಈ ಪರಿವರ್ತನೆ ಹೇಗೆ ಉಂಟಾಯಿತು? ನನ್ನ ಬೇಡಿಕೆಯು ಇನ್ನೂ ಹೆಚ್ಚಿನ ಸಾನ್ನಿಧ್ಯಕ್ಕೆ ಎಂದು ನನಗೆ ಈಗ ಮನವರಿಕೆಯಾಗುತ್ತಿದೆ. ಮೊದಲಿಗೆ ನಾನು ನಿನ್ನ ಸೇವಕನಾಗುವುದನ್ನು ಬಯಸಿದೆ, ಆದರೆ ನಿನ್ನ ಪಾದಕಮಲಗಳೆಂಬ ಚಿಂತಾಮಣಿಯು ನನ್ನ ಆಶಯವನ್ನು ಸ್ವಯಂಪ್ರೇರಿತ ಆಕರ್ಷಣೆಯನ್ನಾಗಿ(ರಾಗಮಾರ್ಗಕ್ಕೆ)ಪರಿವರ್ತಿಸಿದೆ. ಇದು ಬಹಳ ಅಚ್ಚರಿಪಡುವಂಥ ವಿಷಯ.

ಸ್ವಯಂಪ್ರೇರಿತ ಆಕರ್ಷಣೆ ಎಂದರೆ ಕೃಷ್ಣ ಎಂದೇ ಅರ್ಥ ಹೊರತು ನಾರಾಯಣ ಅಥವಾ ಶ್ರೀರಾಮಚಂದ್ರ ಎಂದಾಗುವುದಿಲ್ಲ. ಕೃಷ್ಣ ಎಂದರೆ ದಿವ್ಯ ಪ್ರೇಮ ಮತ್ತು ಮಮತೆಗಳಿಂದ ಪೂಜಿಸಲ್ಪಡುವವನು ಎಂದು ಅರ್ಥ. ಅವನು ಮಮತೆಯ ಒಡೆಯ ಮತ್ತು ಪ್ರೇಮದ ಕೇಂದ್ರ. ಕೃಷ್ಣನ ಪಾದಕಮಲಗಳ ಸ್ಪರ್ಷಮಾತ್ರದಿಂದ, ಭಕ್ತನಿಗೆ ಭಕ್ತಿಯಬಗ್ಗೆ ಇದ್ದ ಕಲ್ಪನೆಯು ಸಂಪೂರ್ಣ ಬದಲಾಯಿತು ಮತ್ತು ಅವನು ಇನ್ನೂ ಹೆಚ್ಚಿನ ಸಾಮಿಪ್ಯತೆಗೆ ಹಂಬಲಿಸುವಂತೆ ಹಾರೈಸಲ್ಪಟ್ಟ. ಉನ್ನತ ಮಟ್ಟದ ಪ್ರೇಮ ಮತ್ತು ಮಮತೆಯು ಆ ಸೇವಕನನ್ನು ಹಾರೈಸಲು ಮುಂದೆಬಂದಿತು.
ಅವನ ಪ್ರಾರ್ಥನೆಯೇ ಬದಲಾಗುವಂತೆ ಮಾಡಿದ, ಸಮರ್ಪಣಾ ಮನೋಭಾವದ ನೆಲೆಗೆ ಅವನು ಮೇಲೇರಿದ. ಈಗ ಅವನು ಇದೇನು? ನನ್ನ ಅಶ್ರುಗಳನ್ನು ನಾನು ಗಮನಿಸಲಾಗುತ್ತಿಲ್ಲ. ಓ ದೇವಾ! ನಾನು ನಿನ್ನ ದಿವ್ಯನಾಮವನ್ನು ಜಪಿಸಬೇಕೆಂದುಕೊಂಡಾಗ ನನ್ನ ಕಣ್ಣುಗಳಿಂದ ಸತತವಾಗಿ ಅಶ್ರುಧಾರೆ ಹರಿಯುತ್ತದೆ, ಮತ್ತು ನಾನು ನಿಯಂತ್ರಣವನ್ನೇ ಕಳೆದುಕೊಳ್ಳುತ್ತೇನೆ. ಬೇರೊಂದು ನೆಲೆಯಿಂದ ಹಸ್ತಕ್ಷೇಪ ಉಂಟಾಗುತ್ತಿರುವಂತೆ ನನಗೆ ಅನಿಸುತ್ತದೆ, ನಾನು ಬೇರೊಂದು ಲೋಕವನ್ನು ಪ್ರವೇಶಿಸಿದ ಹಾಗೆ ಭಾಸವಾಗುತ್ತಿದೆ, ನಾನು ಎಲ್ಲಿಯೂ ಇಲ್ಲ, ಜ಼್ನಾನು ಸಂಪೂರ್ಣವಾಗಿ ನಿಯಂತ್ರಣವನ್ನು ಕಳೆದುಕೊಂಡಿದ್ದೇನೆ; ನಾನು ಬೇರೆ ಯಾವುದೋ ಶಕ್ತಿಯ ಕೈಗೊಂಬೆಯಾಗಿದ್ದೇನೆ ಎಂದು ಯೋಚಿಸುತ್ತಾನೆ.

## ಪಾದಕಮಲ – ಯಕ್ಷಿಣಿದಂಡ

ನನ್ನ ಬಯಕೆಯು ನನ್ನನ್ನು ಬೇರೆಯಾವುದೋ ವಿಷಯದೆಡೆಗೆ ಕರೆದೊಯ್ಯುತ್ತಿದೆ. ಈಗ ನಿನ್ನ ಪಾದಕಮಲಗಳೆಂಬ ಯಕ್ಷಿಣಿದಂಡದ ಸ್ಪರ್ಷದಿಂದ ನನ್ನ ಹೆಬ್ಬಯಕೆಯು

ಬದಲಾಗುತ್ತಿದೆ. ಈಗ ನನ್ನ ಬಯಕೆಯು ಕೇವಲ ಸೇವಕನಾಗಿ ದೂರದಿಂದ ನಿನ್ನ ಸಂಪರ್ಕವನ್ನು ಬಯಸುವುದಷ್ಟಕ್ಕೇ ಸೀಮಿತವಾಗಿಲ್ಲ. ಎಷ್ಟೋ ಭಕ್ತರು ನಿತ್ಯ ನಿನ್ನ ಸೇವೆಯಲ್ಲಿ ಮತ್ತು ನಿನ್ನ ದಿವ್ಯ ನಾಮದ ಜಪದಲ್ಲಿ ತೊಡಗಿರುವುದನ್ನು ನಾನು ನೋಡುತ್ತಿದ್ದೇನೆ, ಇದನ್ನು ನೋಡಿದಮೇಲೆ ನನ್ನ ಆಶಯಗಳು ಇನ್ನೂ ಹೆಚ್ಚುತ್ತಿವೆ ಮತ್ತು ಹೆಚ್ಚಿನ ಭರವಸೆಯನ್ನು ಕಾಣುತ್ತಿದ್ದೇನೆ. ನಾನು ಆ ಸ್ಥಾನಕ್ಕೆ ಮೇಲಕ್ಕೆತ್ತಲ್ಪಡಬೇಕೆಂದಿದ್ದೇನೆ. ದೂರದಿಂದ ಆ ಸ್ಥಾನವನ್ನು ನಾನು ಊಹಿಸಬಲ್ಲೆ. ಆದರೆ ಈಗ ಆ ಹಂತಕ್ಕೆ ನಾನು ಮೇಲೇರಬಹುದು ಎಂಬುದೇ ನನ್ನ ನಮ್ರ ಪ್ರಾರ್ಥನೆ. ನಿನ್ನ ಸಂಪರ್ಕವು ನನ್ನಲ್ಲಿ ಆ ದಾಹವನ್ನು ಉಂಟುಮಾಡಿದೆ. ನಾನು ನಿನ್ನ ನಿಯಂತ್ರಣ ಕ್ಕೊಳಪಡಬೇಕೆಂದಿದ್ದೇನೆ. ನಿನಗೆ ಬೇಕಾದಹಾಗೆ, ನಿನ್ನದೇ ಆದ ರೀತಿಯಲ್ಲಿ ನನ್ನನ್ನು ಆಡಿಸು. ನಿನ್ನೊಡನೆ ಅಂತಹ ಒಂದು ಸಂಬಧಕ್ಕಾಗಿ ನನ್ನ ಹೃದಯ ಹಾತೊರೆಯುತ್ತಿದೆ. ಈ ಭಾವನೆಯೊಂದಿಗೆ ಯಾವಾಗ ನಾನು ನಿನ್ನ ದಿವ್ಯನಾಮವನ್ನು ಜಪಿಸುತ್ತೇನೋ ಆಗ ನನ್ನ ಹಿಂದಿನ ಕಲ್ಪನೆಯು ಬದಲಾಗುತ್ತದೆ ಮತ್ತು ನನ್ನ ಹೊಸಹಂಬಲ ಸ್ವಯಂಪ್ರೇರಿತ ಪ್ರೇಮದ ದರ್ಜೆಯತ್ತ ಎಂಬುದನ್ನು ನಾನು ಮನಗಾಣುತ್ತೇನೆ. ಹಾಗಾಗಿ ನಿನ್ನ ಪ್ರೀತಿ ಮತ್ತು ಮಮತೆಗಳ ಆ ನೆಲೆಗೆ ನನ್ನನ್ನು ಮೇಲೆತ್ತು ಎಂದು ನಾನು ಪ್ರಾರ್ಥಿಸುತ್ತೇನೆ.

## ಶ್ಲೋಕ ೭

**ಯುಗಾಯಿತಂ ನಿಮೇಷೇಣ**
**ಚಕ್ಷುಷಾ ಪ್ರಾವೃಷಾಯಿತಮ್ ।**
**ಶೂನ್ಯಾಯಿತಂ ಜಗತ್ಸರ್ವಮ್**
**ಗೋವಿಂದವಿರಹೇಣ ಮೇ ॥**

## ಅನುವಾದ

ಓ ಗೋವಿಂದ ! ನೀನಿಲ್ಲದ ಈ ಜಗತ್ತು ಬರಿ ಶೂನ್ಯ, ನಿನ್ನ ವಿರಹದ ನೋವಿನಿಂದ ನನ್ನ ಕಣ್ಣುಗಳು ಕಂಬನಿಯ ಪ್ರವಾಹವನ್ನು ಹರಿಸುತ್ತಿವೆ ಮತ್ತು ಒಂದು ಕ್ಷಣವು ಒಂದು ಯುಗದಂತೆ ಭಾಸವಾಗುತ್ತಿದೆ

## ಭಾವಾರ್ಥ

ಕೆಲವೊಂದು ಕಡೆ ಈ ಶ್ಲೋಕವನ್ನು ಹೀಗೂ ಅನುವಾದಿಸಿದ್ದುಂಟು ಓ ಗೋವಿಂದ! ನೀನಿಲ್ಲದ ಒಂದು ಕ್ಷಣವನ್ನು ನಾನು ಹನ್ನೆರಡು ವರುಷಗಳಂತೆ ಭಾವಿಸುತ್ತಿದ್ದೇನೆ ಇಲ್ಲಿ ಯುಗ ಶಬ್ದವನ್ನು ಕೆಲವುಸಾರಿ ಹನ್ನೆರಡು ವರುಷ ಎಂದು ಅನುವಾದಿಸುತ್ತಾರೆ. ಚೈತನ್ಯಮಹಾಪ್ರಭುಗಳು ಹನ್ನೆರಡು ವರ್ಷ ರಾಧಾರಾಣಿಯವರ ಭಾವದಲ್ಲಿ ಕೃಷ್ಣನ ತೀವ್ರವಿರಹವನ್ನು ಅನುಭವಿಸಿದ ಕಾರಣ ಯುಗ ಶಬ್ದವನ್ನು ಹನ್ನೆರಡು ವರುಷ ಎಂದು ಅನುವಾದಿಸಲಾಗಿದೆ ಎಂದು ಕೆಲವು ಭಕ್ತರು ಅಭಿಪ್ರಾಯಪಡುತ್ತಾರೆ. ಸಂಸ್ಕೃತ ಶಬ್ದಕೋಶದ ಪ್ರಕಾರ ಕೂಡಾ ಒಂದು ಯುಗ ಎಂದರೆ ಹನ್ನೆರಡು ವರುಷ. ಇದು ಒಂದು ವಿಚಾರವಾದರೆ, ಇನ್ನೊಂದು ಕಲ್ಪನೆಯ ಪ್ರಕಾರ ಈ ಜಗತ್ತಿನ ಕಾಲಮಾನದಲ್ಲಿ ಯುಗಚಕ್ರದ ಒಂದು ಭಾಗ ಮತ್ತು ಯುಗ ಎಂದರೆ ಕೊನೆಯಿಲ್ಲದ ಕಾಲಾವಧಿ ಎಂಬ ಅರ್ಥವೂ ಉಂಟು.

ಶ್ರೀ ಚೈತನ್ಯ ಮಹಾಪ್ರಭುಗಳು ಈ ಶ್ಲೋಕದಲ್ಲಿ ಹೀಗೆ ಹೇಳುತ್ತಾರೆ "ಒಂದು ಕ್ಷಣವು ಕೊನೆಯಿಲ್ಲದ ಕಾಲಾವಧಿಯಂತೆ ಅನಿಸುತ್ತದೆ, ಮತ್ತು ನನ್ನ ಕಣ್ಣುಗಳು ಮಳೆಯಂತೆ ಕಂಬನಿಸುರಿಸುತ್ತಿವೆ. ಮಳೆಗಾಲದಲ್ಲಿ ಮಳೆಗಳು ಪ್ರವಾಹವನ್ನು ಸೃಷ್ಟಿಸುವುದು ಸಾಮಾನ್ಯ, ಅದೇರೀತಿ ನನ್ನ ಕಣ್ಣುಗಳು ಕಂಬನಿಯಿಂದ ಪ್ರವಹಿಸುತ್ತಿವೆ ಎಂದು ನನಗನಿಸುತ್ತಿದೆ. ನಾನು ಏನನ್ನೂ ಕಾಣಲಾಗದ ರೀತಿಯಲ್ಲಿ ಈ ಪ್ರಸಕ್ತ ಪರಿಸರದಿಂದ ನನ್ನನ್ನು ಹಿಂತೆಗೆದುಕೊಂಡಿದ್ದೇನೆ. ಅನಂತತೆಯ ಕೇಂದ್ರದ ಆಕರ್ಷಣೆಯಲ್ಲಿ ನಾನು ಎಷ್ಟು ಭಾವುಕನಾಗಿದ್ದೇನೆಂದರೆ, ನಾನು ಎಲ್ಲಿ ದೃಷ್ಟಿಹರಿಸಿದರೂ ನನಗೆ ಏನೂ ತೋರುತ್ತಿಲ್ಲ. ಗೋವಿಂದನು ನನ್ನಿಂದ ಬೇರ್ಪಟ್ಟಿದ್ದಾನೆ ಎಂಬ ಭಾವದಲ್ಲಿ ನನಗೆ ಈ ಪರಿಸರವೆಲ್ಲವೂ ಬರಿದಾಗಿ ಕಾಣುತ್ತಿದೆ. ಇಂತಹ ಒಂದು ವಿಚಿತ್ರ ರೀತಿಯ ಭಾವ ನನ್ನಲ್ಲಿ ಮನೆಮಾಡಿದೆ. ಯಾವುದರಲ್ಲಿಯೂ ನನಗೆ ಆಸಕ್ತಿಯಿಲ್ಲ. ನನ್ನ ಆಸಕ್ತಿಯೆಲ್ಲವೂ ಗೋವಿಂದನೆಡೆಗೆ ಹರಿದಿದೆ. ಈ ಪ್ರಸಕ್ತ ಪರಿಸರದಲ್ಲಿ ನನ್ನನ್ನು ನಾನು ಅಪರಿಚಿತನಂತೆ ಭಾವಿಸುತ್ತಿದ್ದೇನೆ. ನಾನು ಪ್ರಜ್ಞಹಿನನಾಗಿದ್ದೇನೆ. ನನ್ನ ಪ್ರಜ್ಞೆ ಎಲ್ಲಿಯೋ ಅನಂತದೆಡೆಗೆ ಹರಿದಿದೆ. ಬರಬಂದಾಗ ಎಲ್ಲಾ ನದಿಗಳು, ಕೆರೆಗಳು ಬರಿದಾಗುತ್ತವೆ. ವಾತಾವರಣವು ನೀರನ್ನೆಲ್ಲಾ ಹೀರಿಕೊಂಡಿರುತ್ತದೆ. ಎಲ್ಲಿಯೂ ಒಂದು ಹನಿಕೂಡಾ ನೀರು ಕಾಣಸಿಗುವುದಿಲ್ಲ. ಈಗ ನನ್ನ ಸ್ಥಿತಿಯೂ ಹಾಗೆಯೇ ಇದೆ. ಸಕಲವೂ ಬರಿದಾಗುವ ಮಟ್ಟಕ್ಕೆ ಎಲ್ಲ ಆಕರ್ಷಣೆಯೂ ನನ್ನಿಂದ ಗಾಢವಾಗಿ ಸೆಳೆಯಲ್ಪಟ್ಟಿದೆ. ನನ್ನ ಮನಸ್ಸು, ಇಂದ್ರಿಯಗಳು ಮತ್ತು ನನ್ನದಾಗಿರುವುದೆಲ್ಲವೂ ಬರಿದಾಗಿದೆ. ಎಲ್ಲವೂ ಸರ್ವಾಕರ್ಷಕ, ಸರ್ವಮೋಹಕ, ಸರ್ವಮಧುರ, ವಾಸ್ತವಿಕ ಸೌಂದರ್ಯದ ಮೂರ್ತಿಯಾದ ಶ್ರೀಕೃಷ್ಣನಿಂದ ಆಕರ್ಷಿಸಲ್ಪಟ್ಟಿವೆ".

ಮಿಲನ ಮತ್ತು ವಿರಹಗಳ ಮಧ್ಯೆ ಅಗಾಧವಾದ ಯುಗಯುಗಗಳ ಅಂತರವಿರಬಹುದೆಂದು ಕೆಲವುಸಾರಿ ಅನಿಸುತ್ತದೆ. "ಎಷ್ಟೋಹಿಂದೆ, ಬಹಳಕಾಲದಹಿಂದೆ, ನಾನು ಕೃಷ್ಣನಭೇಟಿ ಮಾಡಿದ್ದನ್ನು ಮರತೇ ಹೋಗಿದ್ದೇನೆ" ಎಂದು ಒಬ್ಬ ಭಕ್ತನು ಭಾವಿಸುತ್ತಾನೆ. "ಕೃಷ್ಣನೊಂದಿಗೆ ಎಂದೋ ಸ್ವಲ್ಪಮಟ್ಟಿಗೆ ಸಂಯೋಗವನ್ನು ನಾನು ಹೊಂದಿದ್ದೆ. ಆದರೆ ಅದನ್ನು ಬಿಟ್ಟು ನಾನು ಬಹಳದೂರ ಬಂದಿರುತ್ತೇನೆ. ಎಣಿಸಲಾರದಷ್ಟು ಸಮಯದ ಅಂತರವಿದೆ ಎನ್ನುವಷ್ಟು ದೂರ ಬಂದಿದ್ದೇನೆ. ಹಿಂದೆ ಸ್ವಲ್ಪ ಅಸ್ಪಷ್ಟವಾದ ನೆನಪಿತ್ತು, ಆದರೆ ಈಗ ನೆನಪಿಲ್ಲ. ಬಹುಷಃ ಇನ್ನು ಎಂದಿಗೂ ನೆನಪಾಗಲಾರದು" ಎಂಬಂತಹ ಅತೀವ ನಿರಾಶೆ ಅವನನ್ನು ಕಾಡುತ್ತದೆ.

ಇದು ಭಾವಜಗತ್ತಿನ ಮಾಪನ. ನಾವು ಗ್ರಹ ನಕ್ಷತ್ರಗಳ ಅಂತರವನ್ನು ಜ್ಯೋತಿರ್ವರ್ಷಗಳಿಂದ ಅಳೆದಹಾಗೆ, ಇಲ್ಲಿಯ ಅಲೌಕಿಕ ಸ್ವಭಾವವನ್ನು ಇಂತಹ ಒಂದು ಮಾಪನದಿಂದ ಅಳೆಯಲಾಗುತ್ತದೆ. ನಮ್ಮ ವ್ಯಾಪ್ತಿಯನ್ನು ಮೀರಿದ ಉನ್ನತ ವಿಷಯಗಳಬಗ್ಗೆ ವ್ಯವಹರಿಸಲು ನಮಗೆ ಯಾವ ಧೈರ್ಯವಿದೆ.

"ಸೇವೆಯ ದರ್ಜೆಗೆ ನಾನು ಮೇಲೇರಿದರೆ ನನ್ನ ಹೃದಯದ ಬಯಕೆ ಪರಿಪೂರ್ಣಗೊಳ್ಳಬಹುದು. ನನ್ನ ದಾಹತಣಿಯಬಹುದು, ಮತ್ತು ನನಗೆ ಸ್ವಲ್ಪ ನೆಮ್ಮದಿ ಸಿಕ್ಕಿ ನನ್ನೊಳಗೆ ನಾನು ತೃಪ್ತಿಯನ್ನು ಕಾಣಬಹುದು" ಎಂದು ಮೊದಲಿಗೆ ಭಕ್ತ ಯೋಚಿಸಿದ. ಆದರೆ ಅವನ ಭಕ್ತಿಯ ಬೆಳವಣಿಗೆ ಅವನನ್ನು ಅನಿರೀಕ್ಷಿತವಾದ ಬದುಕಿನ ನೆಲೆಗೆ ಕೊಂಡೊಯ್ದಿತು. ಇದು ದಿವ್ಯ ಪ್ರೇಮದ ಲಕ್ಷಣ. ಈ ಔಷಧಿಗಾಗಿ ಹಂಬಲಿಸುತ್ತಿರುವ ರೋಗಿಗೆ ಇದರ ಒಂದು ಹನಿ ಸಿಕ್ಕಿದ ತಕ್ಷಣ ತನ್ನ ರೋಗ ವಾಸಿಯಾಯಿತು ಎಂದು ಅವನು ಭಾವಿಸುತ್ತಾನೆ. ಆದರೆ ಅದು ಅವನನ್ನು ಇನ್ನೂ ಅಪಾಯದ ಸ್ಥಿತಿಗೆ ತಂದಿರುತ್ತದೆ.

"ದಿವ್ಯನಾಮವನ್ನು ಜಪಿಸುವಾಗ ಭಕ್ತರು ಸತತವಾಗಿ ಕಣ್ಣೀರು ಸುರಿಸುತ್ತಿರುವುದನ್ನು, ಅವರ ಮೈಮೇಲಿನ ಕೂದಲುಗಳು ನಿಮಿರಿನಿಲ್ಲುವುದನ್ನು ಮತ್ತು ಅವರ ಧ್ವನಿಯು ಕಂಪಿಸುತ್ತಿರುವುದನ್ನು ಕಂಡು ನಾನು ಆಕರ್ಷಿತನಾದೆ. ಆ ಲಕ್ಷಣಗಳು ನನ್ನನ್ನು ಆಕರ್ಷಿಸಿದವು ಮತ್ತು ನಾನು ಆ ಸ್ಥಿತಿಯನ್ನು ಹೊಂದಿದರೆ ನನಗೆ ಸಾಂಪೂರ್ಣ ತೃಪ್ತಿ ಸಿಗಬಹುದು ಎಂದು ನಾನು ಭಾವಿಸಿದೆ. ಆದರೆ ಅದನ್ನು ಅನುಭವಿಸಿದಾಗ ನಾನು ಕಂಡದ್ದೇನು? ಎಲ್ಲವೂ ತದ್ವಿರುದ್ಧ" ಎಂದು ಭಕ್ತ ಯೋಚಿಸುತ್ತಾನೆ.

### ಅನಂತ ಮುನ್ನಡೆ

ಅನಂತದೊಡನೆ ನಿಜವಾದ ಸಂಪರ್ಕಕ್ಕೆ ಬಂದೊಡನೆ ತಾನು ನಿಷ್ಪ್ರಯೋಜಕ ಎಂಬುದನ್ನು ಒಬ್ಬ ಭಕ್ತ ಮನಗಾಣುತ್ತಾನೆ. "ಇಲ್ಲಿ ಮುನ್ನಡೆಗೆ ಕೊನೆಯೆಂಬುದೇ ಇಲ್ಲ, ಬದಲಾಗಿ, ಅನಂತದೊಂದಿಗೆ ಹೆಚ್ಚು ಹೆಚ್ಚು ಸಾಮೀಪ್ಯವನ್ನು ಹೊಂದುತ್ತಿದ್ದಹಾಗೆ, ನಾನು ನಿಷ್ಪ್ರಯೋಜಕ ಎಂದು ಭಾವಿಸುತ್ತಿದ್ದೇನೆ" ಎಂದು ಅವನು ಯೋಚಿಸುತ್ತಾನೆ. ಭಕ್ತಿಯಲ್ಲಿ ನಾವು ಮುನ್ನಡೆ ಸಾಧಿಸಿದಷ್ಟೂ, ಇದು ಎಣೆಯಿಲ್ಲದ್ದು ಎಂದು ನಾವು

ಮನಗಾಣುತ್ತೇವೆ ಮತ್ತು ಎಣೆಯಿಲ್ಲದ್ದು ಎಂದು ಮನಗಾಣುತ್ತಿದ್ದಂತೆಯೇ ನಾವು ನಿಷ್ಪ್ರಯೋಜಕರೆಂಬ ಭಾವನೆ ಉಂಟಾಗುತ್ತದೆ. ಆದರೂ ನಾವು ಅಲ್ಲಿಂದ ಹಿಂತಿರುಗಲಾರೆವು. ಅಲ್ಲಿಂದ ನಾವು ನಮ್ಮ ಹೆಜ್ಜೆಗಳನ್ನು ಹಿಂತೆಗೆಯುವ ಸಾಧ್ಯತೆಯಿಲ್ಲ. ಏನಿದ್ದರೂ ನಾವು ಮುಂದುವರಿಯ ಬೇಕು. ಇದು ಒಬ್ಬ ನಿಷ್ಕಪಟ ಭಕ್ತನ ಉತ್ಸಾಹ.

ನಮ್ಮ ಪ್ರತೀಕ್ಷೆಯ ಅನಂತ ಗುಣಲಕ್ಷಣಗಳನ್ನು ನಾವು ಕಂಡುಕೊಂಡಾಗ "ಅತ್ಯುತ್ಕೃಷ್ಟ ವಿಧದ ಅಮೃತವು ನನ್ನ ಮುಂದಿದೆ, ಆದರೆ ನಾನು ಅದನ್ನು ಸವಿಯಲಾರೆ, ನಾನು ಅದನ್ನು ನನ್ನ ಕೈಯಲ್ಲಿ ಹಿಡಿದುಕೊಳ್ಳಲು ಅಥವಾ ಮುಟ್ಟಲೂ ಅಸಮರ್ಥ. ಹಾಗಿದ್ದಾಗ್ಯೂ, ಅದರ ಆಕರ್ಷಣೆ ಎಷ್ಟು ಅದ್ಭುತವಾದದ್ದೆಂದರೆ ನಾನು ಅದರ ಸೆಳೆತದಿಂದ ಹಿಂದಕ್ಕೆ ಹೋಗಲಾರೆ, ಮತ್ತು ಇದರ ವಿನಃ ಒಂದು ಕ್ಷಣ ಮಿಲಿಯಾಂತರ ವರ್ಷಗಳ ಅವಧಿಯಂತೆ ಅನಿಸುತ್ತದೆ" ಎಂದು ಯೋಚಿಸುತ್ತಾ ನಾವು ನಿಷ್ಪ್ರಯೋಜಕರೆಂದು ಮನಗಾಣುತ್ತೇವೆ ಆದರೆ ಹಿಂದಕ್ಕೆ ಬರಲಾರೆವು.

"ಓಹ್ ! ಎಷ್ಟೋ ಸುದೀರ್ಘ ವರುಷಗಳು ಸಂದುಹೋದವು, ಆದರೂ ನನ್ನ ಕೋರಿಕೆ ಹಾಗೆಯೇ ಉಳಿದಿದೆ ! ನಾನು ಅದನ್ನು ಪಡೆಯಲು ಪ್ರಯತ್ನಿಸುತ್ತಿದ್ದೇನೆ, ಆದರೆ ಪಡೆಯಲಾಗುತ್ತಿಲ್ಲ ಮತ್ತು ಸಮಯ ಕಳೆದುಹೋಗುತ್ತಿದೆ. ಸಮಯವೂ ಕೊನೆಯಿಲ್ಲದ್ದು. ಕಣ್ಣೀರಿನ ಎಷ್ಟೋ ನದಿಗಳು ನನ್ನ ಕಣ್ಣುಗಳಲ್ಲಿ ಹುಟ್ಟಿ, ಅವ್ಯಾಹತವಾಗಿ ನನ್ನ ಕಣ್ಣುಗಳಿಂದ ಕೆಳಗೆ ಹರಿದು ನನ್ನ ದೇಹವನ್ನು ತೋಯಿಸುತ್ತಿವೆ. ಆದರೆ ಯಸಸ್ಸಿನ ನೆಲೆಯು ನನ್ನ ಕೈಗೆಟಕುತ್ತಿಲ್ಲ. ನನ್ನ ಮನಸ್ಸು ಪೂರ್ತಿ ಬರಿದಾಗಿದೆ. ನನ್ನ ಭವಿಷ್ಯದಬಗ್ಗೆ ಯಾವ ಕುರೂಹೂ ಕಾಣುತಿಲ್ಲ. ನನ್ನಲ್ಲಿ ಯಾವ ಆಕರ್ಷಣೆಯೂ ಉಳಿದಿಲ್ಲ. ಈ ವ್ಯಾಧಿಗ್ರಸ್ತ ದೇಹವನ್ನು ಸಮಾಧಾನಪಡಿಸಬಹುದು ಎನ್ನುವಂತಹ ಬೇರೆ ಯಾವುದೇ ವಿಷಯಗಳಲ್ಲೂ ಆಕರ್ಷಣೆಯಿಲ್ಲ" ಎಂದು ಆ ಭಕ್ತನು ಯೋಚಿಸುತ್ತಾನೆ.

"ಬೇರೆ ಯಾವ ಕ್ಷೇತ್ರದಿಂದಲೂ ನಾನು ಪರಿಹಾರವನ್ನು ಕಂಡುಕೊಳ್ಳಲಾರೆ. ಎಲ್ಲಾ ಪರ್ಯಾಯ ವ್ಯವಸ್ಥೆಗಳು ವರ್ಜಿಸಲ್ಪಟ್ಟಿವೆ. ನಾನು ಸಂಪೂರ್ಣವಾಗಿ ಕೃಷ್ಣಪ್ರಜ್ಞೆಯ ಮತ್ತು ಕೃಷ್ಣಪ್ರೇಮದ ಹಿಡಿತದಲ್ಲಿದ್ದೇನೆ. ಯಾರಾದರೂ ನನ್ನ ಸಹಾಯಕ್ಕೆ ಬರಬಲ್ಲಿರಾದರೆ, ದಯವಿಟ್ಟುಬನ್ನಿ ! ನನಗೆ ಸಹಾಯಮಾಡಿ, ನಾನು ಕಳೆದುಹೋಗಿದ್ದೇನೆ! ಅಸಹಾಯಕ ನಾನು, ದಯವಿಟ್ಟು ನನ್ನ ರಕ್ಷಣೆಗೆಬನ್ನಿ"

ನಾವು ಕೃಷ್ಣಪ್ರಜ್ಞೆಯಲ್ಲಿ ಆಳವಾಗಿ ನೆಲೆಗೊಂಡಮೇಲೆ ಅದನ್ನು ಬಿಡಲಾರೆವು, ಆದರೆ ಅದರಲ್ಲಿ ನಮ್ಮ ಹಾತೊರೆತದ ದಾಹ ಹೆಚ್ಚುತ್ತಾಹೋಗುತ್ತದೆ ಮತ್ತು ನಾವು ತೃಪ್ತಿಯನ್ನು ಅನುಭವಿಸಲಾರೆವು. ಅಂತಹ ಒಂದು ಸಹಜವಾದ ಭಯಾನಕ ಸ್ಥಿತಿಯಮಧ್ಯೆ ನಾವಿದ್ದೇವೆ ಎಂದು ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ.

ಒಬ್ಬನ ಮನಸ್ಸಿನಲ್ಲಿ ಜಾಗೃತವಾಗುವ ಕೃಷ್ಣಪ್ರಜ್ಞೆಯು ಅವನನ್ನು ಈ ದಿಶೆಗೆ ಕೊಂಡೊಯ್ಯುತ್ತದೆ. ಒಬ್ಬ ಭಕ್ತನು ನಿಜವಾಗಿ ಕೃಷ್ಣನೊಡನೆ ಸಂಪರ್ಕಕ್ಕೆ ಬಂದಾಗ, ಅವನ ಸ್ಥಾನವು ಸಂಪೂರ್ಣವಾಗಿ ಪ್ರತ್ಯೇಕವಾಗಿರುತ್ತದೆ ಮತ್ತು ಇತರ ಎಲ್ಲಾ ವಿಷಯಗಳನ್ನೂ ವರ್ಜಿಸುವಂಥದ್ದಾಗಿರುತ್ತದೆ. ಅವನ ಎಲ್ಲ ಕ್ರಿಯೆಗಳು ಕೃಷ್ಣನಲ್ಲಿ ಕೇಂದ್ರೀಕೃತವಾಗಿರುತ್ತವೆ. ಈ ಶ್ಲೋಕದಲ್ಲಿ ಚೈತನ್ಯಮಹಾಪ್ರಭುಗಳು, ಒಬ್ಬ ಭಕ್ತನು ಭಕ್ತಿಯೋಗದಲ್ಲಿ ಹೇಗೆ ಮುಂದುವರಿಯುತ್ತಾನೆ, ಕೃಷ್ಣನಬಗ್ಗೆ ಉನ್ನತವಾದ ಕಲ್ಪನೆಯು ಅವನಲ್ಲಿ ಹೇಗೆ ಜಾಗೃತವಾಗುತ್ತದೆ, ನಂತರ, ಕೃಷ್ಣನನ್ನು ನೋಡಿ ಅವನನ್ನು ಪಡೆಯಲಾಗದೇ, ಆ ವಿರಹವನ್ನು ಹೇಗೆ ಅನುಭವಿಸುತ್ತಾನೆ ಎಂದು ವಿವರಿಸಿದ್ದಾರೆ. ಅವನು ಹೆಚ್ಚು ಹೆಚ್ಚು ಮುನ್ನಡೆ ಸಾಧಿಸುತ್ತಿದ್ದ ಹಾಗೆ, ಹೆಚ್ಚುಹೆಚ್ಚಾಗಿ ತನ್ನ ನಿಷ್ಪ್ರಯೋಜಕತೆಯನ್ನು ಮನಗಾಣುತ್ತಾನೆ.

ಮಹಾಪ್ರಭುಗಳ ಈ ಒಂದು ಉನ್ನತ ಹಿತೋಪದೇಶವು, ಈ ಒಂದು ತೀವ್ರ ವಿರಹದ ಸನ್ನಿವೇಶಕ್ಕೆ ನಮ್ಮನ್ನು ನಾವು ಹೊಂದಿಸಿಕೊಳ್ಳಲು ಸಹಾಯಕವಾಗುತ್ತದೆ. ನೀವು ಕೃಷ್ಣಪ್ರಜ್ಞೆಯಲ್ಲಿ ಕಳೆದುಹೋಗಲಿದ್ದೀರಿ, ಮತ್ತು ನಿಮ್ಮ ಸ್ಥಾನ ಏನು? ನೀವೊಂದು ಹನಿ ಮತ್ತು ದಿವ್ಯಪ್ರೇಮದ ಸಾಗರದಲ್ಲಿ ನೀವು ಎಸೆಯಲ್ಪಡುತ್ತೀರಿ ಎಂದು ಚೈತನ್ಯ ಮಹಾಪ್ರಭುಗಳು ಹೇಳುತ್ತಾರೆ

## ಶ್ಲೋಕ ೮

**ಆಶ್ಲಿಷ್ಯ ವಾ ಪಾದರತಾಮ್ ಪಿನಷ್ಟು ಮಾಮ್**
**ಅದರ್ಶನಾನ್ ಮರ್ಮಹತಾಂ ಕರೋತು ವಾ ।**
**ಯಥಾ ತಥಾ ವಾ ವಿದಧಾತು ಲಂಪಟೋ**
**ಮತ್ಪ್ರಾಣನಾಥಾಸ್ತು ಸ ಏವ ನಾಪರಃ ॥**

## ಅನುವಾದ

**ಕೃಷ್ಣನು ನನ್ನನ್ನು ಆಲಿಂಗಿಸಬಹುದು ಅಥವಾ ತನ್ನ ಪಾದದಡಿಯಲ್ಲಿ ನನ್ನನ್ನು ತುಳಿದುಹಾಕಬಹುದು. ನನ್ನಿಂದ ತಾನು ಬಚ್ಚಿಟ್ಟುಕೊಂಡು ನನ್ನ ಮನ ಮುರಿಯಬಹುದು. ಆ ವ್ಯಭಿಚಾರಿಯು ಅವನಿಗೆ ಇಷ್ಟಬಂದಂತೆ ಏನು ಬೇಕಾದರೂ ಮಾಡಲಿ, ಆದರೆ ಎಂದೆಂದಿಗೂ ಅವನೊಬ್ಬನೇ ನನ್ನ ಬದುಕಿನ ಒಡೆಯನಾಗಿರಲಿ.**

## ಭಾವಾರ್ಥ

ಈ ಮನೋಭಾವ ಭಕ್ತರಿಗೆ ಅತ್ಯುನ್ನತ ಔಷಧಿ. ನಾವು ಅಳೆಯಲಾಗದ್ದನ್ನು ಅಳೆಯಲು ಮುಂದಾಗಿದ್ದೇವೆ. ಆದರೆ ಈ ತತ್ತ್ವವನ್ನು ನಾವು ಆಲಿಂಗಿಸಲೇಬೇಕು. ಅಪರಿಮಿತ ಪ್ರೇಮ ಮತ್ತು ಸೌಂದರ್ಯದ ಒಡೆಯನಾದ ಭಗವಂತನ ಸಂಪರ್ಕಕ್ಕೋಸ್ಕರ ನಾವು ಪ್ರಯತ್ನಿಸುವಾಗ ಅವನು ಅನಂತ ಎಂಬುದನ್ನು ಮರೆಯಬಾರದು. ನಮಗೆ ಅವನೊಬ್ಬನೇ, ಆದರೆ ಅವನಿಗೆ ವ್ಯವಹರಿಸಲು ನಮ್ಮಂಥ ಇನ್ನೂ ಅನೇಕ ಭಕ್ತರಿದ್ದಾರೆ. ಅವನು ಅತ್ಯಂತ ಪ್ರೀತಿ ಮತ್ತು ವಾತ್ಸಲ್ಯದಿಂದ ನಮ್ಮನ್ನು ಆಲಿಂಗಿಸಿಕೊಳ್ಳಬಹುದು, ಆದರೆ ಅದರ ವಿರುದ್ಧವಾದದ್ದನ್ನು ಕೂಡಾ ಸ್ವೀಕರಿಸಲು ನಾವು ಸಿದ್ಧರಿರಬೇಕು. ನಾವು ಅವನ ಪಾದಪದ್ಮಗಳಿಗೆ ಅಂಟಿಕೊಂಡಿರಬಹುದು, ಆದರೆ ಅವನು ಕ್ರೂರವಾಗಿ ನಮ್ಮನ್ನು ತುಳಿದುಹಾಕಬಹುದು. ಹಾಗಿದ್ದಾಗ್ಯೂ ನಾವು ಸಂಪೂರ್ಣ ಭರವಸೆಯಿಂದ ಅವನ ಪಾದಪದ್ಮಗಳನ್ನು ಮನಃಪೂರ್ವಕವಾಗಿ ಗಟ್ಟಿಯಾಗಿ ಹಿಡಿದುಕೊಂಡಿರತಕ್ಕದ್ದು. ಆಗಲೂ ಅವನು ನಮ್ಮ ಪ್ರೀತಿಪ್ರೇಮಗಳನ್ನು ಪರಿಗಣಿಸದೇ ನಮ್ಮನ್ನು ತುಳಿಯುತ್ತಿರುವುದನ್ನು ಮುಂದುವರಿಸುವ ಸಾಧ್ಯತೆಯಿದೆ.

ನಾವು ನಮ್ಮ ಸಂಪೂರ್ಣ ಪರಿಶ್ರಮವನ್ನು ಉಪಯೋಗಿಸಿ, ನಮ್ಮ ಸರ್ವಸ್ವವನ್ನು ಅವನಿಗೆ ಒಪ್ಪಿಸಿದ್ದಾಗಲೂ, ನಮ್ಮ ನಿವೇದನೆ ತಿರಸ್ಕೃತವಾಗುವುದನ್ನು ಕಾಣಲೂಬಹುದು. ಅವನು ನಮ್ಮನ್ನು ಆಲಿಂಗಿಸಬಹುದು, ಆದರೆ ಅದೇವೇಳೆ ಅವನ ಅತ್ಯಂತ ಕ್ರೂರ ನಡವಳಿಕೆಗೂ ನಾವು ಸಿದ್ಧರಾಗಿರಬೇಕು. ನಮ್ಮ ಸಕಲ ನಿವೇದನೆಗಳನ್ನು ಅವನು ತನ್ನ ಕಾಲಡಿಗೆ ಹಾಕಿ ತುಳಿದುಹಾಕಬಹುದು. ಅವನ ಆದರದ ಮತ್ತು ತಿರಸ್ಕಾರದ ಎರಡೂ ಪ್ರತಿಕ್ರಿಯೆಗಳಿಗೆ ನಾವು ಏಕಕಾಲದಲ್ಲಿ ಸಿದ್ಧರಾಗಿರಬೇಕು. ವ್ಯತಿರಿಕ್ತ ಸನ್ನಿವೇಶಗಳಿಗೆ ನಾವು ಯಾವಾಗಲೂ ಅಣಿಯಾಗಿರಬೇಕು. ಕೃಷ್ಣನು ನಮ್ಮಲ್ಲಿ ಉದಾಸೀನತೆಯನ್ನು ತೋರಬಹುದು, ನಮ್ಮನ್ನು ಪರಿಗಣಿಸದೇ ಇರಬಹುದು. ನಮ್ಮನ್ನು ಶಿಕ್ಷಿಸುವಾಗ ಅವನು ನಮಗೆ ಹತ್ತಿರದಲ್ಲಿರುತ್ತಾನೆ ಎಂಬುದು ತೃಪ್ತಿಕರವಾದ ಅಂಶ. ಆದರೆ ಅವನ ಔದಾಸೀನ್ಯ ಶಿಕ್ಷೆಗಿಂತಲೂ ಅಸಹನೀಯವಾದುದು. "ಕೃಷ್ಣ ನನ್ನನ್ನು ಕಡೆಗಣಿಸುತ್ತಿದ್ದಾನೆ, ನನ್ನೊಡನೆ ಯಾವರೀತಿಯ ಸಂಪರ್ಕವನ್ನೂ ಇರಿಸಿಕೊಳ್ಳಲು ಇಷ್ಟವಿಲ್ಲವೇನೋ ಎನ್ನುವಷ್ಟು ನನ್ನನ್ನು ಕಡೆಗಣಿಸುತ್ತಿದ್ದಾನೆ. ಅವನಿಗೆ ನನ್ನ ಪರಿಚಯವಿಲ್ಲವೇ? ನಾನೇನು ಅವನಿಗೆ ಪರಕೀಯನೇ? ಅಪರಿಚಿತನೇ?" ಎಂದು ಭಕ್ತ ಯೋಚಿಸುತ್ತಾನೆ. ದಂಡನೆಯನ್ನು ನಾವು ವರದಂತೆ ಸ್ವೀಕರಿಸಬಹುದು, ಆದರೆ ಔದಾಸೀನ್ಯ ಅತ್ಯಂತ ನೋವುಂಟುಮಾಡುವಂತಹದು.

ಭಕ್ತನು ಅನುಭವಿಸುವ ಅಗಲಿಕೆಯ ನೋವು ಇನ್ನೂ ಒಂದು ಹಂತ ಮೇಲಿನದ್ದಾಗಿರಬಹುದು. ನಮ್ಮನ್ನು ಲವಲೇಶವೂ ಪರಿಗಣಿಸದೇ ಕೃಷ್ಣ ಇನ್ನೊಬ್ಬ ಭಕ್ತನನ್ನು ನಮ್ಮ ಕಣ್ಮುಂದೆಯೇ ಪ್ರೀತಿಯಿಂದ ಆಲಿಂಗಿಸಿಕೊಳ್ಳಬಹುದು. ಈ ರೀತಿಯ ಸ್ವಾಗತಕ್ಕೆ, ಆಲಿಂಗನಕ್ಕೆ ನಾನು ಬಾಧ್ಯ ಅಥವಾ ಹಕ್ಕುದಾರ ಎಂದು ನಮಗೆ ಅನಿಸಬಹುದು. ಅದೇವೇಳೆ ನಮ್ಮ ಕಣ್ಮುಂದೆಯೇ ಆ ಭಾಗ್ಯ ಇನ್ನೊಬ್ಬ ಭಕ್ತನದಾಗುವುದನ್ನು ನಾವು ನೋಡಬಹುದು. ಆದರೆ ಈ ಭಾಗ್ಯಕ್ಕೆ ನಾನೂ ಹಕ್ಕುದಾರ ಎನ್ನುವ ಮನೋಭಾವ ನಮಗೆ ಹೆಚ್ಚಿನ ಅಪಾಯಕ್ಕೆ ಮೂಲಕಾರಣವಾಗಬಹುದು.

ಇದು ಅನುರಾಗದ ನಿಯಮ. ಪ್ರೇಮದ ಔದಾಸೀನ್ಯವನ್ನು ಸಹಿಸಲಾಗದು. ಔದಾಸೀನ್ಯ ಸಹಿಸಲು ಬಹಳ ಕಷ್ಟಕರವಾದುದು. ಆದರೆ ನಾವು ಅದಕ್ಕೆ ಅಣಿಯಾಗಿರಲೇಬೇಕು. ನಾವು ಅದಕ್ಕೆ ಪ್ರಾರಂಭದಿಂದಲೂ ಸಿದ್ಧರಾಗಿರಬೇಕು. ಇದೇ ಕೃಷ್ಣಪ್ರೇಮದ, ಕೃಷ್ಣನ ಪ್ರತಿ ದಿವ್ಯಪ್ರೇಮದ ಅರ್ಥವಾಗಿರುವುದರಿಂದ; ಕೃಷ್ಣ ಸರ್ವಾಧಿಕಾರಿ

ಮತ್ತು ಮನಸ್ವಿಯಾಗಿರುವುದರಿಂದ, ಅವನಿಂದ ಇಂತಹ ಪ್ರತಿಕ್ರಿಯೆಗೆ ನಾವು ಸಿದ್ಧರಾಗಿರಲೇಬೇಕು. ಅವನ ಪ್ರೇಮ ದಿವ್ಯವಾದುದು. ದಿವ್ಯಪ್ರೇಮ ಎಂದರೆ ಕೃಪೆ, ತೀರ್ಪು ಅಲ್ಲ. ದಿವ್ಯಪ್ರೇಮ ಯಾವುದೇ ನಿಯಮಕ್ಕೊಳಪಟ್ಟಿಲ್ಲ. ನಾವು ಇಲ್ಲಿ ದಿವ್ಯಪ್ರೇಮವನ್ನೇ ನಮ್ಮ ಉಜ್ವಲ ಭವಿಷ್ಯವನ್ನಾಗಿ, ನಮ್ಮ ಸೌಭಾಗ್ಯವನ್ನಾಗಿ, ಸ್ವೀಕರಿಸಿದ್ದೇವೆ.

ಹಾಗಾಗಿ, ಶಾಸನವನ್ನು ಮೀರಿದ ಮಾಧ್ಯಮದಲ್ಲಿ ನಡೆಸಿಕೊಳ್ಳಲ್ಪಡಲು ಅಣಿಯಾಗಿರಬೇಕು. ದಿವ್ಯಪ್ರೇಮದ ನೆಲದಲ್ಲಿ ತೀರ್ಪಿಗೆ ಯಾವುದೇ ಸ್ಥಾನವಿರುವುದಿಲ್ಲ. ದಿವ್ಯಪ್ರೇಮಕ್ಕೆ ಯಾವುದೇ ಕಟ್ಟುಪಾಡುಗಳಿಲ್ಲ. ಅದು ಮುಕ್ತವಾದುದು. ಅದು ಎಲ್ಲಿ ಬೇಕಾದರೂ, ಹೇಗೆಬೇಕಾದರೂ, ಎಲ್ಲ ಕಡೆಗೂ ಹರಿದಾಡಬಹುದು. ಇದು ದಿವ್ಯಪ್ರೇಮದ ನೈಜಗುಣ. ಹಾಗಾಗಿ ನಾವು ಯಾವುದೇ ಬಾಧ್ಯತೆಯನ್ನು ಅಲ್ಲಿ ಮಂಡಿಸಲಾಗದು. ಅಲ್ಲಿ ನಮಗೆ ಯಾವ ಹಕ್ಕೂ ಇಲ್ಲ.

## ಪ್ರೇಮವು ಶಾಸನಕ್ಕಿಂತ ಮಿಗಿಲು

ಇದು ಶ್ರೇಷ್ಠ, ದಿವ್ಯ ವಸ್ತುವಿನ ಲಕ್ಷಣ, ಮತ್ತು ಈ ವಸ್ತು ಅತ್ಯಂತ ವಿರಳವಾದುದು. ಆದರೆ ಯಾವುದೇ ಹಿಂಜರಿಕೆಯಿಲ್ಲದ ಸ್ಥಿರತೆಯನ್ನು ನಾವು ಈ ಉನ್ನತ ಆದರ್ಶಕ್ಕೆ ನಮ್ಮ ಕಡೆಯಿಂದ ತೋರಬೇಕಾಗುತ್ತದೆ. ಇದು ನಿಜವಾದ ಪ್ರೀತಿ, ಮತ್ತು ಅದಕ್ಕೆ ನಾವು ಸಿದ್ಧರಿರಬೇಕು. ಎಲ್ಲ ಪ್ರತಿಕೂಲ ಸನ್ನಿವೇಶಗಳಲ್ಲಿಯೂ ಇದೇ ನಿಜವಾದ ಕೃಷ್ಣಪ್ರೇಮದ ಲಕ್ಷಣ. "ಬದುಕುವುದಕ್ಕಾಗಿ ಸಾಯುವುದು" ಒಳ್ಳೆಯದೋ ಅಥವಾ ಕೆಟ್ಟದ್ದೋ, ಎದುರಾಗುವ ಎಲ್ಲಾ ವಿವಿಧ ಹಂತಗಳನ್ನು ನಾವು ಆಶ್ರಯಿಸಿಕೊಳ್ಳಬಲ್ಲೆವಾದರೆ ಆ ಉನ್ನತವಾದ ಲೋಕಕ್ಕೆ ನಾವು ಪ್ರವೇಶಗಳಿಸಬಹುದು.

ತೀರ್ಪು ಎನ್ನುವುದು ಪ್ರೇಮದೊಳಗೇ ಅಡಕವಾಗಿರುತ್ತದೆ. ದಯೆಯು ತೀರ್ಪಿಗಿಂತಲೂ ಮಿಗಿಲಾದುದು. ದಿವ್ಯ ಪ್ರೇಮವೂ ತೀರ್ಪಿಗಿಂತ ಮಿಗಿಲಾದುದು. ಆದರೆ ಅದಕ್ಕೆ ಅದರದೇ ಆದ ನಿಯಮವಿದೆ. ಇದೇ ಶ್ಲೋಕಕ್ಕೆ ಸಮಾನಾಂತರ ಅರ್ಥವನ್ನು ಕೊಡುವ ಇನ್ನೊಂದು ಶ್ಲೋಕವು ಶ್ರೀಲ ರೂಪಗೋಸ್ವಾಮಿ ಪ್ರಭುಪಾದರಿಂದ ಕೊಡಲ್ಪಟ್ಟಿದೆ.

ವಿರಚಯ ಮಯಿದಂಡಂ ದೀನಬಂಧೋ ದಯಾಂ ವಾ
ಗತಿರಿಹ ನ ಭವತಃ ಕಾಚಿದ್ ಅನ್ಯಾ ಮಮಾಸ್ತಿ ।

निपततु शतकोटि निर्भरं वा नवाम्भः
तदपि किल पयोदः स्तूयते चातकेन ॥

ಚಾತಕ ಎಂಬ ಹೆಸರಿನ ಒಂದು ಸಣ್ಣ ಪಕ್ಷಿಯಿದೆ. ಅದು ಕೇವಲ ಮಳೆಯ ನೀರನ್ನು ಮಾತ್ರ ಕುಡಿಯುತ್ತದೆ. ಮಳೆಯ ನೀರನ್ನಲ್ಲದೇ ನೆಲದಮೇಲಿನ ಬೇರೆ; ನದಿ, ತೊರೆ ಅಥವಾ ಕೆರೆಯನೀರನ್ನು ಅದು ಎಂದಿಗೂ ಕುಡಿಯುವುದಿಲ್ಲ. ಅದರ ಸ್ವಭಾವವೇನೆಂದರೆ, ಅದು ಮೇಲ್ಮುಖವಾಗಿ ಬಾಯಿತೆರೆದುಕೊಂಡು ಮಳೆಯ ನೀರಿಗಾಗಿ ಹಾತೊರೆಯುತ್ತಿರುತ್ತದೆ. ನಿಜಭಕ್ತನಾದವನೊಬ್ಬನು ಇತರ ಯಾವುದೇ ಪ್ರೇಮಕ್ಕಲ್ಲದೇ, ಕೇವಲ ಕೃಷ್ಣಪ್ರೇಮವೆಂಬ ಮಳೆಯ ನೀರಹನಿಗೆ ಮಾತ್ರ ಹೇಗೆ ಬಾಯಿತೆರೆದುಕೊಂಡು ಕಾತರಿಸುತ್ತಿರುತ್ತಾನೆ ಎಂದು ಈ ಶ್ಲೋಕದಲ್ಲಿ ರೂಪಗೋಸ್ವಾಮಿಯವರು ಚಾತಕಪಕ್ಷಿಯ ಉದಾಹರಣೆಯ ಮೂಲಕ ನಿರೂಪಿಸಿದ್ದಾರೆ.

"ನೀನು ಪತಿತಾತ್ಮರ ಗೆಳೆಯನಾದುದರಿಂದ ನನಗೆ ಸ್ವಲ್ಪ ಭರವಸೆಯಿದೆ. ನೀನು ನಿನ್ನ ಕೃಪೆಯನ್ನು ದಯಪಾಲಿಸಬಹುದು ಅಥವಾ ನನ್ನನ್ನು ದಂಡಿಸಬಹುದು. ಯಾವುದೇ ಸ್ಥಿತಿಯಲ್ಲಾದರೂ ನಿನ್ನ ಪಾದಕಮಲಗಳಲ್ಲಿ ಶರಣಾಗತನಾಗುವುದರ ಹೊರತು ನನಗೆ ಬೇರೆ ಮಾರ್ಗವೇ ಇಲ್ಲ" ಎಂದು ಭಕ್ತನಾದವನೊಬ್ಬ ಪ್ರಾರ್ಥಿಸುತ್ತಾನೆ.

ನಮ್ಮ ಶರಣಾಗತ ಮನೋಭಾವ ಯಾವಾಗಲೂ ಮಳೆಯನೀರಿಗೋಸ್ಕರವೇ ಬಾಯಿತೆರೆದುಕೊಂಡು ಕಾತರಿಸುತ್ತಿರುವ ಚಾತಕಪಕ್ಷಿಯಂಥದ್ದಾಗಿರಬೇಕು. ಮಳೆಯು ಪುಷ್ಕಳವಾಗಿ ಸುರಿಯಬಹುದು, ಆದರೆ, ಕೇವಲ ಚಾತಕದಂಥ ಸಣ್ಣ ಪಕ್ಷಿಯ ನೀರಡಿಕೆಯನ್ನು ನೀಗುವಷ್ಟು ಮಾತ್ರ ಸುರಿಯಲಾರದು. ಮಳೆಯೊಂದಿಗೆ ಗುಡುಗು, ಸಿಡಿಲುಗಳುಂಟಾಗುತ್ತವೆ ಹಾಗೂ ವಿಪರೀತವಾದ ಗಾಳಿಯೂಬೀಸುತ್ತದೆ. ಆ ಮಳೆಯು ಚಾತಕದಂತಹ ಪಕ್ಷಿಯ ಸಣ್ಣ ದೇಹವನ್ನೇ ಕೊಚ್ಚಿಕೊಂಡು ಹೋಗುವ ಸಾಧ್ಯತೆಯೂ ಇದೆ. ಸಿಡಿಲು ಆ ಪಕ್ಷಿಯ ದೇಹವನ್ನು ಸುಟ್ಟು ನಿರ್ನಾಮಗೊಳಿಸಬಹುದು. ಹೀಗಿದ್ದರೂ, ಮಳೆಯ ನೀರಿಗೋಸ್ಕರವೇ ಪ್ರಾರ್ಥಿಸುವುದು ಚಾತಕದ ಸ್ವಭಾವವಾಗಿರುತ್ತದೆ. ಯಾವುದೇ ಸನ್ನಿವೇಶಗಳಲ್ಲಿಯೂ ಅದು ಇನ್ನ್ಯಾವುದೇ ಮೂಲದಿಂದಲೂ ನೀರನ್ನು ಕುಡಿಯಲಾರದು. ಕೃಷ್ಣನ ಪ್ರತಿ ನಮ್ಮ ಧೋರಣೆಯೂ ಇದೇ ಆಗಿರಬೇಕು. ಅವನು ತನ್ನ ಕೃಪಾಕಟಾಕ್ಷವನ್ನು ನಮ್ಮೆಡೆಗೆ ಹರಿಸುತ್ತಾನೋ ಇಲ್ಲವೋ, ಅವನಿಗೆ ಶರಣಾಗುವುದು ನಮ್ಮ ಧರ್ಮ.

## ಶ್ರೀಮತಿ ರಾಧಾರಾಣಿಯ ಪಾದಕಮಲ

ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ಸನ್ನಿವೇಶವನ್ನು ಇಲ್ಲಿ ಸ್ಮರಿಸಬಹುದು. ಹೆಚ್ಚುಕಮ್ಮಿ ಒಂದುನೂರು ವರ್ಷಗಳ ಸುದೀರ್ಘ ಅಗಲಿಕೆಯ ನಂತರ ಶ್ರೀಕೃಷ್ಣನು, ಶ್ರೀಮತಿ ರಾಧಾರಾಣಿ ಮತ್ತು ವೃಂದಾವನದ ಇತರ ಗೋಪಿಕಾ ಸ್ತ್ರೀಯರನ್ನು ಕುರುಕ್ಷೇತ್ರದಲ್ಲಿ ಭೇಟಿಯಾಗುತ್ತಾನೆ. ಆಗ, ರಾಧಾರಾಣಿಯ ಸಹಿತ ಇತರ ಗೋಪಿಕೆಯರಿಗೆ ಅಷ್ಟೊಂದು ದೀರ್ಘ ಅಗಲಿಕೆಯ ನೋವನ್ನು ನೀಡಿ ತಾನು ಅವರಿಗೆ ಅನ್ಯಾಯಮಾಡಿರುವೆನೆಂದು ಶ್ರೀಕೃಷ್ಣನು ಭಾವಿಸುತ್ತಾನೆ. ಅವನು ಗೋಪಿಕೆಯರನ್ನು, ಮುಖ್ಯವಾಗಿ ಶ್ರೀಮತಿ ರಾಧಾರಾಣಿಯವರನ್ನು ಸಮೀಪಿಸಿ, ಅವರ ಶರಣಾಗತಿ ಮತ್ತು ಪ್ರೇಮವನ್ನು ಸ್ಮರಿಸುತ್ತಾ, ತಾನೊಬ್ಬ ದೊಡ್ಡ ಅಪರಾಧಿಯೆಂಬಂತೆ ಭಾವಿಸುತ್ತಾನೆ. ಎಷ್ಟರಮಟ್ಟಿಗೆ ಈ ಅಪರಾಧಿಭಾವ ಅವನನ್ನು ಕಾಡುತ್ತದೆಂದರೆ, ಶ್ರೀಮತಿ ರಾಧಾರಾಣಿಯವರ ಪಾದಕಮಲಗಳನ್ನು ಸ್ಪರ್ಷಿಸಿ ಅವರ ಕ್ಷಮೆಯಾಚಿಸಲು ಅವರಮುಂದೆ ತಾನು ತಲೆಬಾಗಲು ಮುಂದಾಗುತ್ತಾನೆ.

ಈ ದೃಶ್ಯವನ್ನು ಒಬ್ಬ ಕವಿಯು ವಿವರಿಸಿದ ರೀತಿಯನ್ನಾಧರಿಸಿದ ಈ ಕವಿತೆಯನ್ನು ಶ್ರೀಲ ರೂಪಗೋಸ್ವಾಮಿಯವರ ಪದ್ಯಾವಳಿ ಎಂಬ ಕೃತಿಯಿಂದ ಆರಿಸಲಾಗಿದೆ. ಆ ಕಾಲದಲ್ಲಿ ಶ್ರೀಕೃಷ್ಣನು ಭಾರತದ ಅಗ್ರಗಣ್ಯ ರಾಜನಾಗಿದ್ದ. ಆದರೆ ಅವನು ಕುರುಕ್ಷೇತ್ರದಲ್ಲಿ ಶ್ರೀಮತಿ ರಾಧಾರಾಣಿ ಮತ್ತು ವೃಂದಾವನದ ಇತರ ಗೋಪಿಕಾ ಸ್ತ್ರೀಯರ ಸಮಕ್ಷಮದಲ್ಲಿ, ವೃಂದಾವನದ ವಾತಾವರಣದ ಸಂಪರ್ಕಕ್ಕೆ ಬಂದಾಗ ತಾನು ಅಪರಾಧಿಯೆಂದು ಭಾವಿಸಿದ ಮತ್ತು ರಾಧಾರಾಣಿಯವರ ಮುಂದೆ ಬಾಗಿ ಅವರ ಪಾದಕಮಲಗಳನ್ನು ಸ್ಪರ್ಷಿಸಿ ಅವರ ಕ್ಷಮೆಯನ್ನು ಯಾಚಿಸಲು ಮುಂದಾದ. ಆಸಮಯದಲ್ಲಿ ರಾಧಾರಾಣಿಯವರು ತಕ್ಷಣ ಹಿಂದಡಿಯಿಟ್ಟು ಶ್ರೀಕೃಷ್ಣನನ್ನು ಹೀಗೆ ಎಚ್ಚರಿಸುತ್ತಾರೆ. "ನೀವು ಏನು ಮಾಡುತ್ತಿರುವಿರಿ? ನನ್ನ ಪಾದಗಳನ್ನು ಏಕೆ ಮುಟ್ಟುತ್ತಿರುವಿರಿ? ನಿಮ್ಮ ಈ ಕ್ರಿಯೆ ದಿಗ್ಭ್ರಮೆಗೊಳಿಸುವಂಥದ್ದು! ನೀವೇನು ಪ್ರಜ್ಞೆ ಕಳೆದುಕೊಂಡಿರುವಿರಾ? ನೀವು ಸಕಲರಿಗೂ ಒಡೆಯರು, ನಿಮ್ಮಿಂದ ಯಾವುದೇ ವಿವರಣೆಯ ಅಗತ್ಯವಿಲ್ಲ. ನೀವು ನನ್ನ ಸ್ವಾಮಿ, ನನ್ನ ಪತಿ ಮತ್ತು ಪ್ರಭು, ಮತ್ತು ನಾನು ನಿಮ್ಮ ಸೇವಕಿ. ನೀವು ಕೆಲಸಮಯ ಬೇರೆ ದಿಶೆಯಲ್ಲಿ ಕಾರ್ಯನಿರತರಾಗಿದ್ದಿರಬಹುದು, ಅದರಲ್ಲಿ ಹಾನಿಯಾದದ್ದಾದರೂ ಏನು? ಅದರಲ್ಲಿ ನಿಮ್ಮ ತಪ್ಪೇನಿದೆ? ಶಾಸ್ತ್ರಗಳು ಮತ್ತು ಈ ಸಮಾಜ ನಿಮಗೆ ಆ ಹಕ್ಕನ್ನು ನೀಡಿರುವುದರಿಂದ, ನಿಮ್ಮ ಯಾವ ಕ್ರಿಯೆಯೂ ಪರಿಗಣನೆಗೆ ಬರುವುದಿಲ್ಲ.

ನಿಮ್ಮ ಕಡೆಯಿಂದ ಯಾವುದೇ ಅಪರಾಧವಾಗಲೀ, ಪಾಪವಗಲೀ ಸಂಭವಿಸಿಲ್ಲ. ನೀವು ಯಾವ ತಪ್ಪನ್ನೂ ಮಾಡಲಿಲ್ಲ. ನಾನು ನಿಜವಾದ ಅಪರಾಧಿ, ತುಚ್ಛತನವಿರುವುದು ನನ್ನಲ್ಲಿ. ದೋಷವು ಸಂಪೂರ್ಣವಾಗಿ ನನ್ನಲ್ಲಿರುವುದು. ಅಗಲಿಕೆಗೆ ನೀವು ಜವಾಬ್ದಾರರಲ್ಲದಿರುವಾಗ ನೀವೇಕೆ ನಿಮ್ಮನ್ನು ದೋಷಿ, ಅಪರಾಧವನ್ನೆಸಗಿರುವೆ ಎಂದು ಭಾವಿಸುತ್ತೀರಿ? ನಿಮ್ಮ ಅಗಲಿಕೆಯ ನೋವಿನಿಂದ ಸಾಯದೇ ಇನ್ನೂ ಈ ದೇಹವನ್ನು ಉಳಿಸಿಕೊಂಡಿರುವುದು ನಾನೇ ಅಪರಾಧಿ ಎನ್ನುವುದಕ್ಕೆ ಸಕಾರಾತ್ಮಕ ಪುರಾವೆಯಾಗಿರುತ್ತದೆ. ಈ ಪ್ರಪಂಚಕ್ಕೆ ನಾನು ನನ್ನ ಮುಖವನ್ನು ತೋರಿಸುತ್ತಿದ್ದೇನೆ, ಆದರೆ, ನಿಮಗೆ ನಾನು ನಿಷ್ಠಳಾಗಿಲ್ಲ, ನಿಮ್ಮ ಪ್ರೇಮಕ್ಕೋಸ್ಕರ ಕಾಪಾಡಿಕೊಳ್ಳಬೇಕಾಗಿದ್ದ ನಿಷ್ಠೆಯ ಗುಣಮಟ್ಟವನ್ನು ನಾನು ಸಮೀಪಿಸಲಾಗಲಿಲ್ಲ. ಹಾಗಾಗಿ ನಾನು ಅಪರಾಧಿ, ನೀವಲ್ಲ. ಪತ್ನಿಯು ಯಾವಾಗಲೂ ಪತಿಗೆ ಕೃತಜ್ಞಳಾಗಿರಬೇಕು ಮತ್ತು ಪ್ರತ್ಯೇಕವಾಗಿ ನಿಷ್ಠೆಯಿಂದಿರಬೇಕೆಂದು ವೇದಶಾಸ್ತ್ರಗಳಲ್ಲಿ ಸಾಧು ಸಂತರು ಬರೆದಿದ್ದಾರೆ. ಹಾಗಾಗಿ, ಈ ಭೇಟಿಯಲ್ಲಿ ನಾನು ನಿಮ್ಮ ಕಾಲಿಗೆ ಬಿದ್ದು ಕ್ಷಮೆಯನ್ನು ಯಾಚಿಸಬೇಕು, ಏಕೆಂದರೆ ನನಗೆ ನಿಮ್ಮಲ್ಲಿ ಪ್ರೀತಿಯಿಲ್ಲದಿರುವುದು ನನ್ನ ದೋಷ. ದೋಷಿಯಾಗಿ ನಾನು ನನ್ನ ದೇಹವನ್ನು ಕಾಪಾಡಿಕೊಂಡಿದ್ದೇನೆ, ಮತ್ತು ನನ್ನ ಮುಖವನ್ನು ಸಮಾಜಕ್ಕೆ ತೋರಿಸಿಕೊಂಡಿದ್ದೇನೆ. ನಾನು ನಿಮಗೆ ಸರಿಯಾದ ಸಂಗಾತಿಯಲ್ಲ, ಹಾಗಾಗಿ ದಯವಿಟ್ಟು ನೀವು ನನ್ನನ್ನು ಕ್ಷಮಿಸಿ. ಬದಲಾಗಿ ನೀವೇಕೆ ನನ್ನಲ್ಲಿ ಕ್ಷಮೆಯನ್ನು ಯಾಚಿಸುತ್ತಿರುವಿರಿ? ಇದು ಪರಿಸ್ಥಿತಿಗೆ ವಿರುದ್ಧವಾಗಿದೆ, ಹಾಗೆ ಮಾಡಬೇಡಿ!"

## ಪರಿಮಿತವು ಅಪರಿಮಿತತೆಯನ್ನು ಸಮೀಪಿಸುತ್ತದೆ

ಈ ಮನೋಭಾವ ನಮ್ಮ ಪ್ರೇಮದ ಧ್ಯೇಯವಾಗಿರಬೇಕು. ನಾವು, ಪರಿಮಿತರು, ಅಪರಿಮಿತದೊಡನೆ, ಈ ಧೋರಣೆಯನ್ನು ರೂಢಿಸಿಕೊಳ್ಳಬೇಕು. ಯಾವುದೇ ಒಂದು ಸಮಯದಲ್ಲಿ ಅವನು ಸ್ವಲ್ಪಮಾತ್ರ ಲಕ್ಷ್ಯವನ್ನು ನಮ್ಮೆಡೆಗೆ ಹರಿಸಬಹುದು. ಆದರೆ ನಾವು ಎಲ್ಲ ಕಾಲದಲ್ಲಿಯೂ ನಮ್ಮ ಲಕ್ಷ್ಯವನ್ನು ಸಂಪೂರ್ಣವಾಗಿ ಅವನಲ್ಲಿ ಕೇಂದ್ರೀಕರಿಸಿರಬೇಕು. ಇದಲ್ಲದೇ ಯಾವುದೇ ಗತ್ಯಂತರವಿಲ್ಲ. ಹಾಗಾಗಿ ಕೃಷ್ಣನಲ್ಲಿ ನಮ್ಮ ಪ್ರತ್ಯೇಕ ಭಕ್ತಿಯು ಏಕಾಗ್ರವಾಗಿರಬೇಕು. ನಾವು ನಿಕೃಷ್ಟರಾಗಿರುವುದರಿಂದ ನಮ್ಮ ಧೋರಣೆ ಈ ತರಹದ್ದಾಗಿರಬೇಕೆಂದು ಶ್ರೀ ಚೈತನ್ಯ ಮಹಾಪ್ರಭುಗಳು ಉಪದೇಶಿಸುತ್ತಾರೆ.

ನಮಗೆ ಕೃಷ್ಣಪ್ರೇಮದಂತಹ ಉತ್ಕೃಷ್ಟ ವಸ್ತು ಬೇಕೆಂದಿದ್ದರೆ, ನಾವು ತುಚ್ಛವಾಗಿ ನಡೆಸಿಕೊಳ್ಳಲ್ಪಡುವುದು ಅನೀತಿಯೇನಲ್ಲ. ನಮ್ಮ ಭವಿಷ್ಯ, ಮನವರಿಕೆ ಮತ್ತು ಹೊಂದಾಣಿಕೆಗಳು; ಆತ್ಮಸಮರ್ಪಣೆ ಮತ್ತು ಸ್ವನಿರ್ಲಕ್ಷ್ಯತೆಯ ಪ್ರತೀಕಗಳಾಗಿರಬೇಕು. ಒಬ್ಬನು ತನ್ನ ದೇಶಕ್ಕೋಸ್ಕರ ಸಂಗ್ರಾಮದಲ್ಲಿ ಹೋರಾಡುವಾಗ ಯಾವ ಮನೋಭಾವವನ್ನು ಹೊಂದಿರುತ್ತಾನೆಯೋ ಹಾಗೆ; ಅಲ್ಲಿ ಐಷಾರಾಮ ಮತ್ತು ಅತಿಯಾದ ಬಯಕೆಗಳಿಗೆ ಅವಕಾಶವಿರುವುದಿಲ್ಲ.

ಇದಕ್ಕೆ ಸಂಬಂಧಿಸಿದಂತೆ ಒಂದು ಸನ್ನಿವೇಶ ನೆನಪಾಗುತ್ತದೆ. ಗಾಂಧಿಯವರು ಅಹಿಂಸಾಸೇನೆಯನ್ನು ಕಟ್ಟಿದಾಗ ಒಬ್ಬ ಸ್ವಯಂಸೇವಕ "ದಯವಿಟ್ಟು ಸ್ವಲ್ಪ ಚಹಾಕ್ಕೆ ವ್ಯವಸ್ಥೆಮಾಡಿ" ಎಂದು ಕೇಳಿದ; ಅದಕ್ಕೆ ಗಾಂಧಿಯವರು "ಕುಡಿಯಲಿಕ್ಕೆ ನದಿಯಿಂದ ನೀರನ್ನು ಸರಬರಾಜುಮಾಡುತ್ತೇವೆ, ಚಹಾದ ವ್ಯವಸ್ಥೆ ಮಾಡಲಾಗದು, ಇದಕ್ಕೆ ಸಿದ್ಧರಿದ್ದರೆ ನೀವು ಮುಂದೆಬನ್ನಿ" ಎಂದರು.

ನಾವು ನಮ್ಮನ್ನು ವೃಂದಾವನದ ಕೃಷ್ಣಲೀಲೆಗೆ ಸಂಪರ್ಕಿಸಿಕೊಳ್ಳಬೇಕೆಂದಿದ್ದರೆ, ಯಾವುದೇ ಶರತ್ತುಗಳನ್ನು ಮುಂದಿಡುವಂತಿಲ್ಲ. ಆಗ ನಾವು ಮಹಾಪ್ರಭುಗಳು ಶಿಫಾರಸುಮಾಡಿದ, ಹುಲ್ಲಿನ ಎಸಳಿಗಿಂತಲೂ ಮಿಗಿಲಾದ ನಮ್ರತೆಯ ಧೋರಣೆಯನ್ನು ಅರ್ಥೈಸಿ ಕೊಳ್ಳಬಹುದು. ನಮ್ಮ ಕಡೆಯಿಂದ ಯಾವ ದೂರೂ ಇರಬಾರದು. ನಮ್ಮ ಪ್ರಸಕ್ತ ಲೌಕಿಕ ಸ್ಥಾನಮಾನಗಳನ್ನು ಹೊಂದಿಕೊಂಡು ಮಾತ್ರವಲ್ಲ, ನಮ್ಮ ಶಾಶ್ವತವಾದ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದಂತೆ ತಲೆದೋರುವ ಯಾವತ್ತೂ ದೂರುಗಳನ್ನು ಕೂಡಾ ಜಾಗ್ರತೆಯಾಗಿ ಹೊರಗಟ್ಟಬೇಕು ಮತ್ತು ಮಹಾಪ್ರಭುಗಳು ತೋರಿಸಿದ ಮಾರ್ಗವನ್ನು ಸಂಪೂರ್ಣವಾಗಿ ಅನುಸರಿಸಬೇಕು. ಕೃಷ್ಣ ನಮ್ಮನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಬಹುದು; ನಾವು ಅಪಾಯವನ್ನು ಎದುರುಹಾಕಿಕೊಳ್ಳಲೇಬೇಕು, ಆವಾಗ ಮಾತ್ರ ಮುನ್ನಡೆ ಸಾಧ್ಯ.

## ನೋವಿನಲ್ಲೂ ನಲಿವು

ಒಂದಲ್ಲ ಒಂದು ರೀತಿಯಲ್ಲಿ, ಕೃಷ್ಣನ ಸೇವಕರ ಗೊಂಪಿನೊಳಗೆ ನಾವು ಪ್ರವೇಶಿಸಲು ಸಾಧ್ಯವಾದರೆ, ಅಲ್ಲಿ ನಾವು ಪ್ರತಿಯೊಬ್ಬರಲ್ಲಿಯೂ ಈ ಸ್ವಭಾವವನ್ನು ಕಾಣಬಹುದು. ಅವರು ಪರಸ್ಪರ ಭೇಟಿಯಾದಾಗ ಅವರವರ ಗುಂಪಿನ ಸದಸ್ಯರನ್ನು ಸಂತೈಸುವುದನ್ನು

ನಾವು ನೋಡ ಬಹುದು. ಬೇರೆ ಬೇರೆ ಸಂಬಂಧಗಳಲ್ಲಿ ಸೇವೆಯನ್ನು ಕೈಗೊಳ್ಳುವ ಬೇರೆ ಬೇರೆ ವಿಭಾಗಗಳಲ್ಲಿ ಸಮಾನ ಸ್ವಭಾವದ ಸದಸ್ಯರು ಕೃಷ್ಣನಿಗೆ ಸಂಬಂಧಿಸಿದ ಮಾತುಗಳಿಂದ ಪರಸ್ಪರ ಸಂತೈಸಿಕೊಳ್ಳುವುದನ್ನು ನೋಡಬಹುದು. ಭಗವದ್ಗೀತೆಯ ಹತ್ತನೇ ಅಧ್ಯಾಯದ ಒಂಭತ್ತು ಮತ್ತು ಹನ್ನೊಂದನೆಯ ಶ್ಲೋಕಗಳಲ್ಲಿ ಕೃಷ್ಣ ಹೀಗೆ ಹೇಳುತ್ತಾನೆ.

ಮಚ್ಚಿತ್ತಾ ಮದ್ಗತಾ ಪ್ರಾಣಾ
ಬೋಧಯಂತಃ ಪರಸ್ಪರಮ್ ।
ಕಥಯಂತಶ್ಚ ಮಾಮ್ ನಿತ್ಯಮ್
ತುಷ್ಯಂತಿ ಚ ರಮಂತಿ ಚ ॥

ನನ್ನ ಭಕ್ತರು ಪರಸ್ಪರ ಒಂದುಗೂಡುತ್ತಾರೆ, ನನ್ನಬಗ್ಗೆ ಮಾತನಾಡುತ್ತಾರೆ, ಮತ್ತು ತಂತಮ್ಮ ಮನಸ್ಸುಗಳಿಗೆ ಸಾಂತ್ವನ ನೀಡುವ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ನನ್ನ ಬಗೆಗಿನ ಈ ಮಾತುಕತೆಗಳೇ ಅವರ ಆಹಾರವೋ ಎಂಬಂತೆ ಅವರು ಬದುಕುತ್ತಾರೆ.ಇದು ಅವರಿಗೆ ಅತ್ಯುನ್ನತವಾದ ಆನಂದವನ್ನು ನೀಡುತ್ತದೆ ಮತ್ತು ಅವರು ಪರಸ್ಪರ ನನ್ನ ಬಗ್ಗೆ ಮಾತನಾಡುವಾಗ, ಅಲ್ಲಿ ನನ್ನ ಪ್ರತ್ಯಕ್ಷ ಉಪಸ್ಥಿತಿಯನ್ನು ಅವರು ಆನಂದಿಸುತ್ತಿರವ ಭಾವದಲ್ಲಿರುವಂತೆ ಕಂಡುಬರುತ್ತಾರೆ.

ತೇಷಾಮೇವಾನುಕಂಪಾರ್ಥಮ್
ಅಹಂ ಅಜ್ಞಾನಜಂ ತಮಃ ।
ನಾಶಯಾಮ್ಯಾತ್ಮ ಭಾವಸ್ಥೋ
ಜ್ಞಾನದೀಪೇನ ಭಾಸ್ವತಾ ॥

ಯಾವಾಗ ನನ್ನ ಅಗಲಿಕೆಯ ಭಾವವು ಭಕ್ತರಲ್ಲಿ ತೀವ್ರವಾಗುತ್ತದೋ, ಆವಾಗ ನಾನು ಅವರಲ್ಲಿ ಅನುಕಂಪಿತನಾಗಿ, ತಕ್ಷಣ ಅವರಮುಂದೆ ಪ್ರತ್ಯಕ್ಷನಾಗುತ್ತೇನೆ ಮತ್ತು ನನ್ನ ಅಗಲಿಕೆಯಿಂದ ಅವರಲ್ಲಿ ಉಂಟಾದ ನೋವೆಂಬ ಅಂಧಕಾರವನ್ನು ಹೋಗಲಾಡಿಸಿ, ಅವರಲ್ಲಿರುವ ಮಿಲನದ ದಾಹವನ್ನು ತಣಿಸಿ, ನನ್ನ ಉಪಸ್ಥಿತಿಯಿಂದ ಅವರ ಹೃನ್ಮನಗಳನ್ನು ಬೆಳಗಿಸುತ್ತೇನೆ.

ಶಿಕ್ಷಾಷ್ಟಕದ ಈ ಕೊನೆಯ ಶ್ಲೋಕದಲ್ಲಿ ಚೈತನ್ಯ ಮಹಾಪ್ರಭುಗಳು ಇನ್ನೊಂದು ಅತ್ಯುತ್ತಮ ಹಾಗೂ ಶ್ರೇಷ್ಠ ಸಮಾಧಾನವನ್ನು ಸೂಚಿಸಿದ್ದಾರೆ.

ಬಾಹ್ಯೇ ವಿಷಜ್ವಾಲಾ ಹಯ ಭೀತರೇ ಆನಂದಮಯ
ಕೃಷ್ಣಪ್ರೇಮಾರ ಅಭೂತ ಚರಿತ
ಚೈತನ್ಯಚರಿತಾಮೃತ ಮಧ್ಯ(೨–೫೦)

"ಹೆದರಬೇಡಿ, ಹೊರಗಿನಿಂದ ನೀವು ಅಗಲಿಕೆಯ ವೇದನೆಯನ್ನು ಅನುಭವಿಸುತ್ತಿರಬಹುದು, ಆದರೆ, ಒಳಗಿನಿಂದ, ಸರಿಸಾಟಿಯಿಲ್ಲದ ಒಂದು ರಸವನ್ನು ಅನುಭವಿಸುವಿರಿ. ಶಾಂತಿ,ಸಂತೋಷ ಮತ್ತು ಆನಂದಪರವಶತೆಗಳನ್ನೊಳಗೊಂಡ ಒಂದುರೀತಿಯ ಆಪ್ಯಾಯತೆಯ ಭಾವವನ್ನು ಹೊಂದುವಿರಿ. ಹೊರಗಿನಿಂದ ಅಗಲಿಕೆಯ ವೇದನೆಯಿರಬಹುದು ಆದರೆ ಒಳಗೆ ಅತ್ಯುನ್ನತ ಸಂತೃಪ್ತಿಯಿರುತ್ತದೆ".

ಈ ಮೂಲಕ ನಾವು ಶಾಸ್ತ್ರಗಳಿಂದ ಉಪದೇಶಿಸಲ್ಪಟ್ಟಿದ್ದೇವೆ ಮತ್ತು ನಮ್ಮ ಕ್ರಿಯಾತ್ಮಕ ಅನುಭವಗಳು ಇಂತಹ ಸೂಕ್ಷ್ಮ ವಿಚಾರಗಳಲ್ಲಿ ನಮ್ಮ ಶ್ರದ್ಧೆಯನ್ನು ಸಮರ್ಥಿಸುತ್ತವೆ. ಶೆಲ್ಲಿ ಎಂಬ ಆಂಗ್ಲಕವಿ ಬರೆದಿದ್ದಾನೆ:–

ನಮ್ಮ ಅತ್ಯಂತ ಪ್ರಾಮಾಣಿಕ ನಗು ಕೆಲವು ನೋವುಗಳಿಂದ ಪರಿಪೂರ್ಣ, ಅತ್ಯಂತ ವಿಷಾದದ ವಿಚಾರಗಳನ್ನು ಹೇಳುವಂತಹವೇ ಅತ್ಯಂತ ಸವಿಯಾದ ಗೀತೆಗಳು.

ಚರಿತ್ರೆಗಳಲ್ಲಿ ನಾವು ಕಥಾನಾಯಕ ಮತ್ತು ಕಥಾನಾಯಕಿಯ ನಡುವಿನ ಅಗಲಿಕೆಯ ಕ್ರೂರ ಸನ್ನಿವೇಶಗಳನ್ನು ಓದುವಾಗ ಕಣ್ಣೀರಿಟ್ಟರೂ, ಆ ಪುಸ್ತಕವನ್ನು ಬಿಡಲಾರದಷ್ಟು ಆಂತರಿಕ ತೃಪ್ತಿಯನ್ನು ಅನುಭವಿಸುತ್ತೇವೆ. ಶ್ರೀರಾಮಚಂದ್ರನು ಸೀತಾದೇವಿಯನ್ನು, ಅವರು ಗರ್ಭಿಣಿಯಾಗಿದ್ದರೂ ಪರಿಗಣಿಸದೇ ಗಡಿಪಾರುಮಾಡಿ ಕಾಡಿಗಟ್ಟಿದ ಕ್ರೂರ ಸನ್ನಿವೇಶವನ್ನು ಮತ್ತು ಸ್ವಯಂ ಶ್ರೀರಾಮಚಂದ್ರ ಮತ್ತು ಸೀತಾದೇವಿ ಪ್ರತ್ಯೇಕವಾಗಿ ಅನುಭವಿಸಿದ ಅಗಲಿಕೆಯ ನೋವನ್ನು ಓದಿದಾಗ ಅಥವಾ ಕೇಳಿದಾಗ ವಿಷಾದದಿಂದ ಕಣ್ಣೀರು ಹಾಕುತ್ತೇವೆ. ಅದಾಗ್ಯೂ, ನಮಗೆ ಅವಕಾಶ ಸಿಕ್ಕಿದಾಗ ಮತ್ತೆ ಮತ್ತೆ

ಅದೇ ಸನ್ನಿವೇಶದ ಕಥಾನಕಗಳನ್ನು ಬಹು ಆಸಕ್ತಿಯಿಂದ ಓದಿ ಅಥವಾ ಕೇಳಿ ಸಂತೋಷಪಡುತ್ತೇವೆ. ನೋವಿನಲ್ಲೂ ನಲಿವಿದೆ ! ಇದು ಸಾಧ್ಯ.

ಕೃಷ್ಣನಿಂದ ಅಗಲಿಕೆ ಅಂದರೆ ಹಾಗೆ, ಬಾಹ್ಯವಾಗಿ ನಾವು ತೀವ್ರವಾದ ನೋವನ್ನು ಅನುಭವಿಸುತ್ತೇವೆ, ಲಾವಾರಸದಂತೆ, ಅದು ಹೊರಕ್ಕೆ ಹರಿಯುತ್ತಿದ್ದರೂ, ನಮ್ಮ ಅಂತರಂಗವು ವಿಶಿಷ್ಟವಾದ ಆನಂದಪರವಶತೆಯಿಂದ ತುಂಬಿಕೊಂಡಿರುತ್ತದೆ. ಅದೇ ಕೃಷ್ಣನಿಂದ ಅಗಲಿಕೆಯ ವೈಶಿಷ್ಟ್ಯತೆ. ಇದನ್ನೇ ಚೈತನ್ಯ ಮಹಾಪ್ರಭುಗಳು ನಮಗೆ ಪ್ರದಾನಿಸಿದ್ದಾರೆ. ಎಷ್ಟರಮಟ್ಟಿಗೆ ನಾವು ಅವರ ಉಪದೇಶಗಳನ್ನು ಅರ್ಥೈಸಿ ಕೊಳ್ಳಬಲ್ಲೆವೋ, ಅಷ್ಟರಮಟ್ಟಿಗೆ ನಾವು ಆ ಪ್ರಕಾರದ ಬದುಕಿಗೆ ನಮ್ಮನ್ನು ಸಜ್ಜುಗೊಳಿಸಬಲ್ಲೆವು. ಇದುವೇ ವೃಂದಾವನಕ್ಕೆ ನಮ್ಮ ರಹದಾರಿಯಾಗಿರುತ್ತದೆ. ಅಲ್ಲಿ ನಮ್ಮಂತಹ ಇನ್ನೂ ಹಲವು ಭಕ್ತರೊಂದಿಗೆ ನಾವು ಪರಿಚಯಿಸಲ್ಪಟ್ಟಾಗ ನಮ್ಮ ಆನಂದಕ್ಕೆ ಎಣೆಯೇ ಇರುವುದಿಲ್ಲ. ಯಾವಾಗ ನಾವು ನಮ್ಮಂತಹ ಸಮಾನಮನೋಭಾವವನ್ನು ಹೊಂದಿದ ಇತರರನ್ನು ಭೇಟಿಮಾಡುತ್ತೇವೋ, ಆವಾಗ ಅವರಿಂದ ನಾವು ಸಾಂತ್ವನವನ್ನು ಪಡೆಯುತ್ತೇವೆ. ನಾವು ಯಾವುದಕ್ಕೂ ಭಯಪಡಬೇಕಾದ ಅಗತ್ಯವಿಲ್ಲ. ಅದಾಗ್ಯೂ, ನಾವು ದೃಢವಾಗಿ ಅರ್ಥೈಸಿಕೊಳ್ಳ ಬೇಕಾಗಿರುವುದೇನೆಂದರೆ, ನಾವು ಹೋಗಬೇಕೆಂದಿರುವ ಕೃಷ್ಣನ ಧಾಮವೇ ನಮ್ಮ ನಿಜವಾದ ಮನೆ ಎಂಬುದನ್ನು, ಮತ್ತು ನಾವು ಹಿಂತಿರುಗಿ ನಮ್ಮ ಮನೆಗೆ, ಹಿಂತಿರುಗಿ ಭಗವಂತನಲ್ಲಿಗೆ ಹೋಗಲೇಬೇಕು ಎಂಬುದನ್ನು.

ಪ್ರಸಕ್ತ ಈಗ ನಾವು ವಾಸಿಸುತ್ತಿರುವ ಜಗತ್ತಿನಲ್ಲಿ ನಾವು ಪರಕೀಯರು. ಆದರೆ ಅಲ್ಲಿ, ಕೃಷ್ಣನ ಧಾಮದಲ್ಲಿ ನಾವು ಪರಕೀಯರಲ್ಲ. ಇಲ್ಲಿ ನಮ್ಮನ್ನು ವಿವಿಧ ಜನರು ವಿವಿಧರೀತಿಯಲ್ಲಿ ಅವರವರು ಬಯಸಿದಹಾಗೆ ನಡೆಸಿಕೊಳ್ಳುತ್ತಾರೆ. ಆದರೆ ವೃಂದಾವನವು ಉನ್ನತ ಭರವಸೆಯ, ಉಜ್ವಲ ಭವಿಷ್ಯವನ್ನು ಪ್ರದಾನಿಸುವ ಧಾಮವಾಗಿದೆ. ಇದು ಅಂತರಂಗಕ್ಕೆ ತೃಪ್ತಿಯನ್ನು ಒದಗಿಸುವ ಕ್ಷೇತ್ರವಾಗಿದೆ. ನಮ್ಮ ನೈಜ ಬದುಕಿನ, ಶಾಶ್ವತ ನಿವಾಸಕ್ಕೆ ತೆರಳುವ ನಮ್ಮ ಬಯಕೆಯನ್ನು ಜಾರಿಯಲ್ಲಿಡಬೇಕು. ನಿಜವಾದ ಆನಂದ ಮತ್ತು ಭಾವಪರವಶತೆ ಎಂದರೇನೆಂಬುದರ ಪರಿಚಯ ನಮಗಿಲ್ಲದಿರುವುದೇ ನಮ್ಮ ಪ್ರಸಕ್ತ ಸಮಸ್ಯೆ. ಹಾಗಿದ್ದಾಗ್ಯೂ, ಕೃಷ್ಣಪ್ರಜ್ಞೆಯಲ್ಲಿ ನಾವು ಮುನ್ನಡೆ ಸಾಧಿಸುತ್ತಿದ್ದಂತೆಯೇ ಕಾರ್ಯರೂಪವಾಗಿ ನೈಜ ಆನಂದ ಮತ್ತು

ಭಾವಪರವಶತೆ, ನೈಜ ಸೌಂದರ್ಯ ಮತ್ತು ಆಕರ್ಷಣೆಯ ಅನುಭವಗಳು ನಮಗೆ ಉಂಟಾಗುತ್ತವೆ. ಇದರಿಂದ ನಮಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ ಮತ್ತು ನಾವು ಇದರಿಂದ ಉತ್ತೇಜಿತರಾಗುತ್ತೇವೆ.

ಯಮುನಾಚಾರ್ಯರೆಂಬ ಸಂತರು ಹೇಳುತ್ತಾರೆ:–

ಯದವಧಿ ಮಮ ಚೇತಃ ಕೃಷ್ಣ ಪದಾರವಿಂದೆ
ನವನವರಸಧಾಮನಿ ಉದ್ಯತಂ ರಂತುಮಾಸೀತ್ ।
ತದವಧಿ ಬತ ನಾರೀಸಂಗಮೇ ಸ್ಮರ್ಯಮಾಣೆ
ಭವತಿ ಮುಖವಿಕಾರಃ ಸುಷ್ಠು ನಿಷ್ಠೀವನಂ ಚ ॥

"ವೃಂದಾವನದ ಕೃಷ್ಣಪ್ರೇಮದ ಸಂಪರ್ಕಕ್ಕೆ ಬರುವವರೆಗೂ, ಲೌಕಿಕ ಸುಖಾನುಭವಕ್ಕೆ ನಾನು ಬಹಳ ಪ್ರಾಮುಖ್ಯತೆಯನ್ನು ನೀಡುತ್ತಿದ್ದೆ; ಆದರೆ ಈಗ, ಯಾವುದೇ ಲೌಕಿಕ ರುಚಿಯು ನನಗೆ ನೆನಪಾದೊಡನೆ ನನ್ನ ಮುಖವು ವಿಕಾರಗೊಳ್ಳುತ್ತದೆ, ಮತ್ತು ನಾನು ಆ ನೆನಪಿಗೆ ಥೂ ಎಂದು ಉಗಿಯುತ್ತೇನೆ".

ಆದ್ದರಿಂದ ಲವಮಾತ್ರ ಕೃಷ್ಣಪ್ರೇಮದ ಆನಂದದ ಅನುಭವವಾದರೆ, ಈ ಜಗತ್ತಿನ ಎಷ್ಟೇ ಉನ್ನತ ಆನಂದ ಅಥವಾ ಎಷ್ಟೇ ಶಾಂತಿತರುವ ವಿಷಯವಾದರೂ ಅದಕ್ಕೆ ಸಮನಾಗಲಾರದು ಎಂಬ ನಿರ್ಣಯಕ್ಕೆ ನಾವು ಬರುತ್ತೇವೆ. ಅದೇವೇಳೆ, ಆ ಒಂದು ಮನೋಭಾವದಲ್ಲಿ ಸ್ಥಿತರಾಗಿದ್ದರೆ, ಯಾವುದೇ ರೀತಿಯ ನೋವು ಅಥವಾ ಸಂಕಟಗಳೂ ನಮ್ಮನ್ನು ವಿಚಲಿತಗೊಳಿಸಲಾರವು ಎಂಬುದು ಕೂಡಾ ಸತ್ಯ.

## ನಾನು ನನ್ನ ಭಕ್ತರ ಆಧೀನ

ಈ ಮೂಲಕ ನಾವು ಕೃಷ್ಣನಿಂದ ನೋವುಭರಿತ ಅಗಲಿಕೆಗೆ ಸಜ್ಜಾಗಿರಬೇಕು ಎಂದು ಉಪದೇಶಿಸಲ್ಪಟ್ಟಿದ್ದರೂ, ನೈಜತೆಯು ಯಥಾರ್ಥವಾಗಿ ಅಷ್ಟೇನೂ ಕ್ರೂರವಲ್ಲ. ಕೃಷ್ಣಪ್ರೇಮಕ್ಕೆ ಇನ್ನೊಂದು ಮುಖವೂ ಉಂಟು. ಕೃಷ್ಣ ಹೇಳುತ್ತಾನೆ, "ಮಯಿತೇ ತೇಷು ಚಾಪ್ಯಹಮ್ – ನಾನು ಎಂದಿಗೂ ನನ್ನ ಭಕ್ತರೊಡನಿರುತ್ತೇನೆ". ಎಲ್ಲೆಲ್ಲಿ ಒಬ್ಬ ಪ್ರಮುಖ ಭಕ್ತನಿರುತ್ತಾನೆ, ಅಲ್ಲಿ ಅವನ ನೆರಳಿನಂತೆ ಕೃಷ್ಣನಿರುತ್ತಾನೆ. ಅಗೋಚರನಾಗಿದ್ದು ಅವನನ್ನು ಹಿಂಬಾಲಿಸುತ್ತಿರುತ್ತಾನೆ. ಇದು ಭಗವಂತನ ಸ್ವಭಾವ.

ಭಗವಂತ ದೂರ್ವಾಸ ಮುನಿಗೆ ಹೇಳುತ್ತಾನೆ:–

ಅಹಂ ಭಕ್ತ ಪರಾಧೀನೊ
ಹಿ ಅಸ್ವತಂತ್ರ ಇಹ ದ್ವಿಜ ।
ಸಾಧುಭಿರ್ ಗ್ರಸ್ತಹೃದಯೋ
ಭಕ್ತೈರ್ ಭಕ್ತಜನಪ್ರಿಯಃ ॥

"ನಾನು ಭಕ್ತರ ಗುಲಾಮನಾಗಿದ್ದೇನೆ; ಅವರ ಸಂಕಲ್ಪದ ಹೊರತು ನನಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಏಕೆಂದರೆ ಅವರು ಸಂಪೂರ್ಣ ಪರಿಶುದ್ಧರು ಮತ್ತು ನನ್ನಲ್ಲಿ ಭಕ್ತಿಯುಳ್ಳವರು. ನನ್ನ ಹೃದಯವು ಅವರಿಂದ ನಿಯಂತ್ರಿತವಾಗಿದೆ ಮತ್ತು ನಾನು ಸದಾ ಅವರ ಹೃದಯದಲ್ಲಿ ನೆಲೆಸಿರುತ್ತೇನೆ. ನಾನು ಕೇವಲ ನನ್ನ ಭಕ್ತರಿಗೆ ಮಾತ್ರವಲ್ಲ, ನನ್ನ ಭಕ್ತರ ಭಕ್ತರಿಗೂ ಆಧೀನನಾಗಿದ್ದೇನೆ. ನನ್ನ ಭಕ್ತರ ಸೇವಕರೂ ಕೂಡ ನನಗೆ ಸಮಾನವಾಗಿ ಪ್ರಿಯರು".

ಯಾವುದೇ ತರಹದ ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸಲು ನಾವು ಸಿದ್ಧರಿರಬೇಕು ಮತ್ತು ಅವುಗಳಿಂದ ವಿಚಲಿತರಾಗಬಾರದು. ಕೃಷ್ಣ ಅತ್ಯಂತ ವಾತ್ಸಲ್ಯಮಯಿ, ನಮ್ಮಲ್ಲಿ ಅವನ ಮಮತೆ ಅತ್ಯಂತ ಪರಿಶುದ್ಧವಾದದ್ದು ಮತ್ತು ಪ್ರಾಮಾಣಿಕವಾದದ್ದು. ನಮ್ಮಲ್ಲಿ ಅವನಿಗಿರುವ ಮಮತೆಗೆ ಯಾರೂ ಪ್ರತಿಸ್ಪರ್ಧಿಗಳಿಲ್ಲ. ಹಾಗಿದ್ದಾಗ್ಯೂ, ಚೈತನ್ಯಮಹಾಪ್ರಭುಗಳು ಶಿಕ್ಷಾಷ್ಟಕದ ಎಂಟನೇ ಶ್ಲೋಕದ ಮೂಲಕ ನಮಗೊಂದು ಎಚ್ಚರಿಕೆ ನೀಡಿದ್ದಾರೆ. ನೀವು ಕೃಷ್ಣನ ಹುಡುಕಾಟದಲ್ಲಿರುವುದಾದರೆ; ಕೃಷ್ಣ, ನೀವು ಬೇಕೆಂದಾಗ ಮಾರುಕಟ್ಟೆಯಲ್ಲಿ ಪದೇಪದೇ ಖರೀದಿಸಿ ಮುಗಿಸಬಹುದಾದ ಸಿಹಿತಿಂಡಿಯಲ್ಲ ಎಂಬುದನ್ನು ನೆನಪಿಡಿ. ನೀವು ಅತಿ ಉನ್ನತವಾದ ವಿಷಯವನ್ನುಗಳಿಸಲು ಹೊರಟಿರುವಿರಿ, ಆದ್ದರಿಂದ ನೀವು ಏನನ್ನುಬೇಕಾದರೂ ಎದುರಿಸಲು ಸಿದ್ಧರಿರಬೇಕು.

ಅದೇವೇಳೆ ಇತರ ಭಕ್ತರು ನಮ್ಮ ಪ್ರೋತ್ಸಾಹಕ್ಕೆ ಬರುತ್ತಾರೆ. ಭಯಪಡಬೇಡಿ, ನಾವೆಲ್ಲರೂ ನಿಮ್ಮಂತೆಯೇ. ಎಲ್ಲರೂ ಒಂದುಗೂಡಿ ನೇರವಾದ ದಾರಿಯಲ್ಲಿ ಮುಂದುವರಿಯೋಣ. ಹೆದರಬೇಡಿ, ನಾವಿದ್ದೇವೆ ಎಂದು ನಮ್ಮನ್ನು ಪ್ರೋತ್ಸಾಹಿಸುತ್ತಾರೆ.

ಕೃಷ್ಣನ ಭಕ್ತರು ಕೃಷ್ಣನಿಂದಲೂ ಹೆಚ್ಚು ಕರುಣೆಯುಳ್ಳವರು ಎಂದು ಹೇಳಲಾಗಿದೆ. ಅವರೇ ನಮ್ಮ ಸೌಭಾಗ್ಯ ಮತ್ತು ಬದುಕಿನ ಸಮಾಧಾನವಾಗಿರುತ್ತಾರೆ.

"ಮದ್ಭಕ್ತಾನಾಂ ಚ ಯೇ ಭಕ್ತಾಃ ಯಾರು ನನ್ನ ಭಕ್ತರ ಸೇವಕರೋ ಅವರೇ ನನ್ನ ನಿಜವಾದ ಭಕ್ತರು ಎಂದು ಕೃಷ್ಣನೇ ಹೇಳಿರುತ್ತಾನೆ. ಸಾಧುಸಂಗವೇ ನಮಗೆ ಅತ್ಯಂತ ಮುಖ್ಯವಾದದ್ದು ಮತ್ತು ಅತ್ಯಂತ ಅಮೂಲ್ಯವಾದದ್ದು. ನಾವು ಕೃಷ್ಣಪ್ರಜ್ಞೆಯಲ್ಲಿ ಮುನ್ನಡೆ ಸಾಧಿಸಲು ಸಾಧುಸಂಗವೇ ಪ್ರಮುಖ ಸಾಧನ ಮತ್ತು ದಾರಿದೀಪವಾಗಿರುತ್ತದೆ.

ಸಾಧುಸಂಗ ಸಾಧುಸಂಗ ಸರ್ವಶಾಸ್ತ್ರೆ ಕಯ ।
ಲವಮಾತ್ರ ಸಾಧು ಸಂಗೆ ಸರ್ವಸಿದ್ಧಿ ಹಯ ॥

ಎಂಬ ಚೈತನ್ಯಚರಿತಾಮೃತದ ಮಧ್ಯಲೀಲೆಯ ಇಪ್ಪತ್ತೆರಡನೇ ಅಧ್ಯಾಯದ ಐವತ್ತನಾಲ್ಕನೇ ಶ್ಲೋಕದ ನಿರ್ಣಯಕ್ಕೆ ನಾವು ಬದ್ಧರಾಗಿರಬೇಕು. ಸಾಧು-ಸಂತರ, ಶುದ್ಧಭಕ್ತರ ಸಹಾಯದಿಂದ ಮಾತ್ರ ನಾವು ಪರಿಪೂರ್ಣತೆಯನ್ನು ಸಾಧಿಸಬಹುದು. ಅವರ ಸಂಗವೇ ನಾವು ಅತ್ಯುನ್ನತ ಗುರಿಯನ್ನು ಹೊಂದಲು ಸಹಾಯಕವಾಗುವ ಅತ್ಯಮೂಲ್ಯ ಸಂಪತ್ತು ಎಂದು ಎಲ್ಲ ಶಾಸ್ತ್ರಗಳೂ ಪ್ರಮಾಣೀಕರಿಸಿವೆ.

ಶ್ರೀ ಚೈತನ್ಯ ಮಹಾಪ್ರಭುಗಳು ತಮ್ಮ ಪ್ರಸಿದ್ಧ ಕೃತಿಯಾದ ಶ್ರೀ ಶಿಕ್ಷಾಷ್ಟಕದಲ್ಲಿ ಭಗವಾನ್ ಶ್ರೀ ಕೃಷ್ಣನ ನಾಮದ ಜಪವನ್ನು ಪ್ರಾಮುಖ್ಯತೆಯ ಅತ್ಯುನ್ನತ ಸ್ಥಾನದಲ್ಲಿರಿಸಿದ್ದಾರೆ. ಅಷ್ಟೇ ಅಲ್ಲದೇ, ಶುದ್ಧಭಕ್ತಿಯಿಂದ ಕೂಡಿದ, ಪ್ರೀತಿಪೂರ್ವಕ ಹಾಗೂ ದೋಷರಹಿತವಾದ ಶ್ರೀ ಕೃಷ್ಣನ ಹೆಸರುಗಳ ಜಪವು ಜಗತ್ತಿನ ಎಲ್ಲಾ ಜೀವಶಕ್ತಿಗಳಿಗೆ ಪೌಷ್ಟಿಕತೆಯನ್ನು ನೀಡುವುದಲ್ಲದೇ ಅವುಗಳಿಗೆ ಸಂಪೂರ್ಣ ತೃಪ್ತಿಯನ್ನೂ ನೀಡುವುದು ಎಂದು ಉಪದೇಶಿಸಿದ್ದಾರೆ. ಶುದ್ಧಪ್ರೇಮದ ದಿವ್ಯಧಾಮದ ಒಡೆಯರಾದ ಸ್ವರ್ಣಮೂರ್ತಿ, ಗೌರಾಂಗಸುಂದರ, ಶ್ರೀ ಚೈತನ್ಯ ಮಹಾಪ್ರಭುಗಳಿಗೆ ನನ್ನ ನಮ್ರ ಪ್ರಾರ್ಥನೆಗಳನ್ನು ಸಲ್ಲಿಸುತ್ತೇನೆ.



GOSAI
PUBLISHERS